# ಕರ್ನಾಟಕ ಸರ್ಕಾರ

# ಶಿಕ್ಷಣ ಇಲಾಖೆ

## ವಾರ್ಷಿಕ ವರದಿ
## 2008–09

# ಕರ್ನಾಟಕ ಸರ್ಕಾರ
# ಶಿಕ್ಷಣ ಇಲಾಖೆ


| ಕ್ರಮ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 01 | ಸಚಿವಾಲಯ | |
| 02 | ಆಯುಕ್ತರು, ಸಾರ್ವಜನಿಕ ಶಿಕ್ಷಣ | |
| 03 | ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ | |
| 04 | ಪ್ರೌಢ ಶಿಕ್ಷಣ ನಿರ್ದೇಶನಾಲಯ | |
| 05 | ಮತೀಯ ಮತ್ತು ಭಾಷಾ ಅಲ್ಪ ಸಂಖ್ಯಾತರ ಶಿಕ್ಷಣ ನಿರ್ದೇಶನಾಲಯ | |
| 06 | ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ | |
| 07 | ಪ್ರೌಢ ಪರೀಕ್ಷಾ ಮಂಡಳಿ (ಎಸ್‌ಎಸ್‌ಎಲ್‌ಸಿ) | |
| 08 | ಪ್ರೌಢ ಪರೀಕ್ಷಾ ಮಂಡಳಿ (ಇತರ ಪರೀಕ್ಷೆಗಳು) | |
| 09 | ಸರ್ವ ಶಿಕ್ಷಣ ಅಭಿಯಾನ | |
| 10 | ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ | |
| 11 | ಮಹಿಳಾ ಸಮಾಖ್ಯ | |
| 12 | ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ | |
| 13 | ಲೋಕ ಶಿಕ್ಷಣ ನಿರ್ದೇಶನಾಲಯ | |
| 14 | ವೃತ್ತಿ ಶಿಕ್ಷಣ ನಿರ್ದೇಶನಾಲಯ | |
| 15 | ಸಾರ್ವಜನಿಕ ಗ್ರಂಥಾಲಯಗಳ ನಿರ್ದೇಶನಾಲಯ | |
| 16 | ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ | |

# <u>ಶಿಕ್ಷಣ ಇಲಾಖೆ</u>
# <u>ಸಚಿವಾಲಯ</u>

ಶಿಕ್ಷಣ ಇಲಾಖೆಯು ಈ ಕೆಳಕಂಡ ವಿಭಾಗಗಳನ್ನು ಹೊಂದಿದೆ.

1. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
2. ಉನ್ನತ ಶಿಕ್ಷಣ

**<u>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ:</u>**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಿಭಾಗವು ಈ ಕೆಳಕಂಡ ಅಧೀನ ಇಲಾಖೆಗಳಿಗೆ ಆಡಳಿತ ಪ್ರಾಧಿಕಾರವಾಗಿರುತ್ತದೆ:-

(೧) ಆಯುಕ್ತರು, ಸಾರ್ವಜನಿಕ ಶಿಕ್ಷಣ
(೨) ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ
(೩) ಪ್ರೌಢ ಶಿಕ್ಷಣ ನಿರ್ದೇಶನಾಲಯ
(೪) ಮತೀಯ ಮತ್ತು ಭಾಷಾ ಅಲ್ಪ ಸಂಖ್ಯಾತರ ಶಿಕ್ಷಣ ನಿರ್ದೇಶನಾಲಯ
(೫) ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ
(೬) ಪ್ರೌಢ ಪರೀಕ್ಷಾ ಮಂಡಳಿ (ಎಸ್‌ಎಸ್‌ಎಲ್‌ಸಿ)
(೭) ಪ್ರೌಢ ಪರೀಕ್ಷಾ ಮಂಡಳಿ (ಇತರ ಪರೀಕ್ಷೆಗಳು)
(೮) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ, ಧಾರವಾಡ
(೯) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ, ಗುಲಬರ್ಗಾ
(೧೦) ರಾಜ್ಯ ಯೋಜನಾ ನಿರ್ದೇಶನಾಲಯ, ಸರ್ವ ಶಿಕ್ಷಣ ಅಭಿಯಾನ
(೧೧) ರಾಜ್ಯ ಯೋಜನಾ ನಿರ್ದೇಶನಾಲಯ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
(೧೨) ರಾಜ್ಯ ಯೋಜನಾ ನಿರ್ದೇಶನಾಲಯ, ಮಹಿಳಾ ಸಮಾಖ್ಯ
(೧೩) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ
(೧೪) ಲೋಕ ಶಿಕ್ಷಣ ನಿರ್ದೇಶನಾಲಯ
(೧೫) ವೃತ್ತಿ ಶಿಕ್ಷಣ ನಿರ್ದೇಶನಾಲಯ
(೧೬) ಸಾರ್ವಜನಿಕ ಗ್ರಂಥಾಲಯಗಳ ನಿರ್ದೇಶನಾಲಯ
(೧೭) ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ

ಈ ವಿಭಾಗವು ಇಬ್ಬರು ಸಚಿವರುಗಳ ನಾಯಕತ್ವದಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಲೋಕ ಶಿಕ್ಷಣ ಹಾಗೂ ಸಾರ್ವಜನಿಕ ಗ್ರಂಥಾಲಯಗಳಿಗೆ ಸಂಬಂಧಿಸಿದ ವಿಷಯವನ್ನು ಹೊರತುಪಡಿಸಿ ಉಳಿದೆಲ್ಲ ವಿಷಯಗಳ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಈ ವರದಿಯ ಅವಧಿಯಲ್ಲಿ ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರು ಸಚಿವರಾಗಿರುತ್ತಾರೆ. ಇನ್ನೊಬ್ಬ ಸಚಿವರು ಲೋಕ ಶಿಕ್ಷಣ ಹಾಗೂ ಸಾರ್ವಜನಿಕ ಗ್ರಂಥಾಲಯಗಳಿಗೆ ಸಂಬಂಧಿಸಿದ ವಿಷಯಗಳ ಜೊತೆಗೆ

ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆಯನ್ನೂ ಸಹ ನೋಡಿಕೊಳ್ಳುತ್ತಾರೆ. ಈ ವರದಿಯ ಅವಧಿಯಲ್ಲಿ ಶ್ರೀ ಶಿವಣ್ಣಗೌಡ ನಾಯಕ್ ಅವರು ಸಚಿವರಾಗಿರುತ್ತಾರೆ. ಪ್ರಧಾನ ಕಾರ್ಯದರ್ಶಿ ಹಾಗೂ ಅಧಿಕಾರಿಗಳ ತಂಡವು ತಮ್ಮ ಸಿಬ್ಬಂದಿಯೊಂದಿಗೆ ಈ ಇಬ್ಬರು ಸಚಿವರುಗಳಿಗೆ ಸಹಾಯಕರಾಗಿರುತ್ತಾರೆ.

ಸಚಿವಾಲಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ವಿವರ ಕೆಳಕಂಡಂತಿದೆ :

| ಕ್ರ. ಸಂ. | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ಪ್ರಧಾನ ಕಾರ್ಯದರ್ಶಿ | 1 |
| 2 | ಉಪ ಕಾರ್ಯದರ್ಶಿ | 3 |
| 3 | ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ | 1 |
| 4 | ಅಧೀನ ಕಾರ್ಯದರ್ಶಿ | 5 |
| 5 | ಶಾಖಾಧಿಕಾರಿ/ಪತ್ರಾಂಕಿತ ಆಪ್ತ ಸಹಾಯಕರು | 15 |
| 6 | ಹಿರಿಯ ಸಹಾಯಕ/ಹಿರಿಯ ಸಾಂಖ್ಯಿಕ ಸಹಾಯಕರು/ಲೆಕ್ಕಧೀಕ್ಷಕರು | 12+1+2 |
| 7 | ಸಹಾಯಕರು | 21 |
| 8 | ಶೀಘ್ರಲಿಪಿಗಾರರು (ಆಪ್ತ ಸಹಾಯಕರು) | 8 |
| 9 | ಕಿರಿಯ ಸಹಾಯಕರು | 15 |
| | ಬೆರಳಚ್ಚುಗಾರರು | 10 |
| 10 | ದಲಾಯತ್ | 10 |
| **ಒಟ್ಟು** | | **104** |

**ಶಿಕ್ಷಣ:**

ವಿಶ್ವ ಮಾನವ ಹಕ್ಕುಗಳ ಘೋಷಣೆ (1948) ಯಲ್ಲಿ ಆಹಾರ, ನೆಲೆ ಮತ್ತು ನೀರು ಇಂತಹ ಇತರ ಮೂಲಭೂತ ಸವಲತ್ತುಗಳೊಂದಿಗೆ ಶಿಕ್ಷಣವನ್ನೂ ಸಹ ಮಾನವ ಮೂಲ ಹಕ್ಕು ಎಂದು ಪರಿಗಣಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆಯು ಗಮನೀಯವಾಗಿದೆ. ರಾಜ್ಯವು ಒಂದೇ ಗತಿಯಲ್ಲಿ ವಿಶ್ವ ಸಾಕ್ಷರತೆಯತ್ತ ಸಾಗುತ್ತಿದೆ. 2001 ರಲ್ಲಿ ಶೇಕಡಾ 66.64ರಷ್ಟಿದ್ದ ಸಾಕ್ಷರತಾ ಸಾಧನೆಯನ್ನು 1994 ರಲ್ಲಿದ್ದ ಶೇಕಡಾ 56.04 ಕ್ಕೆ ಹೋಲಿಸಿ ನೋಡಿದಾಗ ಗ್ರಾಮೀಣ ಹಾಗೂ ನಗರದ ಸಾಕ್ಷರತೆಯು 59.39 ಮತ್ತು 80.58 ಇರುತ್ತದೆ. 1991 ರಲ್ಲಿ ಶೇಕಡಾ 44.34 ರಷ್ಟಿದ್ದ ಮಹಿಳಾ ಸಾಕ್ಷರತೆಯು 2001 ರಲ್ಲಿ ಶೇಕಡಾ 56.87 ರಷ್ಟು ಹೆಚ್ಚಿದ್ದು, ಶೇಕಡಾ 76.10 ರಷ್ಟಿದ್ದ ಪುರುಷರ ಸಾಕ್ಷರತೆಗಿಂತ ಕಡಿಮೆ ಇರುತ್ತದೆ.

ಪ್ರಾಥಮಿಕ ಶಾಲಾ ಮಟ್ಟದಲ್ಲಿ ಒಟ್ಟು ನೋಂದಣಿ ಸಂಖ್ಯೆಯು ಶೇಕಡಾ 98.12 ಇದ್ದು ಹೆಣ್ಣು ಮಕ್ಕಳ

ಸಂಖ್ಯೆಯು 98.05 ಇದೆ. 2001 ರಿಂದ ನಡೆಸಲಾದ ಎಡೆಬಿಡದ ಪ್ರಯತ್ನಗಳಿಂದಾಗಿ ಶಾಲೆಯನ್ನು ಬಿಟ್ಟು ಹೋಗುವ ಮಕ್ಕಳ ಸಂಖ್ಯೆಯು ಕಡಿಮೆಯಾಗಿದೆ. ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ಒದಗಿಸುವ ಸಲುವಾಗಿ ರಾಜ್ಯವು ವಿದ್ಯಾ ವಿಕಾಸ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಿದೆ. ಇದರಿಂದ ಸುಮಾರು 85 ಲಕ್ಷ ಮಕ್ಕಳು ಲಾಭ ಪಡೆಯುತ್ತಿದ್ದಾರೆ.

ಸರ್ಕಾರವು ಶಾಲಾ ಅಭಿವೃದ್ಧಿ ಪರಿವೀಕ್ಷಣಾ ಸಮಿತಿಯನ್ನು (ಖಆಒಅ) ರಚಿಸಿದೆ. ಈ ಸಮಿತಿಗಳು ಶಾಲೆಗಳ ಕಾರ್ಯನಿರ್ವಹಣೆ ಮತ್ತು ಎಲ್ಲ ಕಾರ್ಯಕ್ರಮಗಳನ್ನು ತಪ್ಪದೇ ಪರಿವೀಕ್ಷಿಸುತ್ತವೆ.

**ಹತ್ತನೇ ಪಂಚವಾರ್ಷಿಕ ಯೋಜನೆ:**

ಈ ಯೋಜನೆಯ ಮುಖ್ಯ ಗುರಿ:

1 6 ರಿಂದ 14 ವಯಸ್ಸಿನ ಮಕ್ಕಳನ್ನು ನೂರು ಪ್ರತಿಶತ ನೋಂದಾಯಿಸುವುದು.

2 ಒಂದು ಕಿಲೋಮೀಟರ್ ಒಳಗೆ ಕಿರಿಯ ಪ್ರಾಥಿಕ ಶಾಲೆಗಳನ್ನು ಮತ್ತು ಎರಡು ಕಿಲೋಮೀಟರ್ ಒಳಗೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರಯುವುದು.

3 ಶಾಲೆಯನ್ನು ಬಿಟ್ಟು ಹೋಗುವ ಮಕ್ಕಳ ಸಂಖ್ಯೆಯನ್ನು; ಒಂದರಿಂದ ಐದನೇ ತರಗತಿಯವರೆಗೆ ಶೇಕಡಾ 6ಕ್ಕಿಂತ ಕಡಿಮೆ ಹಾಗೂ ಒಂದರಿಂದ ಏಳನೇ ತರಗತಿಯವರೆಗೆ ಶೇಕಡಾ 20 ಕ್ಕಿಂತ ಕಡಿಮೆಗೊಳಿಸುವುದು.

4 ಪ್ರತೀ ಕಿರಿಯ ಪ್ರಾಥಮಿಕ ಶಾಲೆಗೆ 4 ಜನ ಶಿಕ್ಷಕರನ್ನು ಹಾಗೂ ಹಿರಿಯ ಪ್ರಾಥಮಿಕ ಶಾಲೆಗೆ 6 ಜನ ಶಿಕ್ಷಕರನ್ನು ಒದಗಿಸುವುದು.

ಯೋಜನೆಯ ಅಂತ್ಯದಲ್ಲಿ ನೋಂದಣಿ ಸಂಖ್ಯೆಯು ಶೇಕಡಾ 98.09 ರಷ್ಟಿತ್ತು. ಒಂದು ಕಿಲೋಮೀಟರ್ ಒಳಗೆ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಾಗೂ ಮೂರು ಕಿಲೋಮೀಟರ್ ಒಳಗೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒದಗಿಸುವಲ್ಲಿ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿದೆ. ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒದಗಿಸಿದ ಪ್ರಮಾಣವು (ಡಿಚಿಣಖ) ಶೇಕಡಾ 100 ಇರುತ್ತದೆ. ಒಂದರಿಂದ ಐದನೇ ತರಗತಿಯವರೆಗಿನ ಶೇಕಡಾ 7.86 ರಷ್ಟು ಹಾಗೂ ಒಂದರಿಂದ ಏಳನೇ ತರಗತಿಯವರೆಗಿನ ಶೇಕಡಾ 10.19ರಷ್ಟು ಮಕ್ಕಳು ಶಾಲೆಯನ್ನು ಬಿಟ್ಟು ಹೋಗಿರುತ್ತಾರೆ. ಹಾಗೆಯೇ ಶಾಲೆಗೆ ಬರದೇ ಹೊರಗುಳಿದ ಮಕ್ಕಳ ಸಂಖ್ಯೆಯೂ ಸಹ ಗಮನಾರ್ಹವಾಗಿ ಕಡಿಮೆ ಆಗಿರುತ್ತದೆ. 2002 ರಲ್ಲಿ, ಶಾಲೆಗೆ ಬರದೇ ಹೊರಗುಳಿದ 7–14 ವಯಸ್ಸಿನ ಮಕ್ಕಳ ಸಂಖ್ಯೆಯು 4.02 ಲಕ್ಷ ಇದ್ದು 2008 ರಲ್ಲಿ 0.72 ಲಕ್ಷದಷ್ಟು ಕಡಿಮೆ ಆಗಿರುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆಯು ಸುಧಾರಿಸಿರುತ್ತದೆ. ಈ ಯೋಜನೆಯ ಅವಧಿಯಲ್ಲಿ 13,845 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

**ಹನ್ನೊಂದನೇ ಪಂಚವಾರ್ಷಿಕ ಯೋಜನೆ:**

ಗುರಿಯನ್ನು ಸಾಧಿಸುವಲ್ಲಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ವಿಶ್ವವ್ಯಾಪಿಯನ್ನಾಗಿಸುವಲ್ಲಿ ರಾಜ್ಯವು, ಈ ಯೋಜನೆಯಲ್ಲಿ ನಿಗದಿ ಪಡಿಸಿದ ಮಟ್ಟಕ್ಕಿಂತ ಮುಂದಿದೆ. ನೋಂದಣಿಯಲ್ಲಿ ಹಾಗೂ ಮಕ್ಕಳನ್ನು ಉಳಿಸಿಕೊಳ್ಳುವಿಕೆಯಲ್ಲಿ ಈಗಾಗಲೇ ಗುರಿಯನ್ನು ಸಾಧಿಸಿದ್ದು ಒಚಿದೆಡೆಯಾದರೆ ಶಾಲೆಯ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವತ್ತ ಪೂರ್ಣ ಪ್ರಮಾಣದ ಪ್ರಯತ್ನ ಜಾರಿಯಲ್ಲಿದೆ. ಈ ನಿಟ್ಟನಲ್ಲಿ ಸಮಾನತೆ ಮತ್ತು ಪ್ರಾಂತೀಯ ಸ್ವಚ್ಚತೆಗಳ ಕಡೆಗೆ ಕಾಳಜಿ ವಹಿಸಲಾಗುತ್ತಿದೆ.

ಈ ಯೋಜನೆಯಲ್ಲಿ ವಿಸ್ತರಣೆಗಿಂತ ಹೆಚ್ಚಾಗಿ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ಕೊಡಲಾಗುತ್ತದೆ.

1 ಹಿಂದುಳಿದ ಕ್ಷೇತ್ರಗಳ ಸೇವಾ ಸವಲತ್ತುಗಳಿಲ್ಲದ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ಪ್ರಾರಂಭಿಸುವುದನ್ನು ತಡೆಗಟ್ಟುವುದು.

2 ಶಾಲೆಯನ್ನು ಬಿಟ್ಟು ಹೋಗುವ ಮಕ್ಕಳ ಸಂಖ್ಯೆಯನ್ನು ಕಿರಿಯ ಪ್ರಾಥಮಿಕ ಹಂತದಲ್ಲಿ (ಒಂದರಿಂದ ಐದು) 5% ಕ್ಕಿಂತ ಹಾಗೂ ಹಿರಿಯ ಪ್ರಾಥಮಿಕ ಹಂತದಲ್ಲಿ 10% ಕ್ಕಿಂತ ಕಡಿಮೆಗೊಳಿಸುವುದು.

೩ ಪುರುಷ ಮತ್ತು ಮಹಿಳೆಯರ ನಡುವಿನ ಅಂತರವನ್ನು ಕಡಿಮೆಗೊಳಿಸಿ ಅದರಿಂದ 85% ರಷ್ಟು ಸಾಕ್ಷರತೆಯನ್ನು ಸಾಧಿಸುವುದು.

4 14–18 ವಯಸ್ಸಿನ ಮಕ್ಕಳ ನೋಂದಣಿ ಸಂಖ್ಯೆಯನ್ನು 65% ಕ್ಕೆ ಹೆಚ್ಚಿಸುವುದು.

ಇವು ಈ ಯೋಜನೆಯ ಗುರಿಗಳು.

ಗುಣಮಟ್ಟವನ್ನು ಸುಧಾರಿಸುವಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುವುದು. ಒಂದರಿಂದ ಎಂಟನೇ ತರಗತಿಯವರೆಗಿನ ಮಕ್ಕಳಲ್ಲಿ 80% ರಷ್ಟು ಹುಡುಗರು ನಿಗದಿ ಪಡಿಸಿದ ಮಟ್ಟಕ್ಕಿಂತ ಕನಿಷ್ಟ ಪಕ್ಷ 80% ರಷ್ಟಾದರೂ ಪ್ರೌಢಿಮೆಯನ್ನು ಸಾಧಿಸುವಂತೆ ಧೃಢಿಕರಿಸಿಕೊಳ್ಳುವ ಬಗ್ಗೆ ಯೋಜಿಸಲಾಗಿದೆ. +2 ಹಂತದ ಶಿಕ್ಷಣವನ್ನು ವೃತ್ತಿಪರವನ್ನಾಗಿಸುವ ನಿಟ್ಟಿನಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ.

**ಪ್ರಾಥಮಿಕ ಶಿಕ್ಷಣ:**

ರಾಜ್ಯವು ಜಾಗತಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವ ಗುರಿಯತ್ತ ಪ್ರಮುಖ ಹೆಜ್ಜೆಗಳನ್ನು ಇಡುತ್ತಿದೆ. ಇದಕ್ಕಾಗಿ ಈ ಕೆಳಕಂಡ ಉದ್ದೇಶಗಳನ್ನು ಪೂರೈಸಬೇಕಾಗುತ್ತದೆ.

i) ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಾಲೆಗಳು ಸಾರ್ವತ್ರಿಕವಾಗಿ ಲಭ್ಯವಾಗುವುದು.

ii) ಸಾರ್ವತ್ರಿಕ ನೋಂದಣಿ.

iii) ಸಾರ್ವತ್ರಿಕ ಉಳಿಕೆ. ಮತ್ತು

iv) ಎಲ್ಲಾ ಮಕ್ಕಳಿಗೂ ಕನಿಷ್ಟ ಮಟ್ಟದ ಅಗತ್ಯ ಕಲಿಕೆಯನ್ನು ಸಾಧಿಸುವುದು.

ಜನಸಂಖ್ಯೆ ಹಾಗೂ ನಿರ್ವಸತಿ ಸಂಖ್ಯೆಗಳಿಗುಣವಾಗಿ ಶಾಲೆಗಳನ್ನು ಒದಗಿಸುವಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಲಾಗಿದೆ. 100 ಹಾಗೂ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ನಿರ್ವಸಿತ ಜನರಿಗಾಗಿ ಒಂದು ಕಿಲೋಮೀಟರ್ ಅಂತರದಲ್ಲಿ ಪ್ರಾಥಮಿಕ ಶಾಲೆಗಳನ್ನು ಲಭ್ಯಪಡಿಸಲಾಗಿದೆ. 100ಕ್ಕಿಂತಲು ಕಡಿಮೆ ಜನಸಂಖ್ಯೆಯುಳ್ಳ ಹಾಗೂ ಪ್ರಾಥಮಿಕ ಶಾಲೆ ಲಭ್ಯವಿಲ್ಲದಿರುವ ನಿರ್ವಸಿತ ಪ್ರದೇಶಗಳಲ್ಲಿ ಫೀಡರ್ (ಜಿಜಜಜಜಡಿ) ಕೇಂದ್ರಗಳನ್ನು ತೆರೆಯಲು ಅಥವಾ ಹತ್ತಿರದ ಶಾಲೆಗಳಿಗೆ ಹೋಗಲು ವಾಹನ ಸಂಚಾರವನ್ನು ಒದಗಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಒಟ್ಟು 56,441 ಪ್ರಾಥಮಿಕ ಶಾಲೆಗಳಲ್ಲಿ 2.60 ಲಕ್ಷ ಶಿಕ್ಷಕರಿದ್ದು ಒಂದರಿಂದ ಎಂಟನೇ ತರಗತಿಯವರೆಗೆ ಓದುತ್ತಿರುವ 84.52 ಲಕ್ಷ ವಿದ್ಯಾರ್ಥಿಗಳಿದ್ದಾರೆ.

**ಲಭ್ಯತೆ ಪ್ರಮಾಣ :**

ಒಂದು ಕಿಲೋ ಮೀಟರ್ ಅಂತರದೊಳಗೆ ಪ್ರಾಥಮಿಕ ಶಾಲಾ ಪ್ರವೇಶ ಲಭ್ಯತೆ ಪ್ರಮಾಣವು 2006–07 ರಲ್ಲಿ 99.13 ರಷ್ಟು ಇದ್ದು 2008–09 ರಲ್ಲಿ 100 ರಷ್ಟು ಇದೆ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಪ್ರಮಾಣವು 100 ರಷ್ಟು ಇದೆ. ಕಳೆದ ವರ್ಷಗಳಲ್ಲಿ 313 ಹೊಸ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದ್ದರಿಂದ ಹಾಗೂ 450 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಿದ್ದರಿಂದ ಈ ಪ್ರಗತಿಯು ಸಾಧ್ಯವಾಯಿತು.

**ದಾಖಲಾತಿ :**

ಕಳೆದ ವರ್ಷಕ್ಕೆ ಹೋಲಿಸಿದಾಗ 1-5 ಹಾಗೂ 6-7 ತರಗತಿಗಳಲ್ಲಿ ಮಕ್ಕಳ ದಾಖಲಾತಿಯು ಈ ವರ್ಷ ಕಡಿಮೆ ಇದೆ. ವಿದ್ಯಾರ್ಥಿಗಳನ್ನು ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಗೆ ನೋದಾಯಿಸುವಂತೆ ತಿಳುವಳಿಕೆ ನೀಡುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಹಿಂದನ ವರ್ಷದ ನೋಂದಣಿಗಿಂತ 2008-09 ರಲ್ಲಿ 1-5 ತರಗತಿಯಲ್ಲಿ ನೋಂದಣಿಯು 1.97% ರಷ್ಟು ಕಡಿಮೆ ಆಗಿದೆ. ಬಾಲಕರಲ್ಲಿ 2.35% ಮತ್ತು ಬಾಲಕಿಯರಲ್ಲಿ 2.12% ಕಡಿಮೆ ಆಗಿದೆ.

**ಸ್ಥೂಲ ದಾಖಲಾತಿ ಪ್ರಮಾಣ :**

ಪ್ರಾಥಮಿಕ ಶಾಲೆಗಳ ದಾಖಲಾತಿ ಪ್ರಮಾಣ 2007-08ರಲ್ಲಿ 109.23 ರಷ್ಟು ಇದ್ದು ಇದರಲ್ಲಿ ಬಾಲಕರ ದಾಖಲಾತಿ ಪ್ರಮಾಣ 104.86 ಮತ್ತು ಬಾಲಕಿಯರ ದಾಖಲಾತಿ ಪ್ರಮಾಣ 113.60 ರಷ್ಟಿರುತ್ತದೆ ಅದರಂತೆ ನಿವ್ವಳ ದಾಖಲಾತಿ ಪ್ರಮಾಣವು ಪ್ರಾಥಮಿಕ ಶಾಲೆಗಳಲ್ಲಿ 96.01 ಇದೆ. ಇದರಲ್ಲಿ 97.16 ಬಾಲಕರು ಮತ್ತು 94.86 ಬಾಲಕಿಯರ ಪ್ರಮಾಣವು ಇರುತ್ತದೆ.

**ಶಾಲೆಗೆ ದಾಖಲಾಗದ ಮಕ್ಕಳು:**

2008ರಲ್ಲಿ 7ರಿಂದ 14 ವರ್ಷ ವಯೋಮಾನದ ಮಕ್ಕಳ ಶಿಕ್ಷಣ ಮಟ್ಟವನ್ನು ಗುರುತಿಸುವ ಉದ್ದೇಶದಿಂದ ಮಕ್ಕಳ ಗಣತಿಯನ್ನು ನಡೆಸಲಾಯಿತು. ಅದರ ಪ್ರಕಾರ ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯು 72365 ಆಗಿರುತ್ತದೆ. 2007-08ರಲ್ಲಿ 93276 ಈ ಸಂಖ್ಯೆ 2008-09 ರಲ್ಲಿ 72365 ಕ್ಕೆ ಇಳಿದಿರುತ್ತದೆ.

**ಪ್ರಾಥಮಿಕ ಶಾಲೆಗಳ ಉನ್ನತೀಕರಣ :**

ಮೂರು ಕಿಲೋಮೀಟರ್ ವ್ಯಾಪ್ತಿಯೊಳಗೆ ಇರುವ ಮಕ್ಕಳಿಗೆ ಪ್ರವೇಶಾವಕಾಶ ನೀಡುವ ದಿಸೆಯಲ್ಲಿ 5444 ಹಿರಿಯ ಪ್ರಾಥಮಿಕ ಶಾಲೆಗಳನ್ನು 8ನೇ ತರಗತಿಯಲ್ಲಿ ಸೇರ್ಪಡಿಸಿ ಉನ್ನತೀಕರಿಸಲಾಗಿದೆ. ಈ ಶಾಲೆಗಳಿಗೆ ಒಬ್ಬ ಹೆಚ್ಚುವರಿ ಶಿಕ್ಷಕರು ಹಾಗೂ ಒಂದು ಹೆಚ್ಚುವರಿ ತರಗತಿ ಕೊಠಡಿಯನ್ನು ಒದಗಿಸಲಾಗಿದೆ.ಹಿರಿಯ ಪ್ರಾಥಮಿಕ ವ್ಯಾಸಂಗದ ನಂತರ ಮಕ್ಕಳು ಶಾಲೆ ಬಿಟ್ಟು ಹೋಗುವುದನ್ನು ತಡೆಯುವ ಉದ್ದೇಶದಿಂದ ಹಿರಿಯ ಪ್ರಾಥಮಿಕ ಶಾಲೆಗಳಿಗೆ 8ನೇ ತರಗತಿಯನ್ನು ಸೇರಿಸಿ ಉನ್ನತೀಕರಿಸಲಾಗಿದೆ. 2008-09ನೇ ಸಾಲಿನಲ್ಲಿ 101 ಹಿರಿಯ ಪ್ರಾಥಮಿಕ ಶಾಲೆಗಳಿಗೆ 8ನೇ ತರಗತಿಯನ್ನು ಪ್ರಾರಂಭಿಸಲಾಗಿದೆ.

**ಉಳಿಕೆ ಪ್ರಮಾಣ:**

ಪ್ರವೇಶಾವಕಾಶವನ್ನು ಕಲ್ಪಿಸುವ್ಯದು ಎಲ್ಲಾ ಮಕ್ಕಳು ಶಾಲೆಗೆ ಸರಿಯಾಗಿ ಹಾಜರಾಗುತ್ತಿದ್ದಾರೆಂಬುದಕ್ಕೆ ಪ್ರಮಾಣವಲ್ಲ. 1ನೇ ತರಗತಿಯಲ್ಲಿ ದಾಖಲಾದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಶಾಲೆಯಲ್ಲಿ ಉಳಿಸಿಕೊಳ್ಳುವುದು ಅವಶ್ಯಕ. ಮಕ್ಕಳು ಅನೇಕ ಕಾರಣಗಳಿಗಾಗಿ ಮಧ್ಯದಲ್ಲಿ ಶಾಲೆಯನ್ನು ಬಿಟ್ಟು ಹೋಗುತ್ತಾರೆ. ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಹಂತದಲ್ಲಿ(1 ರಿಂದ 5) ಉಳಿಕೆ ಪ್ರಮಾಣವು 93.75 ಆಗಿರುತ್ತದೆ.

**ವಿದ್ಯಾರ್ಥಿ ಶಿಕ್ಷಕರ ಅನುಪಾತ:**

ವಿದ್ಯಾರ್ಥಿ : ಶಿಕ್ಷಕರ ಅನುಪಾತವು 2007-08ನೇ ಸಾಲಿನಲ್ಲಿ 28:1 ರಿಂದ ಸುಧಾರಣೆ ಕಂಡು 2008-09 ನೇ ಸಾಲಿನಲ್ಲಿ ಮಂಜೂರಾದ ಹುದ್ದೆಗಳನ್ನೂ ಸೇರಿಸಿ 26:1 ಆಗಿರುತ್ತದೆ.

**ಮೂಲಭೂತ ಸೌಲಭ್ಯಗಳು :**

ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಅಗತ್ಯ ಮೂಲಭೂತ ಸೌಲಭ್ಯಗಳಾದ ಹೆಚ್ಚುವರಿ ಕೊಠಡಿಗಳು, ಕುಡಿಯುವ ನೀರು, ಶೌಚಾಲಯ ಮುಂತಾದವುಗಳನ್ನು ಪ್ರಾಥಮಿಕ ಶಾಲೆಗಳಿಗೆ ಒದಗಿಸಲಾಗಿದೆ. 2008–09 ರಲ್ಲಿ, ಸ್ವಂತ ಕಟ್ಟಡ ಹೊಂದಿರದ 313 ಶಾಲೆಗಳಿಗೆ ಶಾಲಾ ಕಟ್ಟಡಗಳನ್ನು ಒದಗಿಸಲಾಗಿದೆ, 6221 ಶಾಲೆಗಳಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. 152907 ಶಾಲೆಗಳಲ್ಲಿ ವಿದ್ಯುತ್ಚ್ಛಕ್ತಿ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇವು ಶಿಕ್ಷಕರು ತರಗತಿ ಕೊಠಡಿಗಳಲ್ಲಿ ಸಕ್ರಿಯವಾಗಿ ಹೆಚು ಸಮಯ ಪಾಠ ಮಾಡಲು ಹಾಗೂ ಅಧಿಕ ಮಕ್ಕಳು ಶಾಲೆಚುಲ್ಲಿ ಉಳಿಯಲೆಂಬ ದೃಷ್ಟಿಯಿಂದ ಕೈಗೊಂಡ ಕ್ರೋಢೀಕೃತ ಪ್ರಯತ್ನವಾಗಿರುತ್ತದೆ.

**ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆ :**

ಕರ್ನಾಟಕವು ; ದೊಡ್ಡ ಪ್ರಮಾಣದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಾಮರ್ಥ್ಯಾಧಾರಿತ ಪರೀಕ್ಷೆಗಳನ್ನು ನಡೆಸುವುದರ ಮೂಲಕ ; ಶೈಕ್ಷಣಿಕ ಗುಣಮಟ್ಟ ಮೌಲ್ಯಾಂಕನದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಪ್ರಾರಂಭಿಸಿದ ದೇಶದ ಮೊದಲನೆಯ ರಾಜ್ಯವಾಗಿದೆ.

ಇದನ್ನು 2005–06 ರಿಂದ ವಾರ್ಷಿಕ ಕಾರ್ಯಕ್ರಮದ ರೂಪದಲ್ಲಿ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆಯಿಂದ (ಕರ್ನಾಟಕ ಸ್ಕೂಲ್ ಕ್ವಾಲಿಟಿ ಅಸೆಸ್‌ಮೆಂಟ್ ಆರ್ಗನೈಸೇಷನ್ ಏಖಕಿಔಂ ) ಪ್ರಾರಂಭಿಸಲಾಯಿತು. ವಿವಿಧ ತರಗತಿಗಳಲ್ಲಿ ವಿವಿಧ ವಿಷಯಗಳಲ್ಲಿ ಸ್ಪರ್ಧಾತ್ಮಕವಾಗಿ ಆಯ್ಕೆಯಾದ ವಿದ್ಯಾರ್ಥಿಗಳು ಕಲಿಕೆಯಲ್ಲಿ ಮೌಲ್ಯಾಂಕನಗೊಳಿಸಲಾಗಿದೆ. ಶಾಲೆಯ ಗುಣಮಟ್ಟವನ್ನು ಪರಿಗಣಿಸುವಾಗ ವಿದ್ಯಾರ್ಥಿಗಳು ಹೊಂದಿದ ಸ್ಪರ್ಧಾತ್ಮಕ ಗುಣಗಳನ್ನು ಮಾತ್ರವಲ್ಲದೆ ಅವರುಗಳ ನೋಂದಣಿ, ಹಾಜರಾತಿ ಮತ್ತು ಶಾಲೆಯಲ್ಲಿ ಅವರುಗಳ ಉಳಿಕೆಯನ್ನೂ ಸಹ ಪರಿಗಣಿಸಲಾಗುತ್ತದೆ. ಈ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿ ಶೈಕ್ಷಣಿಕ ಗುಣಮಟ್ಟಕ್ಕೆ ಸಂಬಂಧಿಸಿದ ಅಂಶಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸಹಾಯಕವಾಗಿದೆ ಇದರಿಂದಾಗಿ ಶಾಲಾ ಮೌಲ್ಯಾಂಕನವು ಪ್ರಾಮುಖ್ಯತೆಯನ್ನು ಹೊಂದಿದೆ.

**ಅಂಕಿ–ಅಂಶ :**

ಈ ಕೆಳಕಂಡ ತಃಖ್ತೆಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಿಭಾಗದ ಕೆಲವು ಪ್ರಮುಖ ಅಂಕಿ ಅಂಶಗಳನ್ನು ನೀಡುತ್ತವೆ.

ಶಾಲೆಗಳು – ಸಂಖ್ಯೆಗಳು :

| ಕ್ರ ಸಂ | ಶಾಲೆ | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|---|---|
| 1 | ಕಿರಿಯ ಪ್ರಾಥಮಿಕ ಶಾಲೆ | 23,696 | 272 | 2,676 | 26,644 |
| 2 | ಹಿರಿಯ ಪ್ರಾಥಿಮಿಕ ಶಾಲೆ | 22,334 | 2,177 | 6,385 | 30,896 |
| 3 | ಪ್ರೌಢ ಶಾಲೆ | 4,387 | 2,997 | 4,369 | 11,753 |
| ಒಟ್ಟು | | 50,417 | 5,446 | 13,430 | 69,293 |

ಶಾಲೆಗಳು– ವಿದ್ಯಾರ್ಥಿಗಳ ಸಂಖ್ಯೆ

| ಕ್ರ ಸಂ | ತರಗತಿ | ಸರ್ಕಾರಿಒಟ್ಟು | ಅನುದಾನಿತ ಒಟ್ಟು | ಅನುದಾನರಹಿತ ಒಟ್ಟು | **ಒಟ್ಟು** |
|---|---|---|---|---|---|
| 1 | 1 ರಿಂದ 5 | 3,66,353 | 2,21,981 | 23,000 | **2,26,194** |
| 2 | 6 ರಿಂದ 7 | 36,02,512 | 5,63,181 | 16,94,947 | **17,50,681** |
| 3 | 8 | 1,66,450 | 3,99,418 | 1,95,723 | **2,25,529** |
| 4 | 9 | 1,71,519 | 2.84, 398 | 1,77,782 | **2,06,219** |
| 5 | 10 | 1,64,539 | 2,06,809 | 1,30,739 | **1,85,040** |

ಶಾಲೆಗಳು – ಶಿಕ್ಷಕರ ಸಂಖ್ಯೆ :

| ಶಾಲೆ | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|---|
| ಕಿ.ಪ್ರಾ.ಶಾಲೆ ಮತ್ತು ಹಿ.ಪ್ರಾ.ಶಾಲೆ | 49,925 | 815 | 11,800 | 62,540 |
| ಪ್ರೌಢ ಶಾಲೆ | 1,41,913 | 14,421 | 58,020 | 1,14,355 |
| ಒಟ್ಟು | | | | 1,76,895 |

ಪದವಿ ಪೂರ್ವ (ಪಿಯು) ಕಾಲೇಜುಗಳು – ಸಂಖ್ಯೆ :

| | |
|---|---|
| ಸರ್ಕಾರಿ | 1200 |
| ಅನುದಾನಿತ | 529 |
| ಅನುದಾನ ರಹಿತ | 1627 |
| ಸಂಯುಕ್ತ | 13 |
| ವಿಭಜಿತ | 166 |
| ಒಟ್ಟು | 3535 |

ಪ.ಪೂ ಕಾಲೇಜುಗಳು – ವಿದ್ಯಾರ್ಥಿಗಳ ಸಂಖ್ಯೆ :

| | ಮೊದಲ ಪಿಯು | | | ಎರಡನೇ ಪಿಯು | | |
|---|---|---|---|---|---|---|
| | ಕಲಾ | ವಾಣಿಜ್ಯ | ವಿಜ್ಞಾನ | ಕಲಾ | ವಾಣಿಜ್ಯ | ವಿಜ್ಞಾನ |
| ಸರ್ಕಾರಿ ಪಿಯು ಕಾಲೇಜು | 126407 | 35765 | 18400 | 98022 | 26477 | 17268 |
| ಅನುದಾನಿತ ಪಿಯು ಕಾಲೇಜು | 64528 | 30672 | 22804 | 57002 | 24952 | 23119 |
| ಅನುದಾನರಹಿತ ಪಿಯು ಕಾಲೇಜು | 50843 | 47174 | 56204 | 42928 | 32877 | 48690 |
| ವಿಭಜಿತ ಪಿಯು ಕಾಲೇಜು | 14988 | 22968 | 33164 | 3479 | 18295 | 33054 |
| ಸಂಯುಕ್ತ ಪಿಯು ಕಾಲೇಜು | 1525 | 1034 | 216 | 1170 | 908 | 217 |
| ಒಟ್ಟು | 258291 | 137613 | 130788 | 202551 | 103509 | 112348 |

ಪಿಯು ಕಾಲೇಜು – ಶಿಕ್ಷಕರ ಸಂಖ್ಯೆ :

| | ಮಂಜೂರಾದ ಹುದ್ದೆ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ ಇರುವ ಹುದ್ದೆಗಳು |
|---|---|---|---|
| ಸರ್ಕಾರಿ | 10762 | 7366 | 3396 |
| ಅನುದಾನಿತ : | | | |
| ಪ್ರಾಂಶುಪಾಲರು | 479 | 479 | – |
| ಉಪನ್ಯಾಸಕರು | 4312 | 4312 | – |
| ಬೋಧಕೇತರ ಹುದ್ದೆ | 3394 | 3394 | – |

ವಾರ್ಷಿಕ ಆಯವ್ಯಯ – 2008–09 :

| ಕ್ರಮ ಸಂಖ್ಯೆ | ವರ್ಗ | ಒಟ್ಟು ಹಂಚಿಕೆ ಪರಿಷ್ಕೃತ | ಒಟ್ಟು ವೆಚ್ಚ | ಶೇಕಡಾವಾರು ವೆಚ್ಚ |
|---|---|---|---|---|
| 1 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 74,388–57 | 70,868–80 | 95.27 |
| 2 | ಪದವಿ ಪೂರ್ವ | 13,904–34 | 13,970–19 | 100.47 |
| 3 | ಲೋಕ ಶಿಕ್ಷಣ | 1,649–60 | 1,644–86 | 99.71 |
| 4 | ವೃತ್ತಿ ಶಿಕ್ಷಣ | 1500–49 | 1,464–90 | 97.63 |
| 5 | ಸಾರ್ವಜನಿಕ ಗ್ರಂಥಾಲಯ | 1,030–00 | 999–28 | 97.02 |
| 6 | ಪ್ರಕಟಣೆ, ಪ್ರಕಾಶನಗಳು | 2,030–00 | 2,024–24 | 99.72 |
| 7 | ಶಿಕ್ಷಣ ಸಂಶೋಧನೆ ಮತ್ತು ತರಬೇತಿ | 14,709–37 | 8,789–01 | 59.75 |
| ಒಟ್ಟು | | 1,09,212–37 | 99,761–28 | 91.35 |

ಮೇಲಿನ ವಿವಿಧ ರಚನೆಗಳ ಕಾರ್ಯ ವೈಖರಿಯ ಬಗ್ಗೆ ವಿಶೇಷ ವಿವರಗಳನ್ನು ಈ ಮುಂದಿನ ಪುಟಗಳಲ್ಲಿ ನೀಡಲಾಗಿದೆ.

# ಆಯುಕ್ತರು, ಸಾರ್ವಜನಿಕ ಶಿಕ್ಷಣ

ಸಾರ್ವಜನಿಕ ಶಿಕ್ಷಣ ಆಯುಕ್ತರು ಶಾಲಾ ಶಿಕ್ಷಣವನ್ನು ನಿಯಂತ್ರಿಸುವ ಹಾಗೂ ಸಮನ್ವಯಗೊಳಿಸುವ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ರಾಜ್ಯದಲ್ಲಿನ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರೆಗಿನ ಎಲ್ಲಾ ಶಾಲಾ ಶಿಕ್ಷಣವು ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಅಧಿಕಾರವನ್ನು ವಿಕೇಂದ್ರೀಕರಿಸುವ ಸಲುವಾಗಿ 2003–04ರಲ್ಲಿ ಸಾರ್ವಜನಿಕ ಶಿಕ್ಷಣ ಅಪರ ಆಯುಕ್ತಾಲಯಗಳನ್ನು ಧಾರವಾಡ (ಬೆಳಗಾವಿ ಕಂದಾಯ ವಿಭಾಗವನ್ನು ನಿರ್ವಹಿಸಲು) ಮತ್ತು ಗುಲ್ಬರ್ಗಾದಲ್ಲಿ (ಗುಲ್ಬರ್ಗಾ ಕಂದಾಯ ವಿಭಾಗವನ್ನು ನಿರ್ವಹಿಸಲು) ಪ್ರಾರಂಭಿಸಲಾಯಿತು.ಈ ಕ್ರಮದಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅಧಿಕಾರಗಳು ಉತ್ತರ ಕರ್ನಾಟಕದ ಭಾಗದಲ್ಲಿ ವಿಕೇಂದ್ರೀಕರಣವಾಗಲು ಸಾಧ್ಯವಾಯಿತು. ಆಯುಕ್ತರು, ಸಾರ್ವನಿಕ ಶಿಕ್ಷಣ, ಬೆಂಗಳೂರು ಇವರು ಪ್ರಸ್ತುತ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ನಿರ್ವಹಣೆ ಮಾಡುತ್ತಾರೆ.

ಆರು ನಿರ್ದೇಶನಾಲಯಗಳು/ಮಂಡಳಿಗಳು ನಿರ್ದೇಶಕರ ಮುಖಂಡತ್ವದಲ್ಲಿ ಆಯುಕ್ತರು, ಸಾರ್ವನಿಕ ಶಿಕ್ಷಣ ಇಲಾಖೆ, ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಅವು:

1. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ.
2. ನಿರ್ದೇಶಕರು, ಪ್ರೌಢ ಶಿಕ್ಷಣ.
3. ನಿರ್ದೇಶಕರು, ಅಲ್ಪ ಸಂಖ್ಯಾತ ಮತ್ತು ಭಾಷಾ ಶಾಲೆಗಳು.
4. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ.
5. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ.
6. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ.

ಅಪರ ಆಯುಕ್ತರ ಕಚೇರಿಗಳಲ್ಲಿ ನಿರ್ದೇಶಕರು ಇರುತ್ತಾರೆ. ಜೊತೆಗೆ ಪ್ರತೀ ಕಂದಾಯ ವಿಭಾಗದಲ್ಲಿ 4 ಜನ ಜಂಟಿ ನಿರ್ದೇಶಕರು ಇರುತ್ತಾರೆ. ರಾಜ್ಯದಲ್ಲಿರುವ 33 ಶೈಕ್ಷಣಿಕ ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಉಪ ನಿರ್ದೇಶಕರನ್ನು ಹೊಂದಿರುತ್ತದೆ. ಇಲಾಖೆಯ ಚಟುವಟಿಕೆಗಳನ್ನು ನಿರ್ವಹಿಸಲು ಒಟ್ಟು 202 ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತೀ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಹಾಗೂ ಅಪರ ಆಯುಕ್ತರ ಅಧೀನದಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವೃಂದವಾರು ಮಾಹಿತಿ ಈ ಕೆಳಗಿನಂತಿದೆ :

| ಕ್ರ ಸಂ | ವೃಂದ | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ |
|---|---|---|---|---|
| 1 | ಆಯುಕ್ತರು, ಬೆಂಗಳೂರು | 1 | 1 | – |
| 2 | ಅಪರ ಆಯುಕ್ತರು, ಧಾರವಾಡ/ಗುಲ್ಬರ್ಗಾ | 2 | 2 | – |
| 3 | ನಿರ್ದೇಶಕರು | 10 | 9 | 1 |
| 4 | ಸಹ ನಿರ್ದೇಶಕರು (ಆಡಳಿತ) | 1 | – | 1 |
| 5 | ಸಹ ನಿರ್ದೇಶಕರು/ಸಿಟಿಇ/ಪ್ರಾಂಶುಪಾಲರು | 20 | 20 | – |
| 6 | ಉಪ ನಿರ್ದೇಶಕರು | 94 | 91 | 3 |
| 7 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 202 | 196 | 6 |
| 8 | ಹಿರಿಯ ಸಹಾಯಕ ನಿರ್ದೇಶಕರು ಆಯುಕ್ತರ ಕಛೇರಿ | 8 | 8 | – |
| 9 | ಹಿರಿಯ ಸಹಾಯಕ ನಿರ್ದೇಶಕರು (ಉರ್ದು ಮತ್ತು ಅಲ್ಪಸಂಖ್ಯಾತ ಶಾಲೆಗಳು) | 4 | 4 | – |
| 10 | ಹಿರಿಯ ಸಹಾಯಕ ನಿರ್ದೇಶಕರು (ಡಿಎಸ್ಇಆರ್‌ಟಿ) | 13 | 13 | – |
| 11 | ಹಿರಿಯ ಸಹಾಯಕ ನಿರ್ದೇಶಕರು (ಪಠ್ಯಪುಸ್ತಕ ಸಂಘ) | 5 | 5 | – |
| 12 | ಹಿರಿಯ ಸಹಾಯಕ ನಿರ್ದೇಶಕರು (ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ) | 6 | 6 | – |
| 13 | ಹಿರಿಯ ಸಹಾಯಕ ನಿರ್ದೇಶಕರು (ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ) | 5 | 4 | 1 |
| 14 | ಹಿರಿಯ ಸಹಾಯಕ ನಿರ್ದೇಶಕರು (ಅಪರ ಆಯುಕ್ತರ ಕಛೇರಿ, ಧಾರವಾಡ) | 2 | 2 | – |
| 15 | ಹಿರಿಯ ಸಹಾಯಕ ನಿರ್ದೇಶಕರು (ಸರ್ವ ಶಿಕ್ಷಣ ಅಭಿಯಾನ) | 7 | 7 | – |

| | | | | |
|---|---|---|---|---|
| 16 | ಶಿಕ್ಷಣಾಧಿಕಾರಿ, ಮಧ್ಯಾಹ್ನ ಉಪಹಾರ ಯೋಜನೆ (ಸಹ ನಿರ್ದೇಶಕರ ಕಛೇರಿ) | 2 | 2 | – |
| 17 | ಶಿಕ್ಷಣಾಧಿಕಾರಿ (ಶಿಕ್ಷಕರ ಕಲ್ಯಾಣ ನಿಧಿ) | 2 | 2 | – |
| 18 | ಶಿಕ್ಷಣಾಧಿಕಾರಿ (ಉಪ ನಿರ್ದೇಶಕರ ಕಛೇರಿ) | 46 | 41 | 5 |
| 19 | ಶಿಕ್ಷಣಾಧಿಕಾರಿ (ಅಕ್ಷರ ದಾಸೋಹ) | 28 | 26 | 2 |
| 20 | ಉಪಯೋಜನಾ ಸಮನ್ವಯಾಧಿಕಾರಿ | 33 | 33 | – |
| 21 | ಹಿರಿಯ ಉಪನ್ಯಾಸಕರು, ಡಯಟ್ | 196 | 175 | 21 |
| 22 | ಉಪನ್ಯಾಸಕರು, ಸಿಟಿಇ | 78 | 73 | 5 |
| ಒಟ್ಟು | | 765 | 720 | 45 |

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಹಾಗೂ ಅಪರ ಆಯುಕ್ತರ ಅಧೀನದಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ **ಬೋಧಕೇತರ** ಅಧಿಕಾರಿ/ನೌಕರರ ವೃಂದವಾರು ಮಾಹಿತಿ ಈ ಕೆಳಗಿನಂತಿದೆ :

| ಕ್ರ ಸಂ | ವೃಂದ | ಮಂಜೂರಾದ ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ |
|---|---|---|---|---|
| 1 | ಉಪ ನಿರ್ದೇಶಕರು | 3 | 1 | 2 |
| 2 | ಹಿರಿಯ ಸಹಾಯಕ ನಿರ್ದೇಶಕರು | 5 | 3 | 2 |
| 3 | ಹಿರಿಯ ಸಹಾಯಕ ನಿರ್ದೇಶಕರು (ವಾಣಿಜ್ಯ) | 1 | – | 1 |
| 4 | ಪತ್ರಾಂಕಿತ ಸಹಾಯಕರು | 22 | 12 | 10 |
| 5 | ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು | 239 | 205 | 34 |
| 6 | ಸಹಾಯಕ ನಿರ್ದೇಶಕರು (ವಾಣಿಜ್ಯ) | 4 | 3 | 1 |

| | | | | |
|---|---|---|---|---|
| 7 | ಲೆಕ್ಕ ಅಧೀಕ್ಷಕರು | 9 | 7 | 2 |
| 8 | ಅಧೀಕ್ಷಕರು | 410 | 332 | 78 |
| 9 | ಪ್ರಥಮ ದರ್ಜೆ ಸಹಾಯಕರು | 2617 | 2046 | 571 |
| 10 | ಗ್ರಂಥಪಾಲಕರು | 21 | 9 | 12 |
| 11 | ಶೀಘ್ರಲಿಪಿಗಾರರು | 106 | 84 | 26 |
| 12 | ದ್ವಿತೀಯ ದರ್ಜೆ ಸಹಾಯಕರು | 3408 | 2083 | 1325 |
| 13 | ಬೆರಳಚ್ಚುಗಾರರು | 145 | 138 | 7 |
| 14 | ದ್ವಿತೀಯ ದರ್ಜೆ ಸಹಾಯಕರು ಸಹಿತ ಬೆರಳಚ್ಚುಗಾರರು | 323 | 245 | 78 |
| 15 | ವಾಹನ ಚಾಲಕರು | 245 | 214 | 31 |
| 16 | ಪರಿಚಾರಕರು | 661 | 378 | 283 |
| 17 | 'ಡಿ' ದರ್ಜೆ ನೌಕರರು | 4976 | 4026 | 950 |
| ಒಟ್ಟು | | 13195 | 9786 | 3413 |

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಹಾಗೂ ಅಪರ ಆಯುಕ್ತರ ಅಧೀನದಲ್ಲಿ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ **ಬೋಧಕ ವೃಂದದ** (ಬೆಂಗಳೂರು ಮತ್ತು ಮೈಸೂರು ವಿಭಾಗದ ಪ್ರಾಂಶುಪಾಲರ ವಿವರ ಈ ಕೆಳಗಿನಂತಿದೆ :

| ಕ್ರ. ಸಂ | ಬೆಂಗಳೂರು ವಿಭಾಗ | ಮಂಜೂರಾದ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 85 | 72 | 13 |
| 2 | ಬೆಂಗಳೂರು ಉತ್ತರ | 58 | 53 | 5 |
| 3 | ಬೆಂಗಳೂರು ದಕ್ಷಿಣ | 103 | 84 | 19 |
| 4 | ಚಿಕ್ಕಬಳ್ಳಾಪುರ | 130 | 85 | 45 |
| 5 | ಚಿತ್ರದುರ್ಗ | 111 | 97 | 14 |
| 6 | ದಾವಣಗೆರೆ | 159 | 135 | 24 |

| | | | | |
|---|---|---|---|---|
| 7 | ಕೋಲಾರ | 140 | 98 | 42 |
| 8 | ಮಧುಗಿರಿ | 101 | 78 | 23 |
| 9 | ಶಿವಮೊಗ್ಗ | 166 | 146 | 20 |
| 10 | ತುಮಕೂರು | 147 | 120 | 27 |
| 11 | ಆಯುಕ್ತರ ಕಛೇರಿ, ಬೆಂಗಳೂರು | 2 | 2 | 0 |
| 12 | ಸರ್ವಶಿಕ್ಷಣ ಅಭಿಯಾನ, ಬೆಂಗಳೂರು | 12 | 8 | 4 |
| 13 | ಪಠ್ಯಪುಸ್ತಕ ಸಂಘ, ಬೆಂಗಳೂರು | 4 | 4 | 0 |
| 14 | ಕೆ.ಎಸ್.ಇ.ಇ.ಬಿ., ಬೆಂಗಳೂರು | 6 | 6 | 0 |
| 15 | ಸಹ ನಿರ್ದೇಶಕರ ಕಛೇರಿ (ಎಂ.ಎಂ.ಎಸ್.) | 1 | 1 | 0 |
| 16 | ಸಹ ನಿರ್ದೇಶಕರ ಕಛೇರಿ, ಬೆಂಗಳೂರು | 1 | 1 | 0 |
| 17 | ರಾಮನಗರ | 114 | 80 | 34 |
| | **ಒಟ್ಟು** | **1340** | **1070** | **270** |
| **ಮೈಸೂರು ವಿಭಾಗ** | | | | |
| 19 | ಚಾಮರಾಜನಗರ | 96 | 72 | 24 |
| 20 | ಚಿಕ್ಕಮಗಳೂರು | 129 | 97 | 32 |
| 21 | ದಕ್ಷಿಣ ಕನ್ನಡ | 154 | 69 | 85 |
| 22 | ಹಾಸನ | 226 | 191 | 35 |
| 23 | ಕೊಡಗು | 68 | 48 | 20 |
| 24 | ಮಂಡ್ಯ | 211 | 176 | 35 |
| 25 | ಮೈಸೂರು | 221 | 167 | 54 |
| 26 | ಉಡುಪಿ | 101 | 55 | 46 |
| 27 | ಸಹ ನಿರ್ದೇಶಕರ ಕಛೇರಿ, ಮೈಸೂರು | 2 | 0 | 2 |
| | **ಒಟ್ಟು** | **1208** | **875** | **333** |
| **ಬೆಂಗಳೂರು & ಮೈಸೂರು ವಿಭಾಗದ ಒಟ್ಟು** | | **2548** | **1945** | **603** |

## ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ

ಈ ನಿರ್ದೇಶನಾಲಯವು ಸಾಮಾನ್ಯವಾಗಿ ಈ ಕೆಳಕಂಡ ಧ್ಯೇಯೋದ್ದೇಶಗಳನ್ನು ಹೊಂದಿದೆ;

- 6–14 ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡುವುದು.
- ಪ್ರತಿ ಮಗುವು 1 ರಿಂ8 ತರಗತಿಯವರೆಗೆ ಶಾಲೆಯಲ್ಲಿ ಉಳಿಯುವಂತೆ ಮತ್ತು ಪ್ರಾಥಮಿಕ ಹಂತದ ಶಿಕ್ಷಣವನ್ನು ಪೂರೈಸುವಂತೆ ನೋಡಿಕೊಳ್ಳುವುದು.
- ಪ್ರತಿ ಮಗುವು ಕನಿಷ್ಠ ಕಲಿಕಾ ಹಂತವನ್ನು ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳುವುದು.
- ಪ್ರತಿ ಶಿಕ್ಷಕರು ಸಮಯಕ್ಕೆ ಸರಿಯಾಗಿ ಮತ್ತು ತಪ್ಪದೇ ಹಾರಾಗುವಂತೆ ನೋಡಿಕೊಳ್ಳುವುದು.
- ಶಾಲೆಗಳ ಅಭಿವೃದ್ಧಿಯಲ್ಲಿ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿ ಅದರಿಂದ ಪ್ರಾಥಮಿಕ

ಶಿಕ್ಷಣದ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಉಂಟಾಗುವಂತೆ ಸಹಕಾರಿಯಾಗುವುದು.

- ಶಾಲೆಯಿಂದ ಹೊರಗುಳಿದ 6–14 ಶಾಲಾ ವಯೋಮಾನದ ಮಕ್ಕಳನ್ನು, ಚಿಣ್ಣರ ಅಂಗಳ, ವಸತಿಯುತ, ವಸತಿರಹಿತ ಶಾಲೆಗಳು, ಸಂಚಾರಿ ಶಾಲೆ, ಇತ್ಯಾದಿ ಕಾರ್ಯಕ್ರಮಗಳಿಂದ ಶಾಲೆಯ ಮುಖ್ಯವಾಹಿನಿಗೆ ತರುವುದು.
- ಗುಣಾತ್ಮಕ ಪ್ರಾಥಮಿಕ ಶಿಕ್ಷಣ ಒದಗಿಸುವುದು.

ಮುಂದಿನ ಮೂರು ವರ್ಷಗಳಲ್ಲಿ ಈ ಕೆಳಕಂಡ ಗುರಿಗಳನ್ನು ಸಾಧಿಸುವ ಉದ್ದೇಶವನ್ನು ಹೊಂದಲಾಗಿದೆ.

1. ಹಾಲಿ ಇರುವ ರಾಜ್ಯದ ಸಾಕ್ಷರತಾ ಪ್ರಮಾಣವನ್ನು ಶೇಕಡ 80 ಕ್ಕೆ ಹೆಚ್ಚಿಸುವುದು.
2. ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ನಿಃಶೇಷಗೊಳಿಸುವುದು.
3. 6 ರಿಂದ 14 ವಯೋಮಿತಿಯ ಎಲ್ಲಾ ಮಕ್ಕಳು (ಶಾಲೆಗೆ ಸೇರದ ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳು ಸೇರಿದಂತೆ) ಶಾಲೆಗಳಲ್ಲಿ ದಾಖಲಾಗಿ ಕನಿಷ್ಠ 5 ವರ್ಷಗಳ ಶಿಕ್ಷಣವನ್ನು ಪೂರ್ಣಗೊಳಿಸಿ ನಿಗಧಿತ ಕಲಿಕಾ ಸಾಮರ್ಥ್ಯಗಳನ್ನು ಹೊಂದುವಂತೆ ಮಾಡುವುದು.
4. ಶಿಕ್ಷಕರ ಕಲಿಕೆ ಹಾಗೂ ಬೋಧನಾ ಸಾಮರ್ಥ್ಯಗಳನ್ನು ಹೆಚ್ಚಿಸುವುದು.
5. ಗುಣಾತ್ಮಕ ಬದಲಾವಣೆಗಳನ್ನು ತರುವುದರ ಮೂಲಕ ಶೈಕ್ಷಣಿಕ ಸುಧಾರಣೆಯನ್ನು ತರುವುದು.
6. ಅಭಿವೃದ್ಧಿಪರ ಸಮುದಾಯದ ಸಹಭಾಗಿತ್ವವನ್ನು ಖಚಿತಪಡಿಸಿಕೊಳ್ಳುವುದು.
7. ಶಾಲಾಶಿಕ್ಷಣದಿಂದ ಹೊರಗುಳಿದ 6 ರಿಂದ 14 ವಯೋಮಾನದ ಮಕ್ಕಳನ್ನು ವಿಶೇಷ ಸೇತುಬಂಧ ಕಾರ್ಯಕ್ರಮದ ಮೂಲಕ ಶಾಲಾ ಮುಖ್ಯವಾಹಿನಿಗೆ ಸೇರಿಸುವ್ವದು.

2003–04ನೇ ಸಾಲಿನಿಂದ 8ನೇ ತರಗತಿಯ ಶಿಕ್ಷಣವು ಹಿರಿಯ ಪ್ರಾಥಮಿಕ ಶಿಕ್ಷಣ ಹಂತಕ್ಕೆ ಸೇರ್ಪಡೆಯಾದ್ದರಿಂದ, ಒಟ್ಟಾರೆ ಪ್ರಾಥಮಿಕ ಶಿಕ್ಷಣವು 8 ವರ್ಷಗಳ ಅವಧಿಯನ್ನೊಳಗೊಂಡಿದೆ.

**<u>ಹೊರಗುಳಿದವರ ಶೇಕಡಾವಾರು ವಿವರ</u>**

| ಕ್ರಮಸಂಖ್ಯೆ | ತರಗತಿ | 2007–08 | 2008–09 |
|---|---|---|---|
| 1 | 1 ರಿಂದ 5 ನೇ ತರಗತಿ | 6.25% | 6.596% |
| 2 | 1 ರಿಂದ 7 ನೇ ತರಗತಿ | 13.99% | 10.26% |
| 3 | 1 ರಿಂದ 10 ನೇ ತರಗತಿ | 16.24% | 14.79% |

**<u>ಕಡ್ಡಾಯ ಪ್ರಾಥಮಿಕ ಶಿಕ್ಷಣ</u>**

6 ರಿಂದ 14 ವಯೋಮಾನದೊಳಗಿನ ರಾಜ್ಯದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**<u>ದಾಖಲಾತಿ ಆಂದೋಲನ :</u>**

ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ವಿಶೇಷವಾಗಿ ದಾಖಲಾತಿ ಆಂದೋಲನವನ್ನು ನಡೆಸಲಾಯಿತು. ಶಾಲೆಯಿಂದ ಹೊರಗುಳಿದ, ವಿಶೇಷವಾಗಿ ಹೆಣ್ಣುಮಕ್ಕಳು, ಬಾಲಕಾರ್ಮಿಕರು, ಕಸ ಎತ್ತುವವರು ಮತ್ತು ಬಹಳ ಕಾಲದಿಂದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರುವ ಮುಖ್ಯ ಉದ್ದೇಶ ಹೊಂದಿದೆ. ಈ ವರ್ಷ 0.93 ಲಕ್ಷ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ

ಮುಖ್ಯ ವಾಹಿನಿಗೆ ತರಲಾಗಿದೆ

**ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ :**

ಶಾಲೆಯನ್ನು ಮಧ್ಯದಲ್ಲಿಯೇ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತಮಪಡಿಸಲು ಸರ್ಕಾರವು ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣವನ್ನು ಒದಗಿಸಲು ನಿರ್ಧರಿಸಿದೆ. 8 ನೇ ತರಗತಿಯಲ್ಲಿ ಓದುತ್ತಿರುವ ಹೆಣ್ಣು ಮಕ್ಕಳಿಗೆ ಉಚಿತ ಬೈಸಿಕಲ್ ನೀಡಲಾಗುತ್ತಿದೆ.

**ಉಚಿತ ಸಮವಸ್ತ್ರ ವಿತರಣೆ:**

ಯಶಸ್ವೀ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಜೊತೆ ಸಮವಸ್ತ್ರಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. 2008-09ನೇ ಸಾಲಿಗೆ ರೂ.6584.95 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ ಹಾಗೂ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 10.79 ಲಕ್ಷ ವಿದ್ಯಾರ್ಥಿಗಳು ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 54.06 ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

**ಉಚಿತ ಪಠ್ಯಪುಸ್ತಕಗಳ ಹಂಚಿಕೆ :**

ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಏಳನೇ ತರಗತಿಯವರೆಗೆ ಓದುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ, ಎಲ್ಲಾ ಹೆಣ್ಣು ಮಕ್ಕಳಿಗೆ ಮತ್ತು ಪ.ಜಾ/ಪ.ಪಂಗಡದ ಮಕ್ಕಳಿಗೆ ಉಚಿತವಾಗಿ ಪಠ್ಯ ಪುಸ್ತಗಳನ್ನು ಹಂಚಲಾಗಿದೆ. ಒಟ್ಟು ಫಲಾನುಭವಿ ಮಕ್ಕಳ ಸಂಖ್ಯೆ: 66,44,874. ಅನುದಾನಿತ ಶಾಲೆಗಳಲ್ಲಿ 1 ರಿಂದ 8ನೇ ತರಗತಿಯಲ್ಲಿ ಓದುತ್ತಿರುವ 9,84,660 ಮಕ್ಕಳಿಗೆ ಉಚಿತವಾಗಿ ವಿತರಿಸಲಾಗಿದೆ.

**ವಿದ್ಯಾರ್ಥಿಗಳಿಗೆ ಬೈಸಿಕಲ್**

ಗ್ರಾಮೀಣ ಪ್ರದೇಶಗಳಿಂದ ಬರುವ ಹೆಣ್ಣುಮಕ್ಕಳು ಎದುರಿಸುವ ಸಮಸ್ಯೆಗಳನ್ನು ಗಮನದಲ್ಲಿರಿಸಿ, ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಧೈರ್ಯವನ್ನು ಹೆಚ್ಚಿಸಲು ಮತ್ತು ಅವರು ಶಾಲೆಯಿಂದ ಹೊರಗುಳಿಯುವ ಪ್ರಮಾಣವನ್ನು ಕಡಿಮೆ ಮಾಡಲು, ಕನಾಟಕ ರಾಜ್ಯ ಸರ್ಕಾರವು ಎಂಟನೇ ತರಗತಿಯಲ್ಲಿ ಓದುವ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಹೆಣ್ಣುಮಕ್ಕಳಿಗೆ ಉಚಿತ ಬೈಸಿಕಲ್ ನೀಡುವ ಕಾರ್ಯಕ್ರಮವನ್ನು ಜಾರಿಗೆ ತಂದಿತು.

ಈ ಯೋಜನೆಯು 2006-07ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ 1,75,023 ಬಾಲಕಿಯರು ಮತ್ತು 2,23,300 ಬಾಲಕರು ಫಲಾನುಭವಿಗಳಾಗಿರುತ್ತಾರೆ. 2006-07ನೇ ಸಾಲಿನಲ್ಲಿ 202 ಕ್ಷೇತ್ರಗಳಲ್ಲಿ 2,21,300 ಬಾಲಕಿಯರು ಮತ್ತು 2,13,700 ಬಾಲಕರು ಈ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿರುತ್ತಾರೆ.

**ಉಚಿತ ಶಾಲಾಬ್ಯಾಗ್ ಮತ್ತು ನೋಟ್ ಪುಸ್ತಕಗಳು**

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದ ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಲು ಮತ್ತು 5 ರಿಂದ 7 ನೇ ತರಗತಿಯವರೆಗಿನ ಮಕ್ಕಳು ಶಾಲೆಯಿಂದ ಹೊರಗುಳಿಯುವುದನ್ನು ತಪ್ಪಿಸಲು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಓದುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದ ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನು ಹಾಗೂ 6 ನೋಟ್‌ಪುಸ್ತಕಗಳನ್ನು ವಿತರಿಸುವ ಯೋಜನೆಯನ್ನು ಜಾರಿಗೆ ತರಲಾಯಿತು. 2008-09 ನೇ ಸಾಲಿನಲ್ಲಿ, 12.15 ಲಕ್ಷ ಮಕ್ಕಳು ಈ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿರುತ್ತಾರೆ.

**ಅಕ್ಷರ ದಾಸೋಹ- ಬಿಸಿ ಊಟ ಕಾರ್ಯಕ್ರಮ**

ರಾಜ್ಯದಾದ್ಯಂತ 1 ರಿಂದ 10 ನೇ ತರಗತಿಯಲ್ಲಿ ಓದುವ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟವನ್ನು ನೀಡಲಾಗುತ್ತಿದೆ.

ವಿದ್ಯಾರ್ಥಿಗಳು:-

| | ಪ್ರಾಥಮಿಕ ಶಾಲೆ | ಪ್ರೌಢ ಶಾಲೆ | ಒಟ್ಟು |
|---|---|---|---|
| ದಾಖಲಾತಿ | 5733415 | 2044826 | 7778241 |
| ಹಾಜರಾತಿ | 5392188 | 1956004 | 7348192 |
| ಫಲಾನುಭವಿಗಳು | 5048237 | 1812358 | 6860595 |

ಶಾಲೆಗಳು

| ಶಾಲೆ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 44849 | 4138 | 48987 |
| ಅನುದಾನಿತ | 3308 | 2820 | 5228 |

ಕೆಲವು ವಾಸ್ತವಾಂಶಗಳು:

1 ಎಲ್ಲಾ ಅಡುಗೆ ಕೇಂದ್ರಗಳಿಗೆ ಅಡುಗೆ ಕೋಣೆಗಳ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.
2 ಜಿಲ್ಲಾ ಪಂಚಾಯತಿಯ ವಿವಿಧ ಯೋಜನೆಗಳಲ್ಲಿ ಸುಮಾರು 13302 ಕೋಣೆಗಳ ನಿರ್ಮಾಣವಾಗಿರುತ್ತದೆ.
3 ಅಡುಗೆ ಅನಿಲವನ್ನು ಬಿಸಿಊಟ ತಯಾರಿಕೆಗಾಗಿಯೇ ಪ್ರತ್ಯೇಕವಾಗಿ ಬಳಸಲಾಗುತ್ತಿದೆ.
4 ವಿಟಮಿನ್-ಎ (20 ಎಂ.ಜಿ) ಮಾತ್ರೆ ವರ್ಷಕ್ಕೆ 2 ಮಾತ್ರೆ.
5 ಆಲ್ ಬೆಂಡಜೋಲ್ (ಜಂತು ಹುಳು ನಿವಾರಕ- 400 ಎಂ.ಜಿ) ಮಾತ್ರೆ ವರ್ಷಕ್ಕೆ 2 ಮಾತ್ರೆ.
6 ಐರನ್ ಅಂಡ್ ಫೋಲಿಕ್ ಆಸಿಡ್ ಮಾತ್ರೆಗಳು-20 ಎಂ.ಜಿ- ಎರಡು ದಿನಕ್ಕೊಮ್ಮೆ ( ವರ್ಷಕ್ಕೆ 108 ಮಾತ್ರೆಗಳನ್ನು 36 ವಾರಗಳಲ್ಲಿ)
7 ಕೇಂದ್ರ ಸರ್ಕಾರವು 1 ರಿಂದ 5 ನೇ ತರಗತಿಯಲ್ಲಿ ಓದುವ ಮಕ್ಕಳಿಗೆ, 100 ಗ್ರಾಂ ಅಕ್ಕಿ ಮತ್ತು ರೂ.1.58/ಮಗುವಿಗೆ/ದಿನ ಅಡುಗೆ ಖರ್ಚಿಗಾಗಿ ಒದಗಿಸುತ್ತದೆ, 6 ರಿಂದ 8 ನೇ ತರಗತಿಯಲ್ಲಿ ಓದುವ ಮಕ್ಕಳಿಗೆ, 150 ಗ್ರಾಂ ಅಕ್ಕಿ ಮತ್ತು ರೂ.2.10/ಮಗುವಿಗೆ/ದಿನ ಅಡುಗೆ ಖರ್ಚಿಗಾಗಿ ಒದಗಿಸುತ್ತದೆ.
8 ರಾಜ್ಯ ಸರ್ಕಾರವು 9 ರಿಂದ 10 ನೇ ತರಗತಿಯಲ್ಲಿ ಓದುವ ಮಕ್ಕಳಿಗೆ, 150 ಗ್ರಾಂ ಎಪಿಎಲ್ ಅಕ್ಕಿ ಮತ್ತು ರೂ.13.71 ಒದಗಿಸುತ್ತದೆ,

**ಸರ್ಕಾರೇತರ ಸಂಘಗಳ ಪಾತ್ರ**

| ಸಂಘ ಸಂಸ್ಥೆಗಳ ಸಂಖ್ಯೆ | ಶಾಲೆಗಳ ಸಂಖ್ಯೆ | ಮಕ್ಕಳ ಸಂಖ್ಯೆ |
|---|---|---|
| 106 | 4560 | 1098076 |

**ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ**

ರಾಜ್ಯದ ಸರ್ಕಾರಿ ಶಾಲೆಯ 1 ರಿಂದ 10 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಿಲಾಗಿದೆ. 2008-09 ಸಾಲಿನಲ್ಲಿಯೂ ಸಹ ಸದರಿ ಕಾರ್ಯಕ್ರಮವನ್ನು ನಡೆಸಲಾಗಿದೆ.

| ವರ್ಷ | ಒಟ್ಟು ಮಕ್ಕಳು | ಚಿಕಿತ್ಸೆ ಪಡೆದ ಮಕ್ಕಳ ಸಂಖ್ಯೆ | ತಜ್ಞ ವೈದ್ಯರಿಂದ ರಾಜ್ಯ ಮಟ್ಟದಲ್ಲಿ ಚಿಕಿತ್ಸೆಗೊಳಗಾದ ಮಕ್ಕಳ ಸಂಖ್ಯೆ |
|---|---|---|---|
| 2006-07 | 5093590 | 434122 | 660 |
| 2007-08 | 7252670 | 820175 | 1797 |
| 2008-09 | 6932577 | 1405711 | |

**ಸಾಂಸ್ಕೃತಿಕ ಚಟುವಟಿಕೆಗಳು:**

2008-09 ನೇ ಸಾಲಿನಲ್ಲಿ ರೂ. 2.30 ಲಕ್ಷ ಅನುದಾನವನ್ನು 'ಪ್ರತಿಭಾ ಕಾರಂಜಿ' ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಲಾಗಿತ್ತು. ಪ್ರತೀಜಿಲ್ಲೆಯ ಉಪನಿರ್ದೇಶಕರುಗಳು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು ಸುಮಾರು 90 ಲಕ್ಷ ವಿದ್ಯಾರ್ಥಿಗಳು ಇದರಿಂದ ಲಾಭ ಪಡೆದಿರುತ್ತಾರೆ.

**ಪಾಲಿಸಿ ಪ್ಲಾನಿಂಗ್ ಘಟಕ (ಪಿಪಿಯು)**

ಕರ್ನಾಟಕ ಸರ್ಕಾರವು ಅಜೀಂ ಪ್ರೇಂಜಿ ಪ್ರತಿಷ್ಠಾನದ ಸಹಯೋಗದೊಂದಿಗೆ **ಪಾಲಿಸಿ ಪ್ಲಾನಿಂಗ್ ಘಟಕ**ವನ್ನು ಮಾರ್ಚ್ 2003 ರಲ್ಲಿ ಸ್ಥಾಪಿಸಿದ್ದು, ಅದರ ಮೂಲ ಉದ್ದೇಶವು ಶೈಕ್ಷಣಿಕ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಮತ್ತು ಬೃಹತ್ ಹಾಗೂ ಸಣ್ಣ ಯೋಜನೆಗಳ ಸಂದರ್ಭದಲ್ಲಿ ಕೊಡುಗೆ ನೀಡುವುದು. ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಅಜೀಂ ಪ್ರೇಂಜಿ ಪ್ರತಿಷ್ಠಾನದ ನಡುವೆ ಸಹಿಯಾದ ಒಡಂಬಡಿಕೆ ಪತ್ರದಿಂದ ಈ ಸಹಯೋಗದ ಉಗಮವಾಗಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಅಜೀಂ ಪ್ರೇಂಜಿ ಪ್ರತಿಷ್ಠಾನವು ತಯಾರಿಸಿದ "ಪಿಪಿಯು ವರ್ಕಿಂಗ್ ಡಾಕ್ಯುಮೆಂಟ್ "ಅನ್ನು ಆಧರಿಸಿ ಈ ಘಟಕದ ಸ್ಥಾಪನೆಯಾಗಿರುತ್ತದೆ.

**ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳು (ಎಂ.ಡಿ.ಪಿ)**

ನಿರ್ವಹಣಾ ಅಭಿವೃದ್ಧಿ ಸುಗಮಕಾರರಿಂದ (ಎಂ.ಡಿ.ಎಫ್ ಗಳಿಂದ) ನಿರ್ವಹಣಾ ತರಬೇತಿ (ಕ್ಯು.ಐ.ಪಿ) :-

1 ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ (ಸಿ.ಬಿ.ಎಸ್.ಎಂ.ಎಸ್) ನಿಂದ ತರಬೇತಿ ಪಡೆದು ಪ್ರಮಾಣೀಕರಣಗೊಂಡ 75 ನಿರ್ವಹಣಾ ಅಭಿವೃದ್ಧಿ ಸುಗಮಕಾರರ (ಎಂ.ಡಿ.ಎಫ್‌ಗಳ) ಮೂಲಕ 16 ಜಿಲ್ಲೆಗಳಲ್ಲಿ 1530 ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಿಗೆ ಎಂ.ಡಿ.ಪಿ ತರಬೇತಿ. ಈ 1530 ಶಿಬಿರಾರ್ಥಿಗಳಿಂದ 765 ಗುಣಮಟ್ಟ ಅಭಿವೃದ್ಧಿ ಪ್ರಕಲ್ಪಗಳ ತಯಾರಿ ಮತ್ತು ಅನುಷ್ಠಾನ.

2 ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರುಗಳಿಗೆ, ಸಿಇಎಒ ಗಳಿಗೆ, ಬಿಆರ್‌ಸಿ ಗಳಿಗೆ, ಬಿಇಒ ಗಳಿಗೆ ಸಿಎಲ್‌ಹೆಚ್‌ಆರ್‌ಡಿ ಮೂಲಕ ವೈಯಕ್ತಿಕ ಪರಿಣಾಮಗಳು ಮತ್ತು ನಾಯಕತ್ವದ ಬಗ್ಗೆ 5 ದಿನಗಳ ತರಬೇತಿ ಕಾರ್ಯಕ್ರಮ. ಸಿಎಲ್‌ಹೆಚ್‌ಆರ್‌ಡಿ ಮೂಲಕ ವೈಯಕ್ತಿಕ ಪರಿಣಾಮಗಳು ಮತ್ತು ನಾಯಕತ್ವದ ಬಗ್ಗೆ 5 ದಿನಗಳ ತರಬೇತಿ ಕಾರ್ಯಕ್ರಮವನ್ನು ನಿವೃತ್ತ ಅಧಿಕಾರಿಗಳಿಗೆ ನೀಡಲಾಯಿತು.

3 ರಾಜ್ಯ ಮಟ್ಟದಲ್ಲಿ ಗುಣಮಟ್ಟ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

4 ಕೆಎಸ್‌ಕ್ಯೂಎಓ/ಕೆಎಸ್‌ಕ್ಯೂಇ ಅಡಿಯಲ್ಲಿ ನಡೆಸಲಾದ ಕಾರ್ಯಕ್ರಮಗಳು. ಶಾಲೆಯ ಶೈಕ್ಷಣಿಕ ಯೋಜನಾ ಮಾರ್ಗಸೂಚಿಗಳನ್ನು ತಯಾರಿಸುವಲ್ಲಿ ಸಕ್ರಿಯ ಪಾತ್ರ. ಎಲ್ಲಾ ಕ್ಷೇತ್ರಗಳಲ್ಲಿಯೂ ಕೆಎಸ್‌ಕ್ಯೂಎಓ ನ ಫಲಿತಾಂಶಗಳನ್ನು ವಿಶ್ಲೇಷಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ನಡೆಸಲಾಯಿತು ಮತ್ತು ಶಾಲೆಯ ಶೈಕ್ಷಣಿಕ ಯೋಜನೆಗಳನ್ನು ತಯಾರಿಸುವುದು.

5 ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಕನ್ನಡದಲ್ಲಿ ಪಠ್ಯವಸ್ತು ತಯಾರಿಕೆ–10 ನಿರ್ವಹಣಾ ಅಭಿವೃದ್ಧಿ ತಜ್ಞರಿಂದ 22 ಎಂಡಿಎಫ್ ಗಳು 22 ತಯಾರಿಸಿರುತ್ತಾರೆ. ಅವುಗಳನ್ನು ಮುದ್ರಿಸಿ ವಿವಿಧ ಅಧಿಕಾರಿಗಳಿಗೆ ಹಾಗೂ ಸಂಸ್ಥೆಗಳಿಗೆ ವಿತರಿಸುವುದು.

**ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಾಂಕನ :**

ಎಂಡಿಪಿ ಕಾರ್ಯಕ್ರಮಗಳ ಮತ್ತು ಪ್ರಶಿಕ್ಷಣಾರ್ಥಿಗಳು ತಯಾರಿಸಿದ 3 ಪ್ರಾಜೆಕ್ಟ್‌ಗಳ ಮೌಲ್ಯಾಂಕನ ಅಧ್ಯಯನ ಕಾರ್ಯವನ್ನು ಬೆಂಗಳೂರು ಉತ್ತರ, ಉಡುಪಿ, ಮಂಡ್ಯ, ಮೈಸೂರು, ಬಳ್ಳಾರಿ, ಕೋಲಾರ, ಬಾಗಲಕೋಟೆ ಜಿಲ್ಲೆಗಳಲ್ಲಿ ನಡೆಸಲಾಯಿತು. ಈ ಅಧ್ಯಯನ ಕಾರ್ಯವನ್ನು ನಾಲ್ಕು ಸಂಸ್ಥೆಗಳಾದ ; ಇನ್ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ ಚೇಂಜ್, ಇಂಟರ್ ಫೇಸ್ ಇಂಡಿಯಾ ಡೆವಲಪ್‌ಮೆಂಟ್ ಕನ್ಸಲ್ಟೆಂಟ್ಸ್. ಡಾ॥ ಎಸ್.ಎನ್.ಪ್ರಸಾದ್, ಅಜ್ಹೀಮ್ ಪ್ರೇಮ್‌ಜಿ ಫೌಂಡೇಷನ್, ಇವು ನಡೆಸಿಕೊಟ್ಟಿರುತ್ತವೆ.

**ನಮ್ಮ ಶಾಲೆ ಕಾರ್ಯಕ್ರಮ**

ಸಮುದಾಯವನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸುವ ನಿಟ್ಟಿನಲ್ಲಿ **ನಮ್ಮ ಶಾಲೆ** ಕಾರ್ಯಕ್ರಮವನ್ನು ಕ್ಲಸ ್ರ್‌ಗಳಲ್ಲಿ ನಡೆಸಲಾಯಿತು.

ಕುಂದೂರು ಕ್ಲಸ್ಟರ್ – ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ,
ಗಾವಡಗೆರೆ ಕ್ಲಸ್ಟರ್ – ಹುಣಸೂರು ತಾಲೂಕು, ಮೈಸೂರು ಜಿಲ್ಲೆ,
ರುಕ್ಮಾಪುರ ಕ್ಲಸ್ಟರ್ – ಸುರಪುರ ತಾಲೂಕು, ಯಾದಗಿರ್ ಜಿಲ್ಲೆ,
ಮಿರ್ಜಾನ್ ಕ್ಲಸ್ಟರ್ – ಕುಮಟ ತಾಲೂಕು, ಉತ್ತರ ಕನ್ನಡ ಜಿಲ್ಲೆ.

**ಸಮುದಾಯದತ್ತ ಶಾಲೆ :**

ಪ್ರಾಥಮಿಕ ಶಿಕ್ಷಣವನ್ನು ಗುಣಾತ್ಮಕವಾಗಿ ಅಭಿವೃದ್ಧಿಗೊಳಿಸಲು ಸಮುದಾಯದ ಪಾಲ್ಗೊಳ್ಳುವಿಕೆ ಉತ್ತೇಜಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಆ ದಿನದಂದು ಶಿಕ್ಷಣ ಸಚಿವರು, ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳು ಶಾಲೆಗಳಿಗೆ ಮತ್ತು ಗ್ರಾಮಗಳಿಗೆ ಭೇಟಿ ನೀಡಿರುತ್ತಾರೆ.

ಇದು ಜಾಗೃತಿಯನ್ನು ಮೂಡಿಸುವ ಮತ್ತು ಪೋಷಕರು, ಸಮುದಾಯದ ಸದಸ್ಯರು ಹಾಗೂ ಜನಪ್ರತಿನಿಧಿಗಳೊಡನೆ ಮಕ್ಕಳ ಶೈಕ್ಷಣಿಕ ಪ್ರಗತಿ, ಶಾಲೆಯ ಅವಶ್ಯಕತೆಗಳ ಬಗ್ಗೆ ಸಮಾಲೋಚಿಸುವ (ಕಾರ್ಯಕ್ರಮಗಳನ್ನು ಸಿದ್ಧಪಡಿಸುವ) ಮೂಲಕ "**ಶಾಲೆ ಸಮುದಾಯದ ಆಸ್ತಿ**" ಎಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಾಗಿದೆ. ಈ ಕಾರ್ಯಕ್ರಮವು 2000 ದ ನವೆಂಬರ್‌ನಿಂದ ಆರಂಭವಾಗಿದೆ. ಇದರ ಅನುಷ್ಠಾನದಿಂದ ವಿದ್ಯಾರ್ಥಿಗಳ ಹಾಜರಾತಿ, ಶಿಕ್ಷಕರ ಕಾರ್ಯ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಉತ್ತೇಜಿಸುವ ಸಲುವಾಗಿ ಮನೆಮನೆಗೆ ಹೋಗಿ ಅವರ ಪೋಷಕರನ್ನು ಸಂಪರ್ಕಿಸಲಾಗಿದೆ.

**<u>ಶಿಕ್ಷಣ ಸಂವಾದ :</u>**

ಅಕ್ಟೋಬರ್ 2000 ರಿಂದ ಪ್ರತಿ ತಿಂಗಳು ದೂರದರ್ಶನ ಹಾಗೂ "ಆಕಾಶವಾಣಿಯಲ್ಲಿ ಶಿಕ್ಷಕರ ಸಂವಾದ" ಕಾರ್ಯಕ್ರಮ ಪ್ರಸಾರಗೊಳ್ಳುತ್ತಿದೆ. ಈ ಕಾರ್ಯಕ್ರಮದಲ್ಲಿ ಆಸಕ್ತ ಪೋಷಕರು/ಸಾರ್ವಜನಿಕರು ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಸುಧಾರಣೆಗಳ ಬಗ್ಗೆ ಸನ್ಮಾನ್ಯ ಶಿಕ್ಷಣ ಸಚಿವರೊಡನೆ ನೇರ ಚರ್ಚೆ ನಡೆಸಬಹುದಾಗಿದೆ. ಈ ಕಾರ್ಯಕ್ರಮದಿಂದ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿದೆ.

**<u>ಶಿಕ್ಷಣ ವಾರ್ತೆ :</u>**

ಸಾರ್ವಜನಿಕ ಶಿಕ್ಷಣ ಇಲಾಖೆಯು ಕಳೆದ 10 ವರ್ಷಗಳಿಂದ ಶೈಕ್ಷಣಿಕ ಶಿಕ್ಷಣ ವಾರ್ತೆಯ ಪಾಕ್ಷಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ಪತ್ರಿಕೆಯ ವ್ಯಾಪ್ತಿ ಹಾಗೂ ವಿಷಯ ವಿಸ್ತಾರವನ್ನು ಹೆಚ್ಚಿಸುವ ದೃಷ್ಟಿಯಿಂದ 2002–03ರಲ್ಲಿ 4 ಪುಟಗಳಿಂದ 20 ಪುಟಗಳಿಗೆ ಹೆಚ್ಚಿಸಿ ಮಾಸಿಕ ಪತ್ರಿಕೆಯನ್ನಾಗಿ ಮಾಡಲಾಯಿತು. ಹೊಸ ಶಿಕ್ಷಣ ಟ್ರಸ್ಟ್‌ಗಳು, ಅಭಿವೃದ್ಧಿ ಹೊಂದುತ್ತಿರುವ ಶಾಲೆಗಳ ಸಾಧನೆಗಳು, ಶಿಕ್ಷಕರು, ಶಿಕ್ಷಣ ತಜ್ಞರು, ಇಲಾಖೆಗೆ ಸಂಬಂಧಿಸಿದ ಅಂಕಿ ಅಂಶಗಳು, ಶೈಕ್ಷಣಿಕ ಆಡಳಿತ ವಿಷಯಗಳು, ಅಭಿಪ್ರಾಯಗಳು ಇತ್ಯಾದಿ ವಿಷಯಗಳನ್ನು ಒಳಗೊಂಡ ಪತ್ರಿಕೆಯ ಗಾತ್ರವನ್ನು 2005–06 ರಿಂದ 32 ಪುಟಗಳಿಗೆ ಹೆಚ್ಚಿಸಲಾಯಿತು. ಈ ಪತ್ರಿಕೆಯ ಮುದ್ರಣಕಾರ್ಯ ಹಾಗೂ ಸರಬರಾಜಿಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚವನ್ನು ಸರ್ವ ಶಿಕ್ಷಣ ಅಭಿಯಾನ ವಿಭಾಗವು ಭರಿಸುತ್ತದೆ ಮತ್ತು ಹೆಚ್ಚಿನ ಶೈಕ್ಷಣಿಕ ಮೌಲ್ಯವನ್ನು ಈ ಪತ್ರಿಕೆಗೆ ನೀಡಲಾಗುತ್ತಿದೆ.

**<u>ಗುಣಮಂಥನ ಕಾರ್ಯಕ್ರಮದಡಿಯಲ್ಲಿ ನಡೆಸಲಾದ ಚಟುವಟಿಕೆಗಳು:</u>**

- ಎಲ್ಲಾ ಸರ್ಕಾರಿ ಅನುದಾನಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮೌಲ್ಯಾಂಕನವನ್ನು ಶೇ.40ಕ್ಕಿಂತ ಕಡಿಮೆ ಇಲ್ಲದಾ ಮತ್ತು ಸ್ವಯಂ ಸೇವಾ ಶಾಲೆಗಳಲ್ಲಿ ಶೇ.5 ಕ್ಕಿಂತ ಕಡಿಮೆಯಿಲ್ಲದಂತೆ ಹಿಂದಿನ ವರ್ಷದಲ್ಲಿ ಮೌಲ್ಯಾಂಕನದಲ್ಲಿ ಸಾಧನೆ ಮಾಡಲಾಗಿದೆ. ಇದರ ಜೊತೆಗೆ ಎಲ್ಲಾ ಉರ್ದು ಮತ್ತು ಮರಾಠಿ ಮಾಧ್ಯಮದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳನ್ನು ಸಹಾ ಸೇರಿಸಲಾಗಿದೆ.
- 5 ಮತ್ತು 7ನೇ ತರಗತಿಗಳಲ್ಲಿನ ಮೌಲ್ಯಾಂಕನ ಫಲಿತಾಂಶವು ಈ ಕೆಳಕಂಡಂತಿದೆ.

| | | |
|---|---|---|
| ಶಾಲೆಗಳ ಸಂಖ್ಯೆ | ಪಾಠ ಕ್ರಮ ಭಾಗ – ಅ<br>ಪಾಠ ಕ್ರಮ ಭಾಗ – ಆ | 15,55,623 |
| ಪಾಲ್ಗೊಂಡ ಮಕ್ಕಳು | 5ನೇ ತರಗತಿ<br>7ನೇ ತರಗತಿ | 791910<br>763613 |
| | ಒಟ್ಟು | 1555623 |
| ಸಾಧನೆಯ ಅಂತಸ್ತು | 5ನೇ ತರಗತಿ<br>7ನೇ ತರಗತಿ | ಶೇ. 71.24<br>ಶೇ. 71.74 |

- ಆಯ್ಕೆ ವಿಷಯ ಪ್ರಥಮ ಭಾಷೆ (ತಾಯಿನುಡಿ– ಕನ್ನಡ ಉರ್ದು ಮತ್ತು ಮರಾಠಿ). ದ್ವಿತೀಯ / ತೃತೀಯ ಭಾಷೆ – ಇಂಗ್ಲೀಷ್, ಗಣಿತ, ಇವಿಎಸ್/ ವಿಜ್ಞಾನ ಮತ್ತು ಸಮಾಜ ವಿಜ್ಞಾನ, ಭಾಗ–ಬಿ, ಆಯ್ಕೆ (+2 ಕನ್ನಡ ಮಾಧ್ಯಮ ಶಾಲೆಗಳು ಒಂದು ಸಮೂದಂತೆ 7ನೇ ತರಗತಿ ಮಾತ್ರ) ಆಯ್ಕೆ ಸಾಮರ್ಥ್ಯಗಳು/ಕಲಿಕೆಯ ಪರಿಣಾಮದಂತೆ ಆಯ್ಕೆಯನ್ನು ಮೊದಲನೆ ಎರಡು ರೀತಿಯಲ್ಲಿ ಅರ್ಥೈಸಲಾಗಿದೆ.

**ರಾಜ್ಯದ ಪ್ರಮುಖ ಪಾತ್ರಗಳು**

ಶಾಲೆಯಲ್ಲಿ ನಲಿ-ಕಲಿ:

ಶೈಕ್ಷಣಿಕ ಸಂಶೋಧನೆ ಆಧಾರದ ಮೇಲೆ ಕಲಿಕೆ ಸಂಬಂಧವಾಗಿ ಪ್ರಥಮ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ಕಲಿಕಾ ಭಾಷೆಯು ಓದುವ, ಬರೆಯುವ ಮತ್ತು ಸಂಪರ್ಕ, ಅಂಕಗಣಿತ ಕುಶಲ ಕಾರ್ಯಕ್ರಮಗಳು ಮತ್ತು ನೈಸರ್ಗಿಕ ಪರಿಸರ ವಿಜ್ಞಾನ ಹಾಗೂ ಸಾಮಾಜಿಕ ಆಧಾರಗಳು ವಿಶ್ವವ್ಯಾಪಿಯಾಗಿದೆ. ಒಟ್ಟಿನಲ್ಲಿ ಸ್ಪಷ್ಟವಾಗಿ ಅರ್ಥವಾಗುವ ಮತ್ತು ತಿಳಿಯುವ ಚಟುವಟಿಕೆಗಳನ್ನು ಗೊತ್ತುಪಡಿಸಲಾಗಿದೆ. ಈ ಚಟುವಟಿಕೆಗಳು ವಿನ್ಯಾಸ ಮೂಲಕ ಶಾಲಾ ಪಾಠಕ್ರಮವಾಗಿದೆ. ಎಲ್ಲಾ ಶಾಲೆಗಳಲ್ಲಿ ಕಲಿಕಾ ಆಧಾರಿತ ಚಟುವಟಿಕೆಗಳ ಜೊತೆಗೆ ವಿವಿಧ ವರ್ಗದ ಮೌಲ್ಯಾಧಾರಿತ ಚಟುವಟಿಕೆ ಮತ್ತು 5ನೇ ತರಗತಿಯ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 30 ರಿಂದ 50 ಕ್ಕಿಂತ ಮೀರದಂತೆ ನಿರ್ದಿಷ್ಟವಾಗಿ ಮಕ್ಕಳ ದಾಖಲಾತಿ ಇರುವಂತೆ ನಿರ್ದೇಶಿಸಲಾಗಿದೆ.

ನಲಿ-ಕಲಿಯನ್ನು ಶಾಲೆಗಳಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಪ್ರಾರಂಭದಲ್ಲಿಯೂ ಸಹ ನಡೆಸಲಾಗುತ್ತಿದೆ. ಈ ಕಾರ್ಯಕ್ರಮವನ್ನು 2005-06ರಲ್ಲಿ ವಿಸ್ತರಿಸಲಾಗಿತ್ತು. ಇದನ್ನು 2006-07ರಲ್ಲೂ ವಿಸ್ತರಿಸಲಾಗಿದೆ ಮತ್ತು 2008-09 ರಲ್ಲಿ ಮುಂದುವರಿಸಲಾಗಿದೆ.

13691 ಶಾಲೆಗಳಲ್ಲಿ 2008-09ರಲ್ಲಿ 1 ಮತ್ತು 2ನೇ ತರಗತಿಯ ಶಾಲೆಗಳಲ್ಲಿ ನಲಿಕಲಿಯನ್ನು ಕಲಿಕೆಗೆ ಪ್ರಸ್ತಾಪ ಮಾಡಲಾಗಿದೆ. ಇದನ್ನು 1 ಮತ್ತು 2ನೇ ತರಗತಿಯ ಎಲ್ಲಾ ಶಾಲೆಗಳಿಗೂ ವಿಸ್ತರಿಸುವಂತೆ ಪ್ರಸ್ತಾವಿಸಲಾಗಿದೆ. ಎಲ್ಲಾ ಚಿಕ್ಕ ಶಾಲೆಗಳಲ್ಲಿ ಅಂಕಗಣಿತದ ನಲಿಕಲಿಕೆಗೆ ಕಲಿಕಾ ಸಾಮಾಗ್ರಿಗಳನ್ನು ಒದಗಿಸಲಾಗಿದೆ. ಇತರ ಶಾಲೆಗಳಿಗೂ ಅಂಗವಾಗಿ 8 ದಿನಗಳಲ್ಲಿ ಶಾಲಾ ಶಿಕ್ಷಕರೂ ತರಬೇತಿ ನೀಡುವಂತೆ ಪ್ರಸ್ತಾಪ ಮಾಡಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ :

2008-09ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಲ್ಲಿ ಮಂಜೂರಾಗಿರುವ 1266 ಶಿಕ್ಷಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನೇಮಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಎಜುಸ್ಯಾಟ್ (ಇಆಗಿಖಂಖಿ) ಯೋಜನೆ :

ರಾಜ್ಯದ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ವಿದ್ಯುನ್ಮಾನ ಮಾಧ್ಯಮದ (ಚಿಣಜಟಟುಣಜ) ಮೂಲಕ ಶಿಕ್ಷಣವನ್ನು ನೀಡುವ ದಿಸೆಯಲ್ಲಿ ಇಸ್ರೋ (ಖಖಖಔ) ಹಾಗೂ ಡಿ.ಎಸ್.ಇ.ಆರ್.ಟಿ (ಆಖಇಖಖಿ) ಸಹಯೋಗದೊಂದಿಗೆ ಹೊಸದಾಗಿ ಎಜುಸ್ಯಾಟ್ (ಇಆಗಿಖಂಖಿ) ಕಾರ್ಯಕ್ರಮವನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ದಿನ ಎರಡು ವಿಡಿಯೋ ಪಾಠಗಳನ್ನು ಟೆಲಿಕಾಸ್ಟ್ ಮಾಡಲಾಗುತ್ತದೆ. 2004-05ರಲ್ಲಿ ಚಾಮರಾಜನಗರದಲ್ಲಿ ಕಾರ್ಯರೂಪಕ್ಕೆ ತರಲಾಗಿದ್ದುದನ್ನು 2005-06ರಲ್ಲಿ ಗುಲ್ಬರ್ಗಾ ಜಿಲ್ಲೆಗೂ ವಿಸ್ತರಿಸಲಾಗಿದೆ. ಈ ಕಾರ್ಯಕ್ರಮವನ್ನು ಪ್ರಸ್ತುತ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

**ಸುವರ್ಣ ಆರೋಗ್ಯ :**

ಪ್ರಸ್ತುತ ಸಾಲಿನಿಂದ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಆಚರಣೆಗೆ ತರಲಾಗಿದೆ.

# <u>ಪ್ರೌಢ ಶಿಕ್ಷಣ ನಿರ್ದೇಶನಾಲಯ</u>

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು (8 ರಿಂದ 10 ನೇ ತರಗತಿಯವರೆಗೆ) ನಿರ್ದೇಶಕರು, ಪ್ರೌಢ ಶಿಕ್ಷನ ಇವರ ಅಧೀನಕ್ಕೆ ಬರುತ್ತವೆ.ಪ್ರೌಢ ಶಿಕ್ಷಣವು ಕರ್ನಾಟಕ ರಾಜ್ಯದಲ್ಲಿ ಉಚಿತವಾಗಿದ್ದರೂ ಸಹ ಪ್ರಾಥಮಿಕ ಶಿಕ್ಷಣದಂತೆ ಕಡ್ಡಾಯವಾಗಿರುವುದಿಲ್ಲ. ಇತ್ತೀಚಿನ ದಶಕಗಳಲ್ಲಿ ಸತತ ಪ್ರಯತ್ನದಿಂದಾಗಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಪರಿಣಾಮವಾಗಿ, ಪ್ರೌಢ ಶಿಕ್ಷಣಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಿದೆ.

**ಶಾಲೆಗಳು ಮತ್ತು ಶಿಕ್ಷಕರ ಸಂಖ್ಯೆಯು** ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ವಿವರ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು |
|---|---|---|---|---|---|
| 1 | ಪ್ರೌಢ ಶಾಲೆಗಳು | 4397 | 2997 | 4369 | 11753 |
| 2 | ಶಿಕ್ಷಕರು | 35619 | 24045 | 39443 | 99106 |

**ವಿದ್ಯಾರ್ಥಿಗಳ ಸಂಖ್ಯೆ:**

| ಕ್ರಮ ಸಂಖ್ಯೆ | ವಿವರ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು |
|---|---|---|---|---|---|
| | 8 ನೇ ತರಗತಿ | 467693 | 271113 | 225529 | 964335 |
| | 9 ನೇ ತರಗತಿ | 350978 | 274417 | 206219 | 831614 |
| | 10 ನೇ ತರಗತಿ | 286903 | 254152 | 185040 | 726095 |
| | **ಒಟ್ಟು** | **1105574** | **799682** | **616788** | **2522044** |

**<u>ಮೂಲ ಭೂತ ಸವಲತ್ತುಗಳು:</u>**

ನಗರ ಪ್ರದೇಶಗಳಲ್ಲಿ ಶೌಚಾಲಯ, ಕುಡಿಯುವ ನೀರು ಮತ್ತು ಉಪಕರಣಗಳನ್ನು ಒದಗಿಸುವ ಸಲುವಾಗಿ 2008-09ನೇ ಸಾಲಿನಲ್ಲಿ ಪಂಚ ಸೌಲಭ್ಯ ಯೋಜನೆಯಡಿಯಲ್ಲಿ ರೂ. 3200.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ. 736 ಶಾಲೆಗಳಲ್ಲಿ ಶೌಚಾಲಯಗಳನ್ನು, 637 ಶಾಲೆಗಳಲ್ಲಿ ಕುಡಿಯುವ ನೀರನ್ನು ಮತ್ತು ರೂ. 8,81,25,600.00 ಮೊತ್ತದ ಅತ್ಯಗತ್ಯ ಉಪಕರಣಗಳನ್ನು ಒದಗಿಸಲಾಗಿದೆ.

**<u>ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಾಕಿಕೊಂಡ ಯೋಜನೆಗಳು</u>**:

2008-09 ನೇ ಸಾಲಿನಲ್ಲಿ ಶಿಕ್ಷಣದ ಉದ್ದೀಪನಕ್ಕಾಗಿ ಕೆಳಕಂಎ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ;

- ಎಂಎಂಎಸ್ ಕಚೇರಿಯ ನಿರ್ವಹಣೆಗಾಗಿ ರೂ 20.29 ಲಕ್ಷ ಒದಗಿಸಲಾಗಿದೆ;

- ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಕಲಿಕೆಗಾಗಿ ರೂ.2000 ಲಕ್ಷ;
- ಇಎಂಐಎಸ್ ಅಭಿವೃದ್ಧಿಗಾಗಿ ರೂ. 25.00 ಲಕ್ಷ;
- ಚೈತ್ರದ ಚಿಗುರು, ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಿಗಾಗಿ ಹಾಗೂ ಆಟದ ಸಾಮಗ್ರಿಗಳನ್ನು ಖರೀದಿಸಲು ಮತ್ತು ಕ್ಷೇತ್ರ ಮಟ್ಟದ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಆಟದ ಸ್ಪರ್ಧೆಗಳನ್ನು ಆಯೋಜಿಸಲು ರೂ. 455.00 ಲಕ್ಷ;
- ಶಿಕ್ಷಕರ ತರಬೇತಿ ಸಂಸ್ಥೆಗಳಿಗಾಗಿ ಕಟ್ಟಡ ನಿರ್ಮಾಣ ಹಾಗೂ ಅವುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ. 73.00 ಲಕ್ಷ;
- ಇ-ಗವರ್ನೆನ್ಸ್‌ನ ಕಾರ್ಯಕ್ರಮದಡಿಯಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳನ್ನು ಖರೀದಿಸಲು ರೂ. 80.00 ಲಕ್ಷ;
- ಉಪನಿರ್ದೇಶಕರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ರಿಪೇರಿ ಹಾಗೂ ನಿರ್ಮಾಣಕ್ಕಾಗಿ ಜಿಲ್ಲಾ ಯೋಜನೆಯಡಿಯಲ್ಲಿ 2008-09 ಏ ಸಾಲಿಗೆ ರೂ 300.00 ಲಕ್ಷ ಮತ್ತು ರೂ 33017.40 ಲಕ್ಷ ಅನುದಾನವನ್ನು ಕೆಳಕಂಡ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗಿದೆ.

    1. 1 ರಿಂದ 10 ನೇ ತರಗತಿಯವರೆಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಎಲ್ಲ ಮಕ್ಕಳಿಗೆ ಅಕ್ಷರ ದಾಸೋಹ ಕಾರ್ಯಕ್ರಮವನ್ನು ವಿಸ್ತೃತವಾಗಿ ಮತ್ತು ನಿರಂತರವಾಗಿ ತಲುಪಿಸುವ ಸಲುವಾಗಿ ರೂ. 33426.41 ಲಕ್ಷ ಬಿಡುಗಡೆ ಮಾಡಲಾಗಿದೆ.
    2. ಉಪ ನಿರ್ದೇಶಕರುಗಳ ಹಾಗೂ ಕೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಬಾಡಿಗೆ ವಾಹನಗಳ ಸೌಕರ್ಯ ಒದಗಿಸುವ ಸಲುವಾಗಿ ರೂ. 17.28 ಲಕ್ಷ ಮತ್ತು ರೂ. 5.40 ಲಕ್ಷನವನು ಕ್ರಮವಾಗಿ ಬಿಡುಗಡೆ ಮಾಡಲಾಗಿದೆ.
    3. ಪ್ರಾಥಮಿಕ ಶಾಲೆಯಲ್ಲಿ ಓದುವ ಬಾಲಕಿಯರಿಗೆ ಹಾಗೂ ಪ.ಜಾ/ಪ.ಪಂ ಮಕ್ಕಳಿಗೆ ಸರ್ಕಾರೇತರ ಶುಲ್ಕಗಳನ್ನು ಮರುಪಾವತಿಸುವ ಸಲುವಾಗಿ ರೂ.324.50 ಲಕ್ಷ ಒದಗಿಸಿದೆ.

<u>ವಸತಿ ಶಾಲೆಗಳು :</u>

1. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸ್ಮರಣಾರ್ಥ ಒಚಿದು ವಸತಿ ಶಾಲೆಯ ನಿರ್ಮಾಣಕ್ಕಾಗಿ ರೂ. 40.00 ಲಕ್ಷ ಒದಗಿಸಲಾಗಿದೆ.
2. ಉಳಿದ ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆ ಮತ್ತು ಪೂರ್ಣಗೊಳಿಸುವುದಕ್ಕಾಗಿ ಕುವೆಂಪು ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ನಿರ್ಮಿಸುವ ಸಲುವಾಗಿ ರೂ. 160.00 ಲಕ್ಷ ಒದಗಿಸಲಾಗಿದೆ.

<u>ಶಿಕ್ಷಕರಿಗೆ ಉತ್ತೇಜಕಗಳು:</u>

1. ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗಾಗಿ ವಸತಿಗೃಹವನ್ನು ನಿರ್ಮಿಸುವ ಸಲುವಾಗಿ ರೂ. 1900.00 ಲಕ್ಷವನ್ನು ಒದಗಿಸಲಾಗಿದೆ. ಈ ಯೋಜನೆಯ

ಮೊದಲನೇ ಹಂತದಲ್ಲಿ, ರಾಜ್ಯದ 31 ಕ್ಷೇತ್ರಗಳಲ್ಲಿ 79 ವಲಯ ಕೇಂದ್ರಗಳಿಗೆ ವಿಸ್ತರಿಸಿ 632 ಮನೆಗಳನ್ನು ಕಟ್ಟುವ ಉದ್ದೇಶವನ್ನು ಹೊಂದಲಾಗಿದೆ.

2. ಪ್ರತಿ ವಲಯ ಕೇಂದ್ರಕ್ಕೆ ರೂ. 15,000.00 ದಂತೆ; ದೂರವಾಣಿ, ಸಾದಿಲ್ವಾರು ಹಾಗೂ ವಿದ್ಯುಚ್ಛಕ್ತಿ ವೆಚ್ಚಗಳಿಗಾಗಿ 2008-09 ನೇ ಸಾಲಿನಲ್ಲಿ; ರೂ 500.00 ಲಕ್ಷವು ಬಿಡುಗಡೆ ಮಾಡಲಾಗಿದೆ ಹಾಗೂ ಕ್ಲಸ್ಟರ್ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಸ್ಥಿರ ಪ್ರಯಾಣ ಭತ್ಯೆಗಾಗಿ ಮಾಸಿಕ ರೂ. 500.00 ನ್ನು ನಿಗದಿಗೊಳಿಸಲಾಗಿದೆ.

<u>ಕುವೆಂಪು ಶತಮಾನೋತ್ಸವ ಶಾಲೆಗಳು:</u>

ರಾಜ್ಯದ 32 ಶೈಕ್ಷಣಿಕ ಜಿಲ್ಲೆಗಳಲ್ಲಿ ಕುವೆಂಪು ಶತಮಾನೋತ್ಸವ ಶಾಲೆಗಳಿಗಾಗಿ 2008-09 ನೇ ಸಾಲಿನಲ್ಲಿ ರೂ. 160.00 ಲಕ್ಷ ಆಯವ್ಯಯವನ್ನು ಒದಗಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲಾ ಪಂಚಾಯತ್‌ಗಳಿಗೆ ಆಚುವ್ಯಯವನ್ನು ಹಂಚಿಕೆ ಮಾಡಲಾಗಿದೆ.

<u>ಪ್ರಗತಿ ಪತ್ರಗಳ ವಿತರಣೆ:</u>

8,9,10 ನೇ ತರಗತಿಯ ಮಕ್ಕಳಿಗೆ ಸಂಚಿತ ಪ್ರಗತಿ ಪತ್ರಗಳನ್ನು ವಿತರಿಸಿದೆ. ಪ್ರಗತಿ ಪತ್ರಗಳ ಮುದ್ರಣಕ್ಕಾಗಿ 2008-09 ನೇ ಸಾಲಿನಲ್ಲಿ ರೂ. 10.00 ಲಕ್ಷ ಬಿಡುಗಡೆ ಮಾಡಲಾಗಿದ್ದು, ಉಪ ನಿರ್ದೇಶಕರುಗಳ ಮೂಲಕ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಿಗೆ ವಿತರಣೆ ಮಾಡಲಾಗಿದೆ. ಈ ಕ್ರಮವು ಪ್ರತೀ ವಿದ್ಯಾರ್ಥಿಯ ವೈಯಕ್ತಿಕ ಸಾಧನೆಯ ಬಗ್ಗೆ ತಿಳಿಯಲು ಹಾಗೂ ಪರ್ಯಾಯ ಕಲಿಕೆಯ ಬಗ್ಗೆ ಶಿಕ್ಷಕರಿಗೆ ಸಹಾಯಕವಾಗುತ್ತದೆ.

**<u>ಪ್ರೋತ್ಸಾಹ ಧನ:</u>**

ರಾಜ್ಯದಲ್ಲಿನ 308 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಫಲಿತಾಂಶ ಉತ್ತಮ ಗೊಳಿಸಿದ ಶಿಕ್ಷಕರಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

- ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಪ್ರತಿ ಶೇ.5 ರಷ್ಟು ಅತಿ ಹೆಚ್ಚು ಫಲಿತಾಂಶವನ್ನು 2008ಏಪ್ರಿಲ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಗಳಿಸಿದ ಶಾಲೆಗಳನ್ನು ಗುರುತಿಸಿ ಅಲ್ಲಿನ ಶಿಕ್ಷಕರುಗಳಿಗೆ ಉತ್ತೇಜನ ನೀಡಲು ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.
- ಅದರಂತೆಯೇ 2007-08ನೇ ಸಾಲಿನಲ್ಲಿ ಗಳಿಸಿದ ಶೇಕಡವಾರು ಫಲಿತಾಂಶಕ್ಕೆ ಹೋಲಿಸಿದಾಗ 2008ರ ಏಪ್ರಿಲ್‌ನಲ್ಲಿ ಅತಿ ಹೆಚ್ಚು ಶೇಕಡವಾರು ಹೆಚ್ಚಳ ಗಳಿಸಿದ ಸರ್ಕಾರಿ ಪ್ರೌಢ ಶಾಲೆಗಳನ್ನು ಗುರುತಿಸಿ ಅವುಗಳಲ್ಲಿ ಶೇ.5 ರಷ್ಟು ಶಾಲೆಗಳಿಗೆ ಉತ್ತೇಜನ ನೀಡಲು ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.
- ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆಯು ನಡೆಸಿದ ಶಾಲಾ ಗುಣಮಟ್ಟ ಮೌಲ್ಯಾಂಕನ ವರದಿಯ ಆಧಾರದ ಮೇಲೆ ಪ್ರತಿ ಕ್ಲಸ್ಟರ್‌ನಲ್ಲಿ ಅತಿ ಹೆಚ್ಚು ಶೈಕ್ಷಣಿಕ ಸಾಧನೆ ಮಾಡಿದ ಒಂದು ಪ್ರಾಥಮಿಕ ಶಾಲೆಯನ್ನು ಗುರುತಿಸಿ ಆ ಶಾಲೆಯ ಶಿಕ್ಷಕರನ್ನು ಗೌರವಿಸುವ ಸಲುವಾಗಿ ಬಹುಮಾನ ನೀಡಲು ರೂ.50.00 ಲಕ್ಷ ಅನುದಾನವನ್ನು 2008-09ನೇ ಸಾಲಿಗೆ ಬಿಡುಗಡೆ ಮಾಡಿದೆ.

**<u>ದೈಹಿಕ ಶಿಕ್ಷಣ :-</u>**

ರಾಜ್ಯದ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢ ಶಾಲೆಗಳಿಂದ ವಿದ್ಯಾರ್ಥಿ ಕ್ರೀಡಾ ನಿಧಿ

ಸಂಗ್ರಹಿಸಲಾಗುತ್ತಿದ್ದು, ಅದನ್ನು ಬಳಸಿ ತಾಲ್ಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟಗಳನ್ನು ನಡೆಸಲಾಗುತ್ತಿದೆ. ರಾಜ್ಯೋತ್ಸವ(ಮಕ್ಕಳ ಮೇಳ) ದಿನದಂದು ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಸುಮಾರು 111 ಕ್ರೀಡಾಪಟುಗಳಿಗೆ ರೂ.8,40,000/- ನಗದು ಬಹುಮಾನ ಹಾಗು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯ್ತು. ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪ್ರಯಾಣಭತ್ಯೆ, ದಿನಭತ್ಯೆಗಾಗಿ ರೂ.60.00ಲಕ್ಷಗಳಷ್ಟು ವಿತರಿಸಲಾಗಿದೆ. ಹಾಗೂ ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಸುಮಾರು 678 ವಿಜೇತರಿಗೆ ರೂ.10.00 ಲಕ್ಷಗಳ ನಗದು ಬಹುಮಾನ ನೀಡಲು ಉಪನಿರ್ದೇಶಕರು, ಖಫಾಈ & ಖಿಃಈ ರವರಿಗೆ ಪ್ರಸ್ತಾವನೆ ಸಲ್ಲಿಸಿದೆ. ರಾಷ್ಟ್ರ ಮಟ್ಟದ ಕ್ರೀಡೆಗಳ ಸಂದರ್ಭದಲ್ಲಿ ಸುಮಾರು ರೂ. 20.00 ಲಕ್ಷಗಳನ್ನು ಆಟದ ತೊಡಿಗೆ, ಷೂಗಳು, ಪ್ರಯಾಣ ಭತ್ಯೆ ಮತ್ತು ತುಟ್ಟಿಭತ್ಯೆಗಳಿಗಾಗಿ ಬಳಸಲಾಗಿದೆ.

ಸುಮಾರು 1500 ವಿದ್ಯಾರ್ಥಿಗಳ ಮೂಲಕ ರಾಷ್ಟ್ರೀಯ ಹಬ್ಬ, ನಾಡ ಹಬ್ಬಗಳಾದ ಗಣರಾಜ್ಯೋತ್ಸವ ದಿನಾಚರಣೆ, ಸ್ವಾತಂತ್ರೋತ್ಸವದಂತಹ ಹಬ್ಬಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ವಹಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದು, ಭಾರತ ಸೇವಾದಲ ಸಂಸ್ಥೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಭಾರತ ಸೇವಕ ಸಮಾಜ ಮತ್ತು ಭಾರತ ಸೇವಾದಲಗಳ ಸಿಬ್ಬಂದಿಯ ಸೇವಾ ವಿಷಯಗಳು ಮತ್ತು ಅನುದಾನ ಬಿಡುಗಡೆ ಬಗ್ಗೆ ಪರಿಶೀಲಿಸಲಾಗುತ್ತಿದೆ.

# ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

ರಾಜ್ಯದ ಅಲ್ಪಸಂಖ್ಯಾತರ ಸಂವಿಧಾನಾತ್ಮಕ ಹಕ್ಕುಗಳನ್ನು ಕಾಪಾಡಲು, ಅವರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳನ್ನು ಪರಿಶೀಲಿಸಲು ಹಾಗೂ ಈ ಸಂಸ್ಥೆಗಳ ಗುಣಮಟ್ಟವನ್ನು ಉತ್ತಮಪಡಿಸಲು ರಾಜ್ಯ ಸರ್ಕಾರವು ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವನ್ನು ಸ್ಥಾಪಿಸಿತು. ಈ ನಿರ್ದೇಶನಾಲಯವು ಆಗಸ್ಟ್ 1987 ರಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

- ಅಲ್ಪಸಂಖ್ಯಾತರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವುದು. (ಬೆಂಗಳೂರು ಮತ್ತು ಮೈಸೂರು ವಿಭಾಗ ಮಾತ್ರ) ;
- ಕಾಲಕಾಲಕ್ಕೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸಂದರ್ಶನ ಮತ್ತು ವಾರ್ಷಿಕ ತಪಾಸಣೆಗಳನ್ನು ನಡೆಸುವುದು ;
- ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಅಂಕಿ ಅಂಶಗಳ ಸಂಗ್ರಹಣೆ ಮತ್ತು ಕ್ರೋಢೀಕರಣ;
- ಅಲ್ಪಸಂಖ್ಯಾತರಿಂದ ಕೇಂದ್ರೀಕೃತವಾಗಿರುವ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು;
- ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿನ ಕಲಿಕಾ ಬೋಧನಾ ಮಟ್ಟವನ್ನು ಉತ್ತಮಪಡಿಸಲು ಡಯಟ್‌ಗಳ ಮೂಲಕ ಅಲ್ಪಸಂಖ್ಯಾತ ಭಾಷಾ ಶಾಲೆಗಳ ಶಿಕ್ಷಕರುಗಳಿಗೆ ಪುನಃಶ್ಚೇತನ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು;
- ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಸೇರಿರುವ 1 ರಿಂದ 10 ನೇ ತರಗತಿಗಳಲ್ಲಿ ಮತ್ತು ಡಿ.ಇಡಿ. ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಮಾಡುವುದು;
- ಅಲ್ಪಸಂಖ್ಯಾತ ಭಾಷಾ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸುವುದು;
- ಶೈಕ್ಷಣಿಕ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಕಾರ್ಪೊರೇಷನ್‌ಗಳು; ಸಂಘ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳನ್ನು ಸಂಪರ್ಕಿಸಿ ಸಮನ್ವಯ ಮಾಡುವುದು.

ಮೇಲ್ಕಂಡ ಕಾರ್ಯಕ್ರಮಗಳ ಜೊತೆಗೆ ಈ ಕೆಳಕಂಡ ವಿಭಾಗಗಳ ಕೆಲಸ ಕಾರ್ಯಗಳನ್ನು ಈ ನಿರ್ದೇಶನಾಲಯವು ನಿರ್ವಹಿಸುತ್ತಿದೆ.

- ಹಿಂದಿ ಮತ್ತು ಅರೇಬಿಕ್ ಮದರಸಾಗಳ ನಿರ್ವಹಣೆ ಮತ್ತು ಮದರಸಾಗಳ ಆಧುನೀಕರಣ – ಕೇಂದ್ರ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮ;
- ಏರಿಯಾ ಇಂಟೆನ್ಸೀವ್ ಕಾರ್ಯಕ್ರಮ – ಕೇಂದ್ರ ಪ್ರಾಯೋಜಿತ ಕಾರ್ಯಕ್ರಮ;
- ಸಮನ್ವಯ ಶಿಕ್ಷಣ;
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.)ಗಳ ರಚನೆ ಮತ್ತು ಕಾರ್ಯನಿರ್ವಹಣೆ;

## ಈ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಬರುವಂತಹ ಅಲ್ಪಸಂಖ್ಯಾತ ಭಾಷಾ ಪ್ರಾಥಮಿಕ ಶಾಲೆಗಳ ವಿವರಗಳು

| ಕ್ರ. ಸಂ. | ಭಾಷಾ ಮಾಧ್ಯಮ | ಸರ್ಕಾರಿ | | | ಅನುದಾನಿತ | | | ಅನುದಾನ ರಹಿತ | | | ಒಟ್ಟು ಶಾಲೆಗಳು | | |
|---|---|---|---|---|---|---|---|---|---|---|---|---|---|
| | | ಕಿರಿಯ | ಹಿರಿಯ | ಒಟ್ಟು | ಕಿರಿಯ | ಹಿರಿಯ | ಒಟ್ಟು | ಕಿರಿಯ | ಹಿರಿಯ | ಒಟ್ಟು | ಕಿರಿಯ | ಹಿರಿಯ | ಒಟ್ಟು |
| 1 | ಉರ್ದು | **2261** | **1557** | **3818** | **10** | **118** | **128** | **55** | **123** | **178** | **2326** | **1798** | **4124** |
| 2 | ತಮಿಳು | **32** | **48** | **80** | **11** | **69** | **80** | **1** | **3** | **4** | **44** | **120** | **164** |
| 3 | ತೆಲುಗು | **49** | **20** | **69** | **2** | **19** | **21** | **7** | **9** | **16** | **58** | **48** | **106** |
| 4 | ಮರಾಠಿ | **421** | **509** | **930** | **3** | **39** | **42** | **8** | **13** | **21** | **432** | **561** | **993** |
| 5 | ಮಲೆಯಾಳಂ | **1** | **1** | **2** | **1** | **–** | **1** | **1** | **–** | **1** | **3** | **1** | **4** |
| 6 | ಗುಜರಾತಿ | **–** | **–** | **–** | **–** | **1** | **1** | **–** | **–** | **–** | **–** | **1** | **1** |
| 7 | ಸಿಂಧಿ | **–** | **1** | **1** | **–** | **–** | **–** | **–** | **–** | **–** | **–** | **1** | **1** |
| | **ಒಟ್ಟು** | **2764** | **2136** | **4900** | **27** | **246** | **273** | **72** | **148** | **220** | **2863** | **2530** | **5393** |

## ಈ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಬರುವಂತಹ ಅಲ್ಪಸಂಖ್ಯಾತ ಭಾಷಾ ಪ್ರೌಢ ಶಾಲೆಗಳ ವಿವರಗಳು

| ಕ್ರ.ಸಂ. | ಶಾಲೆಗಳ ವಿವರ | ಉರ್ದು | ತಮಿಳು | ತೆಲುಗು | ಮರಾಠಿ | ಗುಜರಾತಿ | ಸಿಂಧಿ | ಒಟ್ಟು |
|---|---|---|---|---|---|---|---|---|
| 1 | ಸರ್ಕಾರಿ | 144 | 5 | 6 | 43 | – | – | 198 |
| 2 | ಅನುದಾನಿತ | 100 | 11 | 5 | 89 | – | – | 205 |
| 3 | ಅನುದಾನ ರಹಿತ | 81 | – | 4 | 52 | – | – | 137 |
| | ಒಟ್ಟು | 325 | 16 | 15 | 184 | – | – | 540 |

## ಅಲ್ಪಸಂಖ್ಯಾತ ಭಾಷಾ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಮಾಧ್ಯಮವಾರು ವಿವರಗಳು

| ಕ್ರ. ಸಂ. | ಭಾಷಾ ಮಾಧ್ಯಮ | ಸರ್ಕಾರಿ | | | ಅನುದಾನಿತ | | | ಅನುದಾನ ರಹಿತ | | | ಒಟ್ಟು ಶಿಕ್ಷಕರು | | |
|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಉರ್ದು | 4857 | 10424 | 15281 | 233 | 976 | 1209 | 254 | 1035 | 1289 | 5344 | 12435 | 17779 |
| 2 | ತಮಿಳು | 110 | 244 | 354 | 85 | 187 | 272 | 7 | 21 | 28 | 202 | 452 | 654 |
| 3 | ತೆಲುಗು | 110 | 128 | 238 | 18 | 29 | 47 | 37 | 12 | 49 | 165 | 169 | 334 |
| 4 | ಮರಾಠಿ | 2445 | 2496 | 4941 | 282 | 256 | 538 | 118 | 129 | 247 | 2845 | 2881 | 5726 |

| | | | | | | | | | | | | | |
|---|---|---|---|---|---|---|---|---|---|---|---|---|---|
| 5 | ಮಲೆಯಾಳಂ | 2 | 10 | 12 | 1 | 5 | 6 | 3 | 2 | 5 | 6 | 17 | 23 |
| 6 | ಗುಜರಾತಿ | – | – | – | 1 | 3 | 4 | – | – | – | 1 | 3 | 4 |
| 7 | ಸಿಂಧಿ | – | 5 | 5 | – | – | – | – | – | – | – | 5 | 5 |

## ಅಲ್ಪಸಂಖ್ಯಾತ ಭಾಷಾ ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಮಾಧ್ಯಮವಾರು ವಿವರಗಳು

| ಕ್ರ. ಸಂ. | ಭಾಷಾ ಮಾಧ್ಯಮ | ಸರ್ಕಾರಿ | | | ಅನುದಾನಿತ | | | ಅನುದಾನ ರಹಿತ | | | ಒಟ್ಟು ಶಿಕ್ಷಕರು | | |
|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಉರ್ದು | 376 | 426 | 802 | 501 | 402 | 903 | 274 | 296 | 570 | 1151 | 1124 | 2275 |
| 2 | ತಮಿಳು | 24 | 16 | 40 | 35 | 23 | 58 | 2 | 6 | 8 | 61 | 45 | 106 |
| 3 | ತೆಲುಗು | 19 | 18 | 37 | 19 | 19 | 38 | 23 | 5 | 28 | 61 | 42 | 103 |
| 4 | ಮರಾಠಿ | 150 | 148 | 298 | 528 | 367 | 895 | 310 | 165 | 475 | 988 | 680 | 1668 |
| | ಒಟ್ಟು | 569 | 608 | 1177 | 1083 | 811 | 1894 | 609 | 472 | 1081 | 2261 | 1891 | 4152 |

## ಅಲ್ಪಸಂಖ್ಯಾತ ಭಾಷಾ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರಗಳು

| ಭಾಷಾ ಮಾಧ್ಯಮ | ಸರ್ಕಾರಿ | | | ಅನುದಾನಿತ | | | ಅನುದಾನ ರಹಿತ | | | ಒಟ್ಟು ವಿದ್ಯಾರ್ಥಿಗಳು | | |
|---|---|---|---|---|---|---|---|---|---|---|---|---|
| | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು |
| ಉರ್ದು | 184896 | 258442 | 443338 | 35955 | 41256 | 77481 | 19060 | 23256 | 42316 | 239911 | 323224 | 563135 |
| ತಮಿಳು | 5843 | 6356 | 12199 | 7074 | 8105 | 15179 | 580 | 707 | 1287 | 13497 | 15168 | 28665 |
| ತೆಲುಗು | 3174 | 3286 | 6460 | 2016 | 1984 | 4000 | 900 | 732 | 1632 | 6090 | 6002 | 12092 |
| ಮರಾಠಿ | 71047 | 72155 | 143202 | 6441 | 5407 | 11848 | 3034 | 2398 | 5432 | 80522 | 79960 | 160482 |
| ಮಲ ಯಾಳಂ | 194 | 172 | 366 | 131 | 105 | 236 | 63 | 59 | 122 | 388 | 336 | 724 |
| ಗುಜ ರಾತಿ | – | – | – | 110 | 110 | 220 | – | – | – | 110 | 110 | 220 |
| ಸಿಂಧಿ | 30 | 75 | 105 | – | – | – | – | – | – | 30 | 75 | 105 |
| **ಒಟ್ಟು** | **265184** | **340486** | **605670** | **51727** | **57237** | **108964** | **23637** | **27152** | **50789** | **340548** | **424875** | **765423** |

ಅಲ್ಪಸಂಖ್ಯಾತ ಭಾಷಾ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿವರಗಳು

| ಕ್ರ.ಸಂ | ಭಾಷಾ ಮಾಧ್ಯಮ | ಸರ್ಕಾರಿ | | | ಅನುದಾನಿತ | | | ಅನುದಾನ ರಹಿತ | | | ಒಟ್ಟು ವಿದ್ಯಾರ್ಥಿಗಳು | |
|---|---|---|---|---|---|---|---|---|---|---|---|---|
| | | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | ಗಂ | ಹೆಂ |
| 1 | ಉರ್ದು | 8486 | 16234 | 24720 | 2911 | 20198 | 33109 | 2964 | 5411 | 8375 | 24361 | 1843 |
| 2 | ತಮಿಳು | 301 | 317 | 618 | 52 | 709 | 1161 | 103 | 81 | 184 | 856 | 107 |
| 3 | ತೆಲುಗು | 339 | 386 | 725 | 03 | 374 | 677 | 148 | 178 | 326 | 790 | 38 |
| 4 | ಮರಾಠಿ | 3641 | 3696 | 7337 | 1897 | 12021 | 23918 | 3378 | 3004 | 6382 | 18916 | 8721 |
| | **ಒಟ್ಟು** | **127671** | **20633** | **33400** | **5563** | **33302** | **58865** | **6593** | **8674** | **15267** | **44923** | **2609** |

ಅಲ್ಪಸಂಖ್ಯಾತರು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವುದು ;

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಸ್ಥಾಪನೆಗೊಂಡಾಗಿನಿಂದ 516 ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತರ ಸಂಸ್ಥೆಗಳೆಂದು ಘೋಷಿಸಲಾಗಿದೆ.

ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳ ಅಲ್ಪಸಂಖ್ಯಾತರಿಗಾಗಿ ಏರಿಯಾ ಇಂಟೆನ್ಸಿವ್ ಕಾರ್ಯಕ್ರಮ (ಕೇಂದ್ರ ಪ್ರಾಯೋಜಿತ ಕಾರ್ಯಕ್ರಮ)

ಕೇಂದ್ರ ಸರ್ಕಾರವು ಪುರಸ್ಕೃತ ಯೋಜನೆಯಡಿಯಲ್ಲಿ ಹಿಂದುಳಿದ ಪ್ರದೇಶಗಳ ಅಲ್ಪಸಂಖ್ಯಾತರನ್ನು ತೀವ್ರವಾಗಿ ಅಭಿವೃದ್ಧಿಪಡಿಸುವ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ 10 ಬ್ಲಾಕ್‌ಗಳನ್ನು ಆಯ್ಕೆ ಮಾಡಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ :

| **ಕ್ರ.ಸಂ.** | **ಬ್ಲಾಕ್‌ಗಳ ವಿವರ** | **ಜಿಲ್ಲೆ** |
|---|---|---|
| 1 | ಬೀದರ್, ಹುಮ್ನಾಬಾದ್ | ಬೀದರ್ |
| 2 | ಗುಲ್ಬರ್ಗಾ, ಚಿತ್ತಾಪುರ | ಗುಲ್ಬರ್ಗಾ |
| 3 | ಸವಣೂರು, ಶಿಗ್ಗಾಂವ್ | ಹಾವೇರಿ |
| 4 | ಬೆಳ್ತಂಗಡಿ, ಬಂಟ್ವಾಳ | ದಕ್ಷಿಣ ಕನ್ನಡ |
| 5 | ರಾಯಚೂರು | ರಾಯಚೂರು |
| 6 | ಭಟ್ಕಳ | ಉತ್ತರ ಕನ್ನಡ |

ಈ ಯೋಜನೆಯ ಮೊದಲ ಹಂತದಲ್ಲಿ 172 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳಿಗಾಗಿ ರೂ.3,34,45,000–00 ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ

ದಿನಾಂಕ: 7.4.2005 ರಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಹಾಗೆಯೇ ಎರಡನೇ ಹಂತದಲ್ಲಿ 32 ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ರೂ.60,10,000–00 ಗಳ ಅನುದಾನವನ್ನು ಒದಗಿಸುವಂತೆ ದಿನಾಂಕ: 22/25.10.2005 ರಂದು ಅನುದಾನಕ್ಕಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಅಂಗವಿಕಲ ಮಕ್ಕಳಿಗೆ ಸಮನ್ವಯ ಶಿಕ್ಷಣ (ಐ.ಇ.ಡಿ.)

ಕೇಂದ್ರ ಪುರಸ್ಕೃತ ಯೋಜನೆ (ಐ.ಇ.ಡಿ.ಸಿ) : (ಖಟಣಜಜರಡಿಚಣಜಜ ಇಜಣಾಭಿಚಣುಬಂಟ ಜಿಂಡಿ ಆುಚಿಭಟಜಜ ಭಿುಟಜಡಿಜಟ.)

ಈ ನಿರ್ದೇಶನಾಲಯವು ಐ.ಇ.ಡಿ.ಸಿ ಯೋಜನೆಯನ್ನು 2004 ರಿಂದ ಜಾರಿಗೊಳಿಸುತ್ತಿದೆ. 2008–09 ನೇ ಸಾಲಿನಲ್ಲಿ 124 ಸರ್ಕಾರೇತರ ಸಮನ್ವಯ ಶಿಕ್ಷಣ ಸಂಸ್ಥೆಗಳ ಪೈಕಿ ಮೊದಲ ಕಂತಿನಲ್ಲಿ 86 ಸಂಸ್ಥೆಗಳಿಗೆ ರೂ.7,88,41,261/–ಗಳ ಅನುದಾನಕ್ಕಾಗಿ ಆಯವ್ಯಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಎರಡನೇ ಹಂತದಲ್ಲಿ ಉಳಿದ 38 ಸಂಸ್ಥೆಗಳ ಪೈಕಿ ಇಲಾಖೆಯ ನಿಯಮಗಳಡಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವ ಆಯ್ದ 13 ಸರ್ಕಾರೇತರ ಸಂಸ್ಥೆಗಳಿಗೆ ರೂ.2,22,49,485/– ಗಳ ಅನುದಾನಕ್ಕಾಗಿ ಆಯವ್ಯಯ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಈ ಯೋಜನೆಯಡಿಯಲ್ಲಿ ಒಟ್ಟು 2573 ಶಾಲೆಗಳಲ್ಲಿ 786 ವಿಶೇಷ ಸಂಪನ್ಮೂಲ ಶಿಕ್ಷಕರ ಮೂಲಕ 16,028 ವಿವಿಧ ನ್ಯೂನತೆಯುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ ಅಂಗವಿಕಲ ಮಕ್ಕಳಿಗೆ ಬೋಧಿಸುವ ವಿಶೇಷ ಶಿಕ್ಷಕರಿಗೆ ವೇತನಾನುದಾನ ಹಾಗೂ ಈ ಮಕ್ಕಳಿಗೆ ಪುಸ್ತಕ, ಸಮವಸ್ತ್ರ, ವೈದ್ಯಕೀಯ ಭತ್ಯೆ, ವಸತಿ ನಿಲಯ ಭತ್ಯೆ, ಸಾರಿಗೆ ಭತ್ಯೆ, ಸಲಕರಣೆ ಭತ್ಯೆ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುತ್ತಿದೆ

ಹಿಂದಿ ಮತ್ತು ಅರೇಬಿಕ್ ವಿಭಾಗ

| ಕ್ರ.ಸಂ. | ಭಾಷಾ ಮಾಧ್ಯಮ | ಪ್ರಾಥಮಿಕ ಶಾಲೆಗಳು | ಪ್ರೌಢ ಶಾಲೆಗಳು | ವಿದ್ಯಾಲಯಗಳು |
|---|---|---|---|---|
| 1 | ಹಿಂದಿ | --- | --- | 86 |
| 2 | ಅರೇಬಿಕ್ | 323 | 9 (ಕಾಲೇಜುಗಳು) | --- |

ಸರ್ಕಾರವು ತನ್ನ ಆದೇಶ ಸಂಖ್ಯೆ: ಇಡಿ 15 ಸಿ.ಎಸ್.ಪಿ. 79, ದಿನಾಂಕ: 20.6.79 ರಲ್ಲಿ 103 ಅರೇಬಿಕ್ ಶಾಲೆಗಳಿಗೆ ಅನುದಾನ ಬಿಡುಗಡೆ ಮಾಡಿದೆ. ಈ ಅನುದಾನವು ಶಿಕ್ಷಕರುಗಳ ವೇತನಕ್ಕಾಗಿ ಬಿಡುಗಡೆಯಾಗುತ್ತಿದೆ. ರಾಜ್ಯದಲ್ಲಿ ಒಟ್ಟು 323 ಅರೇಬಿಕ್ ಶಾಲೆಗಳಿದ್ದು ಅವುಗಳಲ್ಲಿ 103 ಅನುದಾನಿತ ಶಾಲೆಗಳು ಉಳಿದ 220 ಅರೇಬಿಕ್ ಶಾಲೆಗಳು ಅನುದಾನ ರಹಿತವಾಗಿ ಮತ್ತು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿವೆ. ಅರೇಬಿಕ್ ಶಾಲೆಗಳು ಅಧಿಕವಾಗಿ ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರಾಂತಗಳಾದ ಬೆಳಗಾವಿ, ಬಿಜಾಪುರ, ಕಾರವಾರ, ಧಾರವಾಡ, ಗುಲ್ಬರ್ಗಾ, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನಡೆಯುತ್ತಿವೆ.

ರಾಜ್ಯದಲ್ಲಿ ಒಟ್ಟು 9 ಅರೇಬಿಕ್ ಕಾಲೇಜುಗಳು ನಡೆಯುತ್ತಿವೆ. ಈ ಪೈಕಿ 3 ಕಾಲೇಜುಗಳು ರಾಜ್ಯ ಸರ್ಕಾರದ ಅನುದಾನ ಪಡೆದು ನಡೆಯುತ್ತಿವೆ. ಉಳಿದ 6 ಕಾಲೇಜುಗಳು ಅನುದಾನ ರಹಿತವಾಗಿ ಮತ್ತು ಶಾಶ್ವತ ಅನುದಾನ ರಹಿತವಾಗಿ ನಡೆಯುತ್ತಿವೆ. 103 ಅನುದಾನಿತ ಶಾಲೆಗಳಲ್ಲಿ 570 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

**ಅರೇಬಿಕ್ ಮದರಸಾಗಳ ಆಧುನೀಕರಣ:–**

ಕೇಂದ್ರ ಸರ್ಕಾರವು ಮದರಸಾಗಳಂತಹ ಪಾರಂಪಾರಿಕ ಸಂಸ್ಥೆಗಳನ್ನು ಆಧುನೀಕರಣಗೊಳಿಸುವ

ಮೂಲಕ ಉತ್ತೇಜಿಸಲು ಒಚಿದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಪ್ರಾಯೋಜಿತ ಕಾರ್ಯಕ್ರಮದಡಿಯಲ್ಲಿ ಆಧುನೀಕೃತ ವಿಷಯಗಳಾದ ಸಮಾಜ, ವಿಜ್ಞಾನ, ಗಣಿತ ಮತ್ತು ಆಂಗ್ಲ ವಿಷಯಗಳನ್ನು ಬೋಧಿಸಲಾಗುತ್ತಿದೆ. ಶಿಕ್ಷಕರನ್ನು ರೂ. 2,200–00 ರ ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ. ವಿಜ್ಞಾನದ ಉಪಕರಣಗಳನ್ನು ಖರೀದಿಸಲು ಪ್ರತೀ ಮದರಸಾಕ್ಕೆ ರೂ.4,000.00 ಗಳನ್ನು ಹಂಚಿಕೆ ಮಾಡಿದೆ. 73 ಶಿಕ್ಷಕರುಗಳು ಈ ಮದರಸಾಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಹಿಂದಿ ವಿದ್ಯಾಲಯಗಳು :–**

ಹಿಂದಿ ಭಾಷೆ ಮಾತನಾಡದ ರಾಜ್ಯಗಳಲ್ಲಿ ಹಿಂದಿ ಭಾಷೆಯ ಬೆಳವಣಿಗೆಗಾಗಿ ಕರ್ನಾಟಕ ರಾಜ್ಯ ಸರ್ಕಾರವು ಹಿಂದಿ ಭಾಷೆಯ ಅಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಪಿ.ಹೆಚ್.ಎನ್. 76, ದಿನಾಂಕ: 26.7.79 ರಲ್ಲಿ ಹಿಂದಿ ವಿದ್ಯಾಲಯಗಳನ್ನು ತೆರೆಯಲು ಅವಕಾಶ ಕಲ್ಪಿಸಿರುತ್ತದೆ. ರಾಜ್ಯದಲ್ಲಿ ಒಟ್ಟು 86 ಹಿಂದಿ ವಿದ್ಯಾಲಯಗಳು ನಡೆಯುತ್ತಿವೆ. ಈ ಪೈಕಿ 80 ಹಿಂದಿ ವಿದ್ಯಾಲಯಗಳಿಗೆ ರಾಜ್ಯ ಸರ್ಕಾರ ಅಲ್ಪಾವಧಿ ಅನುದಾನ ನೀಡಲಾಗುತ್ತಿದೆ. ಉಳಿದ 6 ಹಿಂದಿ ವಿದ್ಯಾಲಯಗಳು ಅನುದಾನ ರಹಿತವಾಗಿ ನಡೆಯುತ್ತಿವೆ. ರಾಜ್ಯದಲ್ಲಿ ಅನುದಾನ ಸಂಹಿತೆಯಂತೆ 5 ಸ್ವಯಂ ಸೇವಾ ಹಿಂದಿ ಸಂಸ್ಥೆಗಳು ಹಿಂದಿ ವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುತ್ತವೆ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸುತ್ತಿವೆ.

ಹಿಂದಿ ಮಾತನಾಡದ ರಾಜ್ಯಗಳಲ್ಲಿ ಹಿಂದಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಶಿಕ್ಷಕರ ವೇತನಕ್ಕಾಗಿ ವೇತನ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

## ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಒಂದು ಅಂಗ. ಈ ಇಲಾಖೆಯು ಈ ಕೆಳಗೆ ನೀಡಿರುವ ವಿಭಾಗಗಳ ಮೂಲಕ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಿದೆ.

I. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ.

II. ಶೈಕ್ಷಣಿಕ ಮೌಲ್ಯಮಾಪನ ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗ.

III. ಶಿಕ್ಷಕರ ಶಿಕ್ಷಣ ವಿಭಾಗ.

### I. ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ:

**ಅ) ರಾಜ್ಯ ವಿಜ್ಞಾನ ಸಂಸ್ಥೆ :** ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನಾ ಮಟ್ಟವನ್ನು ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಹಂತಗಳಲ್ಲಿ ಉತ್ತಮಪಡಿಸಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸಿ, ಆಸಕ್ತಿ ಮೂಡಿಸಿ ಕುಶಲತೆಗಳನ್ನು ಹೆಚ್ಚಿಸುವುದು ಮತ್ತು ನಿತ್ಯ ಜೀವನದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವಂತೆ ಈ ಸಂಸ್ಥೆಯ ಮುಖ್ಯ ಧ್ಯೇಯ. ಇದಕ್ಕೆ ಪೂರಕವಾಗಿರುವಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**1. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ :**

ಈ ಗೋಷ್ಠಿಯನ್ನು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುತ್ತದೆ. ಈ ಕಾರ್ಯಕ್ರಮವನ್ನು ವಿ.ಐ.ಟಿ.ಎಂ.ನ ಸಹಯೋಗದೊಂದಿಗೆ ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಅರ್ಹತೆ ಪಡೆದವರು ರಾಜ್ಯಮಟ್ಟದಲ್ಲಿ ಭಾಗವಹಿಸಲು ಅರ್ಹತೆ ಪಡೆದರು. 25 ಜಿಲ್ಲೆಗಳಿಂದ 25 ವಿದ್ಯಾರ್ಥಿಗಳು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ, ಬೆಂಗಳೂರು, ಇಲ್ಲಿ ಸೆಪ್ಟಂಬರ್‌ನಲ್ಲಿ ನಡೆದ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕಾಗಿ ರೂ.2.15 ಲಕ್ಷ ವೆಚ್ಚವಾಗಿದೆ.

**2. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ :**

ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದಲ್ಲಿ ಗ್ರಾಮೀಣ ಮತ್ತು ಶಹರ ಎಂದು ಪ್ರತ್ಯೇಕ ವಿಭಾಗದಲ್ಲಿ ನಡೆಸಲಾಗುವುದು. ಇದಕ್ಕೆ ಡಿ.ಎಸ್.ಇ.ಆರ್.ಟಿ. ವತಿಯಿಂದ ರೂ.1.24 ಲಕ್ಷಗಳ ಅನುದಾನವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ ನೀಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ರಸ ಪ್ರಶ್ನೆ ಕಾರ್ಯಕ್ರಮವು ದಿನಾಂಕ: 20.01.2009 ರಂದು ಧಾರವಾಡದಲ್ಲಿ ನಡೆದಿರುತ್ತದೆ.

**3. ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ವಿಜ್ಞಾನ ವಸ್ತುಪ್ರದರ್ಶನ :**

ವಿಜ್ಞಾನದ ಸದುಪಯೋಗದ ಬಗ್ಗೆ ತಿಳುವಳಿಕೆ ಮೂಡಿಸಲು ಸದರಿ ಕಾರ್ಯಕ್ರಮವನ್ನು ಜಿಲ್ಲಾ, ರಾಜ್ಯ, ವಿಭಾಗ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುತ್ತದೆ. ಇದಕ್ಕಾಗಿ ರೂ.9.50 ಲಕ್ಷಗಳನ್ನು ನಿಗದಿಪಡಿಸಿದೆ. ರಾಜ್ಯ ಮಟ್ಟದ ವಸ್ತುಪ್ರದರ್ಶನವನ್ನು ವಿದ್ಯಾದಾಯಿನಿ ಪ್ರೌಢಶಾಲೆ, ಸೂರತ್ಕಲ್,

ಮಂಗಳೂರು, ಇಲ್ಲಿ ಜನವರಿಯಲ್ಲಿ ಏರ್ಪಡಿಸಲಾಗಿತ್ತು. ವಲಯಮಟ್ಟದ ವಸ್ತುಪ್ರದರ್ಶನವು ದಿನಾಂಕ: 19.01.2009 ರಿಂದ 23.01.2009ರ ವರೆಗೆ ಕೇರಳದ ಕಣ್ಣೂರಿನಲ್ಲಿ ಆಯೋಜಿಸಲಾಗಿತ್ತು.

4. **ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ನಾಟಕ ಸ್ಪರ್ಧೆ :**

ಈ ನಾಟಕ ಸ್ಪರ್ಧೆಯು ಜಿಲ್ಲಾ, ವಿಭಾಗ, ರಾಜ್ಯ, ವಲಯ, ರಾಷ್ಟ್ರ ಮಟ್ಟದಲ್ಲಿ ವಿ.ಐ.ಟಿ.ಎಂ.ನ ಸಹಯೋಗದೊಂದಿಗೆ ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದ 8 ವಿದ್ಯಾರ್ಥಿಗಳು ಮತ್ತು ಒಬ್ಬ ಮಾರ್ಗದರ್ಶಿ ಶಿಕ್ಷಕರ ಒಂದು ತಂಡ ವಿಭಾಗ ಮಟ್ಟದಲ್ಲಿ, ಅಲ್ಲಿ ಪ್ರಥಮ ಸ್ಥಾನ ಪಡೆದ ತಂಡ ರಾಜ್ಯ ಮಟ್ಟ, ವಲಯ ಮಟ್ಟ ಹೀಗೆ ರಾಷ್ಟ್ರಮಟ್ಟಕ್ಕೆ ತಲುಪುತ್ತದೆ. ಇದಕ್ಕೆ ರೂ.2.85 ಲಕ್ಷಗಳ ಅನುದಾನ ನಿಗದಿಪಡಿಸಿದೆ.

ರಾಜ್ಯ ಮಟ್ಟದ ಸ್ಪರ್ಧೆಯನ್ನು ಜನವರಿಯಲ್ಲಿ ಸೂರತ್ಕಲ್‌ನಲ್ಲಿ ನಡೆಸಲಾಯಿತು ಹಾಗೂ ವಲಯ ಮಟ್ಟದ ಸ್ಪರ್ಧೆಯು ದಿನಾಂಕ: 19.01.2009 ರಿಂದ 23.01.2009ರ ವರೆಗೆ ಕೇರಳದ ಕಣ್ಣೂರಿನಲ್ಲಿ ಆಯೋಜಿಸಲಾಗಿತ್ತು.

5. **ವಿಜ್ಞಾನ ಮತ್ತು ಗಣಿತ ಪ್ರೌಢಶಾಲಾ ಶಿಕ್ಷಕರಿಗೆ 10 ದಿನಗಳ ತರಬೇತಿ :**

ರಾಜ್ಯದಲ್ಲಿ ಆಯ್ದ ಒಂದು ಜಿಲ್ಲೆಯ 100 ಜನ ವಿಜ್ಞಾನ ಮತ್ತು ಗಣಿತದ ಪ್ರೌಢಶಾಲೆಯ ಶಿಕ್ಷಕರಿಗೆ ಐ.ಐ.ಎಸ್.ಸಿ. ಸಹಯೋಗದೊಂದಿಗೆ 10 ದಿನಗಳ ಪುನಃಶ್ಚೇತನ ತರಬೇತಿ ಕಾರ್ಯಕ್ರಮವನ್ನು ಡಿಸೆಂಬರ್ ತಿಂಗಳಲ್ಲಿ ಬಿಜಾಪುರದಲ್ಲಿ ನಡೆಸಲಾಯಿತು. ಇದರ ವೆಚ್ಚ ರೂ.1.50 ಲಕ್ಷಗಳಾಗಿರುತ್ತದೆ.

6. **ವಿಜ್ಞಾನ ಕೇಂದ್ರಗಳ ನಿರ್ವಹಣೆ :**

224 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ ಒಂದರಂತೆ ರಾಜ್ಯದಲ್ಲಿ 224 ವಿಜ್ಞಾನ ಕೇಂದ್ರಗಳಿದ್ದು, ಅವುಗಳ ಕಾರ್ಯ ನಿರ್ವಹಣೆಗಾಗಿ ಪ್ರತಿ ಶಾಲೆಗೆ ರೂ.7000/- ಗಳನ್ನು ನೀಡಲಾಗಿದ್ದು, ಸದರಿ ಮೊತ್ತವನ್ನು 10 ಸಿ.ಟಿ.ಇ. ಗಳ ಮೂಲಕ ನೀಡಲಾಗಿದೆ. ಇದರ ವೆಚ್ಚ ರೂ.15.68 ಲಕ್ಷಗಳಾಗಿರುತ್ತದೆ.

ಆ) **ಶಿಕ್ಷಣ ತಂತ್ರಜ್ಞಾನ ಘಟಕ :**

ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಸಿಕೊಂಡು ಶಿಕ್ಷಣಕ್ಕೆ ತಾಂತ್ರಿಕತೆಯ ಒತ್ತುಕೊಟ್ಟು ರೇಡಿಯೋ, ಶಿಕ್ಷಣ ಸಂವಾದ, ಶ್ರವಣ ಮತ್ತು ದೃಶ್ಯ ಮಾಧ್ಯಮ-ಟಿವಿ, ಗಣಕಯಂತ್ರ, ಉಪಗ್ರಹ ಆಧಾರಿತ ದೂರಸಂಪರ್ಕ ತರಬೇತಿ ಕಾರ್ಯಕ್ರಮ ಇತ್ಯಾದಿಗಳ ಮುಖಾಂತರ ಶಿಕ್ಷಣ ನೀಡಿದಲ್ಲಿ ಶಿಕ್ಷಣ ಇನ್ನೂ ಪರಿಣಾಮಕಾರಿಯಾಗಬಲ್ಲದು ಎಂದು ತಿಳಿಸುವುದೇ ಈ ತಂತ್ರಜ್ಞಾನ ಶಿಕ್ಷಣ ಘಟಕದ ಗುರಿ. ಈ ಘಟಕವು ಕೆಳಗೆ ನೀಡಿರುವ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸುತ್ತಿದೆ.

**ಗಣಕ ಮತ್ತು ಗಣಕ ಆಧಾರಿತ ಶಿಕ್ಷಣ:** ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಗಳ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಇರುವ ಸರ್ಕಾರಿ ಪ್ರೌಢ ಶಾಲೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣ ಜಾರಿಗೊಳಿಸಲು ಕ್ರಮ ಕೈಗೊಂಡು ಅವುಗಳ ವಿವರ ಈ ರೀತಿ ಇದೆ.

1) **ಮಾಹಿತಿ ಸಿಂಧು ಯೋಜನೆ :**

2008-09ನೇ ಸಾಲಿನಲ್ಲಿ ಒಟ್ಟು 1009 ಮಾಹಿತಿ ಸಿಂಧು ಶಾಲೆಯಲ್ಲಿನ 8, 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ 4.07 ಲಕ್ಷ ಕಂಪ್ಯೂಟರ್ ಪಠ್ಯಪುಸ್ತಕ ಹಂಚಿಕೆ ಮಾಡಲಾಗಿದ್ದು, ಕಂಪ್ಯೂಟರ್ ಶಿಕ್ಷಣ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣ ತರಬೇತಿಯ ಪ್ರಯೋಜನವನ್ನು ಎಲ್ಲಾ ಮಕ್ಕಳು ಪಡೆಯುತ್ತಿದ್ದಾರೆ. ಅಲ್ಲದೇ ಮಧ್ಯಮಾವಧಿ ಹಾಗೂ ಬೇಸಿಗೆ ರಜಾವಧಿಯಲ್ಲಿ ಪ್ರತಿ ಕಂಪ್ಯೂಟರ್‌ಗೆ

ಇಬ್ಬರು ಶಿಕ್ಷಕರಂತೆ ಕನಿಷ್ಠ 10 ದಿನಗಳ ತರಬೇತಿಯನ್ನು ಪ್ರೌಢ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೀಡಲಾಗುತ್ತಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.1409 ಲಕ್ಷಗಳಾಗಿದ್ದು, ಇಲ್ಲಿಯವರೆಗೆ ರೂ.499.79 ಲಕ್ಷಗಳು ಖರ್ಚಾಗಿರುತ್ತದೆ.

**2) <u>ಅಮೇರಿಕನ್ ಇಂಡಿಯಾ ಫೌಂಡೇಷನ್ :</u>**

ಈ ಸಂಸ್ಥೆಯು ಡಿ.ಎಸ್.ಇ.ಆರ್.ಟಿ.ಯ ಸಹಭಾಗಿತ್ವದೊಂದಿಗೆ ಡಿಜಿಟಲ್ ಈಕ್ವಿಲೈಜರ್ ಕಾರ್ಯಕ್ರಮವನ್ನು ಆಯ್ದ 18 ಜಿಲ್ಲೆಗಳ 216 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅನುಷ್ಠಾನಗೊಳಿಸಿದೆ. 2008-09ನೇ ಸಾಲಿಗೆ ಶಿಕ್ಷಕರ ಕಂಪ್ಯೂಟರ್ ಕಲಿಕೆಯನ್ನು ಬಲವರ್ಧಿಸಲು ಸಂಸ್ಥೆಯಿಂದ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಇದರ ಪ್ರಗತಿಯ ಬಗ್ಗೆ ತ್ರೈಮಾಸಿಕ ಮರದಿಗಳನ್ನು ಈ ನಿರ್ದೇಶನಾಲಯಕ್ಕೆ ಸಲ್ಲಿಸಲಾಗುತ್ತಿದೆ.

- ಡಿಜಿಟಲ್ ಈಕ್ವಿಲೈಜರ್ ಕಾರ್ಯಕ್ರಮದ ಅಡಿಯಲ್ಲಿ ಶಿಕ್ಷಕರ ಬೋಧನಾ ಕಲಿಕೆಯ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಸ್ವ-ಸಾಮರ್ಥ್ಯ ಚಟುವಟಿಕೆಗೆ ಸಂಬಂಧಿಸಿದ ಸಾಹಿತ್ಯ ಸಂಚಿಕೆ ನೀಡುವುದು. ತಾಂತ್ರಿಕ ಮತ್ತು ಶೈಕ್ಷಣಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಸಾಮರ್ಥ್ಯ ಹೆಚ್ಚಿಸುವುದು.
- ತಾಂತ್ರಿಕ ತರಬೇತಿಯನ್ನು ಶಿಕ್ಷಕರಿಗೆ ಹಾಗೂ ಚಟುವಟಿಕೆಗೆ ಆಧಾರಿತ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು.
- ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಸಾಮಗ್ರಿ ರಚನೆ.
- ಎಲ್ಲಾ ಚಟುವಟಿಕೆಗಳಿಗೆ ಸಂಬಂಧಿಸಿದ ಡಾಕ್ಯುಮೆಂಟೇಷನ್ (ದಾಖಲೆ) ಇಡುವುದು.

ಬೆಂಗಳೂರಿನ 14 ಶಾಲೆಗಳಲ್ಲಿ ಂಖಈ ಸಂಸ್ಥೆಯು ಕಂಪ್ಯೂಟರ್ ಕೊಠಡಿ ಪೂರ್ವ ಸಿದ್ಧತೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣ ನೀಡುವುದನ್ನು ಮುಖ್ಯ ಉದ್ದೇಶವಾಗಿರಿಸಿಕೊಂಡಿದೆ ಹಾಗೂ ಚಟುವಟಿಕೆ ಆಧಾರಿತ ತ್ರೈಮಾಸಿಕ ವರದಿಯನ್ನು ಸಲ್ಲಿಸುತ್ತಿದೆ. 2008-09ನೇ ಸಾಲಿನ ನವೆಂಬರ್‌ನಲ್ಲಿ ಬಾಲಮೇಳ ನಡೆಸಿರುತ್ತಾರೆ.

**3) <u>ಐ.ಸಿ.ಟಿ. ಯೋಜನೆ :</u>**

ಎ) **<u>ಐ.ಸಿ.ಟಿ. ಯೋಜನೆ ಫೇಸ್-ಖ</u>** :- ಈ ಯೋಜನೆಯಡಿ 480 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು 2007-08ನೇ ಸಾಲಿನ ಜೂನ್ ಮಾಹೆಯಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯ ಅವಧಿ ಒಟ್ಟು 5 ವರ್ಷಗಳಾಗಿರುತ್ತದೆ. ಈ ಯೋಜನೆಯನ್ನು ನಿರ್ವಹಣಾ ಸಂಸ್ಥೆಗಳಾದ ಎಡುಕಾಂಪ್ ಮತ್ತು ಎವೆರಾನ್ ಸಂಸ್ಥೆಗಳಿಂದ ಅನುಷ್ಠಾನಗೊಳಿಸ ಲಾಗುತ್ತಿದೆ. ಪ್ರತಿ ವರ್ಷ ಅಂದಾಜು 2 ಲಕ್ಷ ವಿದ್ಯಾರ್ಥಿಗಳು ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಈ ಯೋಜನೆಯಡಿಯಲ್ಲಿ ಪಡೆಯುತ್ತಿದ್ದಾರೆ. 2008-09ನೇ ಸಾಲಿಗೆ ಕಂಪ್ಯೂಟರ್ ಪಠ್ಯ ಪುಸ್ತಕಗಳನ್ನು ಒದಗಿಸಲಾಗಿದೆ. ಮಧ್ಯಂತರ ರಜೆ ಮತ್ತು ಬೇಸಿಗೆ ರಜೆಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳ ಹಾಗೂ ಸುತ್ತಮುತ್ತಲಿನ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ತರಬೇತಿಯನ್ನು ನೀಡಲಾಗುತ್ತಿದೆ.

ಬಿ) **<u>ಐ.ಸಿ.ಟಿ. ಯೋಜನೆ ಫೇಸ್- ಖಖ</u>** :- ಈ ಯೋಜಯು ಕೇಂದ್ರ ಪುರಸ್ಕೃತ ಯೋಜನೆ ಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ 1571 ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು 2008-09ನೇ ಸಾಲಿನಲ್ಲಿ ಜಾರಿಗೊಳಿಸಲಾಗುವುದು. ಪ್ರತಿ ಶಾಲೆಗೆ ಘಟಕ ವೆಚ್ಚವಾಗಿ ರೂ 6.70 ಲಕ್ಷ ನಿಗದಿಯಾಗಿದ್ದು, ಅದರಲ್ಲಿ 5.00 ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಮತ್ತು 1.70 ಲಕ್ಷ ರೂ.ಗಳನ್ನು ರಾಜ್ಯ ಸರ್ಕಾರಿದಿಂದ ಭರಿಸಲಾಗುವುದು. ಈ ಯೋಜನೆಯ ಒಟ್ಟು ಮೊತ್ತ 105.26 ಕೋಟಿ ರೂ.ಗಳಾಗಿದ್ದು, ಕೇಂದ್ರ ಸರ್ಕಾರದಿಂದ ರೂ.31.42 ಕೋಟಿಗಳನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಲಾಗಿದೆ. ರಾಜ್ಯ

ಸರ್ಕಾರದಿಂದ ಶಾಲೆಗಳಲ್ಲಿ ಕಂಪ್ಯೂಟರ್ ಕೊಠಡಿ ಪೂರ್ವ ಸಿದ್ಧತೆಗಾಗಿ ರೂ.11.78 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಪ್ರತಿ ಶಾಲೆಗೆ ರೂ.75,000 ದಂತೆ ಹಂಚಿಕೆ ಮಾಡಲಾಗಿದೆ. 4,03,550 ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ರಾಜ್ಯದ 2008–09ನೇ ಸಾಲಿನ ಆಯವ್ಯಯದಲ್ಲಿ ರೂ.10,000–00 ಲಕ್ಷಗಳು ಮಂಜೂರಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್‌ನಲ್ಲಿ ಗುರುತಿಸಲಾದ ಸಂಸ್ಥೆಗೆ ಆದೇಶ ನೀಡಲಾಗಿದೆ. ನವೆಂಬರ್ 2008 ರಿಂದ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಪ್ರಾರಂಭವಾಗಿದೆ. ನಿರ್ವಹಣಾ ಸಂಸ್ಥೆಯು ಶಾಲೆಗಳಿಗೆ ಗಣಕಯಂತ್ರ ಹಾಗೂ ಇತರೆ ಉಪಕರಣಗಳನ್ನು ಭಾಗಶಃಸರಬರಾಜು ಮಾಡಿದೆ.

**4) <u>ಎಜುಸ್ಯಾಟ್ ಕಾರ್ಯಕ್ರಮ :</u>**

ಎಜುಸ್ಯಾಟ್ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ಡಿ.ಎಸ್.ಇ.ಆರ್.ಟಿ. ಯಲ್ಲಿ ಸ್ಟುಡಿಯೋ ಮತ್ತು ಹಬ್‌ಗಳನ್ನು ಸ್ಥಾಪಿಸಲಾಗಿದ್ದು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಶಾಲೆಗಳನ್ನು ಆಯ್ಕೆ ಮಾಡಲಾಗಿದೆ. ಇಸ್ರೊ ನೆರವಿನಿಂದ ಈ ಶಾಲೆಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 458 ಚಿತ್ರಗಳನ್ನು ಪ್ರಸಾರಕ್ಕಾಗಿ ತಯಾರಿಸಲಾಗಿದೆ.

**5) <u>ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮ :</u>**

ಶೈಕ್ಷಣಿಕ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಡಿ.ಎಸ್.ಇ.ಆರ್.ಟಿ. ಯ ಸ್ಟುಡಿಯೋ ಮೂಲಕ ಹಮ್ಮಿಕೊಳ್ಳಲಾಗಿದೆ. ಶಾಲಾ ಶಿಕ್ಷಕರುಗಳಿಗೆ, ಸಿ.ಆರ್.ಸಿ., ಬಿ.ಆರ್.ಸಿ. ಗಳಿಗೆ ಹಾಗೂ ರಾಜ್ಯದ ವಿವಿಧ ಹಂತದ ಅಧಿಕಾರಿಗಳಿಗೆ ತರಬೇತಿ ನೀಡಿದ್ದು, ಸಭೆ, ಸಂವಾದ ಇತ್ಯಾದಿಗಳನ್ನು ನೇರವಾಗಿ ಟೆಲಿಕಾನ್ಫರೆನ್ಸಿಂಗ್ ಮೂಲಕ ನಡೆಸಲಾಗುತ್ತಿದೆ. ರಾಜ್ಯದ 202 ಬಿ.ಆರ್.ಸಿ. ಗಳಲ್ಲಿ ಮತ್ತು ಎಲ್ಲಾ ಡಯಟ್‌ಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ಅಳವಡಿಸಲಾಗಿದೆ.

**6) <u>ರೇಡಿಯೋ ಕಾರ್ಯಕ್ರಮ :</u>**

2008–09 ನೇ ಸಾಲಿನಲ್ಲಿ ರಾಜ್ಯದ 13 ಆಕಾಶವಾಣಿ ಕೇಂದ್ರಗಳಿಂದ ಪಠ್ಯಾಧಾರಿತ ರೇಡಿಯೋ ಕಾರ್ಯಕ್ರಮಗಳನ್ನು ತರಗತಿ 1 ರಿಂದ 8ರ ವರೆಗೆ ಪ್ರಸಾರ ಮಾಡಲಾಗುತ್ತಿದೆ. ಈ ಸಾಲಿನಲ್ಲಿ 406 ರೇಡಿಯೋ ಪಾಠಗಳನ್ನು ಪ್ರಸಾರ ಮಾಡಲಾಗಿದೆ. 1 ರಿಂದ 5ನೇ ತರಗತಿವರೆಗಿನ ಪಠ್ಯವನ್ನು ಇ.ಡಿ.ಸಿ. ಯಿಂದ ತಯಾರಿಸಲಾಗಿದ್ದು, ಸರ್ವಶಿಕ್ಷಣ ಅಭಿಯಾನದ ಅನುದಾನದಿಂದ ಭರಿಸಲಾಗುತ್ತಿದೆ. ರೂ.90.00 ಲಕ್ಷಗಳ ಪ್ರಸಾರ ವೆಚ್ಚವನ್ನು ಆಕಾಶವಾಣಿಗೆ ಪಾವತಿಸಲಾಗಿದೆ.

## II. <u>ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗ :</u>

**ಅ) ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ವಿಭಾಗ :** ಇದರ ಮುಖ್ಯ ಕಾರ್ಯಕ್ರಮಗಳೆಂದರೆ – ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವುದು, ಶಿಕ್ಷಕರಿಗೆ ವಿಷಯ ಕಾರ್ಯಾಗಾರ ತರಬೇತಿ ಸಂಚಿಕೆಗಳ ತಯಾರಿಕೆ, ಸೆಮಿಸ್ಟರ್ ಪದ್ಧತಿಯ ಮಾರ್ಗದರ್ಶನ ಮುಂತಾದವುಗಳನ್ನೊಳಗೊಂಡಿದೆ.

1) **ಶೈಕ್ಷಣಿಕ ಸುಧಾರಣೆ :** ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಕೈಪಿಡಿ ರಚನೆ, ತರಬೇತಿ ಸಂಚಿಕೆಗಳ ಹಾಗೂ ಸೆಮಿಸ್ಟರ್ ಪದ್ಧತಿಯ ಅನುಷ್ಠಾನ ಮಾರ್ಗಸೂಚಿಗಳನ್ನು ಸಿದ್ಧಪಡಿಸುವುದು, ಜಿಲ್ಲಾ ಮಟ್ಟದ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಮುಖಾಂತರ ಶಿಕ್ಷಕರಿಗೆ ಬೇರೆ ಬೇರೆ ಕಾರ್ಯಾಗಾರಗಳನ್ನು, ತರಬೇತಿಗಳನ್ನು ನೀಡಲಾಗುತ್ತಿದೆ. 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ 8,29,000 ಪ್ರಗತಿ ಪತ್ರಗಳನ್ನು ಮುದ್ರಿಸಿ ರಾಜ್ಯದ 33 ಜಿಲ್ಲಾ ಉಪ ನಿರ್ದೇಶಕರ ಮುಖಾಂತರ

ಶಾಲೆಗಳಿಗೆ ಸರಬರಾಜು ಮಾಡಲಾಗಿದೆ. ಪ್ರಸ್ತುತ ವರ್ಷದ ಪ್ರಗತಿ ಪತ್ರದಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ಮಾಹಿತಿಯನ್ನು (ಖಣಣಜಜಟಣ ಊಚಿಡಿಥಿ) ಸಂಕ್ಷಿಪ್ತವಾಗಿ ನೀಡಲಾಗಿದೆ.

2) **ಮೌಲ್ಯಮಾಪನ ತರಬೇತಿ :** ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ನಿರಂತರ ಮೌಲ್ಯಮಾಪನ ತರಬೇತಿಗಳನ್ನು ನೀಡಲಾಗಿದ್ದು, ಇದನ್ನು ಮುಖ್ಯ ಶಿಕ್ಷಕರಿಗೆ, ಶಿಕ್ಷಣ ಸಂಯೋಜಕರಿಗೆ, ವಿಷಯ ಪರಿವೀಕ್ಷಕರಿಗೂ ಸಹ ವಿಸ್ತರಿಸಲಾಗಿದೆ. 10ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಶ್ನಕೋಶಿಯನ್ನು ರಚಿಸುವುದರ ಮೂಲಕ ಪರೀಕ್ಷೆಗೆ ವಿಶೇಷ ತಯಾರಿಯನ್ನು ನೀಡಲಾಗುತ್ತಿದೆ. ಶಿಕ್ಷಕರ ತರಬೇತಿ ಸಂಚಿ, ಮಾರ್ಗದರ್ಶನ ಕೈಪಿಡಿ ರಚನೆಯ ಪ್ರಕ್ರಿಯೆ ಜಾರಿಯಲ್ಲಿದೆ. ಅಲ್ಲದೆ 2008 ರಲ್ಲಿ ಓಅಇಖಖಿ ಸಹಯೋಗದಿಂದ 3 ಮತ್ತು 8ನೇ ತರಗತಿಯ ಆಯ್ದ ವಿದ್ಯಾರ್ಥಿಗಳಿಗೆ ಮಧ್ಯಂತರ ಸಾಧನಾ ಸಮೀಕ್ಷೆ (ಒಜ ಣಜಡಿಟ ಂತಿಋಜತಜಟಜಟಣ ಖಣಡಿತಜಥಿ) ಹಮ್ಮಿಕೊಳ್ಳಲಾಗಿದ್ದು ಓಅಇಖಖಿ ಯಿಂದ ಫಲಿತಾಂಶವನ್ನು ನಿರೀಕ್ಷಿಸಲಾಗಿದೆ. ನಮ್ಮ ರಾಜ್ಯದ ಆಯ್ದ 11 ಜಿಲ್ಲೆಗಳ 330 ಶಾಲೆಗಳಿಂದ 8 ನೇ ತರಗತಿಯ ಒಟ್ಟು 4950 ಮಕ್ಕಳನ್ನು ಹಾಗೂ 3ನೇ ತರಗತಿಯ ಒಟ್ಟು 4462 ಮಕ್ಕಳನ್ನು ಈ ಸಮೀಕ್ಷೆಯ ಕಾರ್ಯದಲ್ಲಿ ಒಳಪಡಿಸಲಾಗಿದೆ.

ಆ) **ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗ :** ಮುಖ್ಯವಾಗಿ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗದಲ್ಲಿ ಕಾರ್ಯಕ್ರಮಗಳು ಕೇಂದ್ರ ಆಧಾರಿತವಾಗಿದ್ದು, ವೆಚ್ಚವನ್ನು ಕೇಂದ್ರವೇ ಭರಿಸುತ್ತದೆ.

ಸಿಸಿಆರ್‌ಟಿ, ನವದೆಹಲಿ, ಇವರು ಆಯೋಜಿಸಿರುವ ತರಬೇತಿಗಳಿಗೆ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಮತ್ತು ಪ್ರಶಿಕ್ಷಕರನ್ನು ನಿಯೋಜಿಸಲಾಗುತ್ತದೆ. ಪ್ರತಿ ಮಾಹೆಯೂ 4 ತರಬೇತಿಗಳಲ್ಲಿ ಒಂದು ತರಬೇತಿಗೆ 10 ಮಂದಿಯಂತೆ ವರ್ಷಕ್ಕೆ 480 ಮಂದಿ ತರಬೇತಿ ಪಡೆಯುತ್ತಿದ್ದಾರೆ.

ಈ ವಿಭಾಗದಿಂದ 1 ರಿಂದ 10ನೇ ತರಗತಿಗಳ ರಾಜ್ಯ ಪಠ್ಯವಸ್ತು ರಚಿತವಾಗಿದೆ. ಓಅಈ–2005ರ ಮಾರ್ಗದರ್ಶನದಲ್ಲಿ ಹಾಗೂ ಸ್ಥಳೀಯ ಪರಿಸರ, ಮೌಲ್ಯಗಳು, ಐತಿಹಾಸಿಕ, ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸರಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ವಯೋಮಾನಕ್ಕನುಸರಿಸಿ ಅವರಿಗೆ ಆಕರ್ಷಕವೆನಿಸುವ ರೀತಿಯಲ್ಲಿ ವಿಷಯಗಳನ್ನು ಪ್ರಸ್ತಾಪಿಸಿ ರಚಿಸಿದ್ದು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲದೆ 6 ರಿಂದ 7ನೇ ತರಗತಿಯ ದೈಹಿಕ ಶಿಕ್ಷಣ ಪಠ್ಯ ಪುಸ್ತಕ ಹಾಗೂ ಸವಿ ಕನ್ನಡ–2 ರಚನೆಯಾಗುತ್ತಿವೆ.

ಆರ್.ಐ.ಇ. ಸಂಸ್ಥೆ, ಬೆಂಗಳೂರು, ಇವರು 2008–09ನೇ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಆಂಗ್ಲ ಭಾಷೆಯ ಇಬ್ಬರು ಶಿಕ್ಷಕರಂತೆ ಒಟ್ಟು 95 ಮಂದಿಯನ್ನು ಆಯ್ಕೆ ಮಾಡಿ ತರಬೇತಿ ನೀಡಿರುತ್ತಾರೆ.

ಇ) **ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ (ಓಖಿಖಇ)** : ಓಖಿಖಇ ಪರೀಕ್ಷೆಯು 3 ಹಂತದ್ದಾಗಿದ್ದು, ಮೊದಲನೇ ಹಂತದ ರಾಜ್ಯ ಮಟ್ಟದ ಪರೀಕ್ಷೆಯನ್ನು ಎನ್.ಸಿ.ಇ.ಆರ್.ಟಿ. ಯು ನಡೆಸುತ್ತದೆ. ಈ ಪರೀಕ್ಷೆಯ ಮುಖ್ಯ ಉದ್ದೇಶವುವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪೋಷಿಸುವುದು ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ ನೀಡುವ ಮೂಲಕ ಅವರಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಸಹಕಾರಿಯಾಗಿದೆ. ರಾಜ್ಯದ ಸರ್ಕಾರಿ ಅನುದಾನಿತ, ಅನುದಾನರಹಿತ ರಾಜ್ಯ ಹಾಗೂ ಕೇಂದ್ರ ಪಠ್ಯ ವಸ್ತು ಅನುಸರಿಸುತ್ತಿರುವ ಶಾಲೆಗಳಲ್ಲಿ 8 ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಪರೀಕ್ಷೆಯನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

2008–09ನೇ ಸಾಲಿನ ನವೆಂಬರ್ ಮಾಹಿಯಲ್ಲಿ ರಾಜ್ಯದಲ್ಲಿನ 94 ಪರೀಕ್ಷಾ ಕೇಂದ್ರಗಳಲ್ಲಿ 8ನೇ ತರಗತಿಯ ಒಟ್ಟು 23133 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದು, ಫಲಿತಾಂಶದ ನಿರೀಕ್ಷೆಯಲ್ಲಿರುತ್ತಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದಲ್ಲಿ ಮೇ 2009 ರಲ್ಲಿ ಪರೀಕ್ಷೆಯು ನಡೆಸಲ್ಪಡುತ್ತದೆ.

**ಈ) ನ್ಯಾಷನಲ್ ಮೀನ್ಸ್–ಕಮ್–ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆ (ಓಒಓಖ) :** ಕೇಂದ್ರ ಮಾನವ ಸಂಪನ್ಮೂಲ ವತಿಯಿಂದ ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಗಳ ಪ್ರೌಢ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾಸಿಕ ರೂ.500/– ರಂತೆ 4 ವರ್ಷಗಳ ಕಾಲ ವಿದ್ಯಾರ್ಥಿ ವೇತನ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತಾರೆ.

ಈ ಯೋಜನೆಗೆ ಅರ್ಹರಾಗಲು ಪೋಷಕರ ವಾರ್ಷಿಕ ವರಮಾನ ರೂ.1,50,000ಗಳ ಮಿತಿಯೊಳಗಿರಬೇಕು ಹಾಗೂ ಓಖಿಖಇ ಮಾದರಿಯಲ್ಲಿ ಜರುಗುವ ರಾಜ್ಯಮಟ್ಟದ ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆಯನ್ನು ಗಳಿಸಬೇಕು. ಈ ಯೋಜನೆಯ ಮುಖ್ಯ ಉದ್ದೇಶ 8ನೇ ತರಗತಿಯ ನಂತರ ಶಾಲೆ ಬಿಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಡೆಯುವುದು ಹಾಗೂ 8 ರಿಂದ 12ನೇ ತರಗತಿಯವರೆಗೆ ನಿರಂತರ ವ್ಯಾಸಂಗ ಮುಂದುವರೆಯುವಂತೆ ಮಾಡುವುದಾಗಿದೆ. 2008–09ನೇ ಸಾಲಿನಲ್ಲಿ ಈ ಪರೀಕ್ಷೆಯನ್ನು ನವೆಂಬರ್ ಮಾಹೆಯಲ್ಲಿ ನಡೆಸಲಾಗಿದ್ದು, 12231 ವಿದ್ಯಾರ್ಥಿಗಳು ಭಾಗವಹಿಸಿ ಫಲಿತಾಂಶದ ನಿರೀಕ್ಷೆಯಲ್ಲಿರುತ್ತಾರೆ.

ಈ ಎರಡೂ ಪರೀಕ್ಷೆಗಳಲ್ಲಿ ಭಾಗವಹಿಸಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 35364 ಹಾಗೂ ಒಟ್ಟು ವೆಚ್ಚ ರೂ.14.00 ಲಕ್ಷಗಳಾಗಿರುತ್ತದೆ.

## ರಾಷ್ಟ್ರೀಯ ಜನಸಂಖ್ಯಾ ಕಾರ್ಯಕ್ರಮ

ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣದ ಮೂಲಕ ಜನಸಂಖ್ಯಾ ಸ್ಫೋಟ, ಜನಸಂಖ್ಯೆಯ ತೀವ್ರ ಬೆಳವಣಿಗೆಯಿಂದಾಗಿ ಉದ್ಭವಿಸುವ ಸಮಸ್ಯೆಗಳು, ಜಂಡರ್ ವ್ಯತ್ಯಾಸ, ಬಡತನ ಪ್ರಭಾವ ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶ ಹೊಂದಿದೆ. ಈ ಸಂಬಂಧ ಸಹ ಪಠ್ಯ ಚಟುವಟಿಕೆಗಳು, ಪಠ್ಯಕ್ರಮ ಹಾಗೂ ಇತರ ಸಾಹಿತ್ಯಾಭಿವೃದ್ಧಿ, ತರಬೇತಿ, ಜನಸಂಖ್ಯಾ ಶಿಕ್ಷಣದ ಮೌಲ್ಯ ಮಾಪನ ಹಾಗೂ ಸಂಶೋಧನೆ, ಪರಸ್ಪರ ಸಂವಾದ, ಚರ್ಚೆಗಳು ಹಾಗೂ ಆರೋಗ್ಯಾಧಾರಿತ ಸಾಮಾಜಿಕ ಪಿಡುಗುಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಹದಿಹರೆಯ ಶಿಕ್ಷಣ (ಂಇಕ) :**

ಈ ಕಾರ್ಯಕ್ರಮದ ಅನುಷ್ಠಾನದ ಸಲುವಾಗಿ ಡಿ.ಎಸ್.ಇ.ಆರ್.ಟಿ. ಯನ್ನು ಉಸ್ತುವಾರಿ ಇಲಾಖೆಯನ್ನಾಗಿ ಶಿಕ್ಷಣ ಇಲಾಖೆ ನೇಮಿಸಿದೆ. ವಿದ್ಯಾರ್ಥಿಗಳಲ್ಲಿ ಪ್ರೇರಣೆ, ಶಿಸ್ತು, ಆತ್ಮಾಭಿಮಾನ, ಪರಸ್ಪರ ಸಂಬಂಧಗಳು, ದೇಹ ಮತ್ತು ಮನಸ್ಸನ್ನು ಅರಿತುಕೊಳ್ಳುವುದು, ಮಾದಕ ವಸ್ತುಗಳ ದುರ್ಬಳಕೆ ಹಾಗೂ ಮಕ್ಕಳ ಲೈಂಗಿಕ ದುರ್ಬಳಕೆ ಬಗ್ಗೆ ಜಾಗೃತಿ ಇತ್ಯಾದಿಗಳ ಬಗ್ಗೆ ಮಾರ್ಗದರ್ಶನ ಮತ್ತು ಆಪ್ತ ಸಲಹೆಗಳ ಮೂಲಕ ಜ್ಞಾನ ನೀಡುವುದರ ಜೊತೆಗೆ ಇತ್ತೀಚೆಗೆ ಹೆಚ್ಚುತ್ತಿರುವ ಊಖಗಿ/ಂಖಆಖ ದುಷ್ಪರಿಣಾಮಗಳ ಬಗ್ಗೆ ಜೀವನ ಕೌಶಲ್ಯ ಶಿಕ್ಷಣ ಮುಖೇನ ಹದಿಹರೆಯ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವಂತಹ ಕಾರ್ಯಕ್ರಮವಾಗಿದೆ.

## III. <u>ಶಿಕ್ಷಕರ ಶಿಕ್ಷಣ ವಿಭಾಗ :</u>

ಕರ್ನಾಟಕ ರಾಜ್ಯದಲ್ಲಿರುವ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಈ ಕೆಳಗಿನಂತಿವೆ :

| ಸಂಸ್ಥೆಗಳು | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|---|
| ಡಿಎಡ್ | 27 ಡಯಟ್‌ಗಳು | 40 | 887 | 968 |

| | | | | |
|---|---|---|---|---|
| ಕಾಲೇಜು | 14 ಟಿಟಿಐಗಳು | | | |
| ಬಿಎಡ್ ಕಾಲೇಜು | 6 ಸಿ.ಟಿ.ಇ. ಗಳು<br>1 (ಸ. ಬಿಎಡ್. ಕಾಲೇಜ್, ಚಿಕ್ಕಬಳ್ಳಾಪುರ)<br>2 (ಧಾರವಾಡ ಮತ್ತು ವಿಜಾಪುರ ವಿಶ್ವವಿದ್ಯಾನಿಲಯಗಳಿಗೆ ಸೇರಿವೆ) | 22 | 368 | 399 |

ಶಿಕ್ಷಕರ ಶಿಕ್ಷಣ ವಿಭಾಗವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ, ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಮತ್ತು ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳ ಆಡಳಿತ, ಅನುದಾನ ಹಂಚಿಕೆ ಅಲ್ಲದೆ ಶೈಕ್ಷಣಿಕ ಗುಣಮಟ್ಟ ಸುಧಾರಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಿದೆ.

1. ಸೇವಾ ಪೂರ್ವ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ.
2. ಡಯಟ್, ಸಿ.ಟಿ.ಇ.ಗಳ ಮೂಲಕ ಸೇವಾನಿರತ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ.
3. ಸರ್ಕಾರಿ ಶಿಕ್ಷಕರ ಶಿಕ್ಷಣ ತರಬೇತಿ (14 ಜಿ ಟಿ ಟಿ ಐ ಗಳು) ಸಂಸ್ಥೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮ (ಕಟ್ಟಡ ರಿಪೇರಿ ಸಂಬಂಧ ರೂ.73.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಅಗತ್ಯವಿರುವ ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ. ಈ ಸಂಸ್ಥೆಗಳಿಗೆ ಒಟ್ಟು ರೂ.37.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ).

## ಡಯಟ್ ವಿಭಾಗ

2008-09ರ ಸಾಲಿನಲ್ಲಿ ಈವರೆಗೆ ರಾಜ್ಯದ ಡಯಟ್‌ಗಳ ಮೂಲಕ ಸುಮಾರು 73,000 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕನ್ನಡ, ಆಂಗ್ಲ, ಗಣಿತ, ವಿಜ್ಞಾನ, ಹಿಂದಿ, ಭೂಗೋಳ ವಿಷಯಗಳಲ್ಲಿ ವಿಷಯ ಸಂಪಾದೀಕರಣ ತರಬೇತಿ, ಚೈತನ್ಯ ಇವುಗಳಿಗೆ ಸಂಬಂಧಿಸಿದಂತೆ ಪ್ರಾಜೆಕ್ಟ್, ಸಾಮಾಜಿಕ ಉಪಯುಕ್ತತೆ ಇತ್ಯಾದಿ ವಿಷಯಗಳ ಬಗ್ಗೆ ತರಬೇತಿ ನೀಡಲಾಗಿದೆ. ಇದಕ್ಕೆ ತಗಲಿರುವ ವೆಚ್ಚ ರೂ.50,40,000 ಗಳೆಂದು ಅಂದಾಜು ಮಾಡಲಾಗಿದೆ.

ರಾಜ್ಯದಲ್ಲಿರುವ ಸಿ.ಟಿ.ಇ. ಗಳ ಮೂಲಕ 2008-09ರ ಸಾಲಿನಲ್ಲಿ ಸುಮಾರು 3100 ಪ್ರೌಢ ಶಾಲಾ ಶಿಕ್ಷಕರಿಗೆ ರೂ.24.00 ಲಕ್ಷ ವೆಚ್ಚದಲ್ಲಿ ಕನ್ನಡ, ಆಂಗ್ಲ, ಹಿಂದಿ, ಗಣಿತ, ಸಮಾಜ ವಿಜ್ಞಾನ ವಿಷಯಗಳನ್ನು ತರಬೇತಿ ನೀಡಲಾಗಿದೆ. ಗಣಿತ, ಮತ್ತು ವಿಜ್ಞಾನ ವಿಷಯಗಳ ಕ್ಲಿಷ್ಟಾಂಶಗಳ ಬೋಧನೆ, ಭೂಗೋಳ ತರಬೇತಿ ಇವುಗಳಿಗೆ ಸಂಬಂಧಿಸಿದಂತೆ ಪ್ರಾಜೆಕ್ಟ್ ಬಗ್ಗೆ ತರಬೇತಿ ನೀಡಲಾಗಿದೆ. ಇದಲ್ಲದೆ ಸುಮಾತು 900 ಶಿಕ್ಷಕರಿಗೆ ರಜಾ ಅವಧಿಯಲ್ಲಿ 10 ದಿನಗಳ ಯೋಗ ಮತ್ತು ಮೌಲ್ಯ ಶಿಕ್ಷಣ ತರಬೇತಿ ನೀಡಲಾಗಿದೆ.

ಕೇಂದ್ರ ಸರ್ಕಾರದ ವತಿಯಿಂದ ಡಯಟ್‌ಗಳಿಗೆ ಕಟ್ಟಡ ರಿಪೇರಿಗಾಗಿ ಅನುದಾನವನ್ನು 2007 ರಲ್ಲಿ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಅಲ್ಲದೆ, 12ನೇ ಹಣಕಾಸು ಆಯೋಗದಡಿಯಲ್ಲಿ ಹಂತಹಂತವಾಗಿ ಡಯಟ್, ಸಿಟಿಇ, ಜಿಟಿಟಿಐ ಮತ್ತು ಬಿಆರ್‌ಸಿ ಗಳಿಗೆ ಕಟ್ಟಡ ಹಾಗೂ ಕಂಪ್ಯೂಟರ್‌ಗಳಿಗಾಗಿ ಅನುದಾನವು ಮಂಜೂರಾಗಿದೆ. 2006-07ನೇ ಸಾಲಿಗೆ ಅನುದಾನವು ಬಿಡುಗಡೆಯಾಗಿದ್ದು, ಕಾರ್ಯವು ಪ್ರಗತಿಯಲ್ಲಿದೆ.

## ಸರ್ವಶಿಕ್ಷಣ ಅಭಿಯಾನ

ಡಿ.ಎಸ್.ಇ.ಆರ್.ಟಿ. ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸ್.ಎಸ್.ಎ. ಶಾಖೆಯು ಸೇವಾನಿರತ ಶಿಕ್ಷಕರ ತರಬೇತಿಗಳಿಗೆ ಅನುದಾನ ಹಂಚಿಕೆ, ಸಾಮಗ್ರಿ ತಯಾರಿಕೆ, ಮುದ್ರಣ ಹಾಗೂ

ಸರಬರಾಜುಗಳನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ತರಬೇತಿಗಳನ್ನು ಡಯಟ್ ಹಾಗೂ ಬಿ.ಆರ್.ಸಿ. ಗಳ ಮೂಲಕ ನಡೆಸುತ್ತಿದೆ. ಹೊಸ ಶೈಕ್ಷಣಿಕ ಅವಿಷ್ಕಾರಗಳನ್ನು ಆಯೋಜಿಸುತ್ತಿದೆ.

ಕಳೆದ ಸಾಲಿನಲ್ಲಿ ರಾಜ್ಯದ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಅನ್ನು ಪರಿಚಯ ಭಾಷೆಯಾಗಿ ಅಳವಡಿಸಿದ್ದು, ಈ ಶಾಲೆಗಳಲ್ಲಿ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕರಿಗೆ ಬೋಧನೆಯಲ್ಲಿ ಆತ್ಮವಿಶ್ವಾಸ ತುಂಬಲು ಮತ್ತು ಕಲಿಕೆ ಸಂತಸದಾಯಕವಾಗಿಸಲು ಉಪಗ್ರಹ ಆಧಾರಿತ ತರಬೇತಿ, ಮುಖಾಮುಖಿ ತರಬೇತಿ ನೀಡಲಾಗಿದೆ. 2008–09ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳನ್ನು ಮುಂದುವರೆಸಲಾಗಿದೆ. ಬೇಸಿಗೆ ರಜಾ ಅವಧಿಯಲ್ಲಿ ಖಕಔಏಇಓ ಇಓಉಏಖಖಉೂ ಬಗ್ಗೆ 3 ದಿನಗಳ ತರಬೇತಿ ನೀಡಲಾಗಿದೆ.

ರಾಜ್ಯದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹಿಂದಿ ಬೋಧನೆಗಾಗಿ ಪ್ರತ್ಯೇಕ ನೇಮಕಾತಿ ಇಲ್ಲದಿರುವುದು ಅನೇಕ ಶಾಲೆಗಳಲ್ಲಿ ಹಿಂದಿ ಬೋಧನೆಯ ಕಡೆಗಣಿಸುವಿಕೆಗೆ ಕಾರಣವಾಗಿದೆ. ಇದನ್ನು ಸರಿದೂಗಿಸಲು ಎಲ್ಲಾ ಶಿಕ್ಷಕರಿಗೆ ಪ್ರಾಥಮಿಕ ಹಂತದಲ್ಲಿ ಹಿಂದಿಯನ್ನು ಕಲಿಸುವ ಸರಳ ವಿಧಾನ ತಿಳಿಸಲು 4 ದಿನಗಳ ಹಿಂದಿ ತರಬೇತಿಯನ್ನು ನೀಡಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲಿಯೂ ಶಾಲಾ ಚಟುವಟಿಕೆಗಳಲ್ಲಿ ಜೆಂಡರ್ ಹಾಗೂ ಇತರ ಸಾಮಾಜಿಕ ಸ್ತರಗಳಲ್ಲಿ ಅಸಮಾನತೆ ಹೋಗಲಾಡಿಸುವ ಬಗ್ಗೆ 2 ದಿನಗಳ ಜೆಂಡರ್ ತರಬೇತಿಯನ್ನು ರಾಜ್ಯದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಆಯೋಜಿಸಲಾಗಿದೆ. ಇದಲ್ಲದೆ ಪ್ರತಿ ತಿಂಗಳೂ ಒಂದು ದಿನದ ಕ್ಲಸ್ಟರ್ ಹಂತದ ಸಮಾಲೋಚನಾ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ.

## ನಲಿ–ಕಲಿ ವಿಧಾನದ ಅನುಷ್ಠಾನ

ನಲಿ–ಕಲಿ ವಿಧಾನದ ತರಬೇತಿ ಕುರಿತು ವಿನ್ಯಾಸ ಮತ್ತು ಸಾಹಿತ್ಯ ರಚಿಸಲಾಗುತ್ತಿದೆ. ಎಆಜ್ಯದಲ್ಲಿ 13691 ಶಾಲೆಗಳಲ್ಲಿ ನಲಿ–ಕಲಿ ಅನುಷ್ಠಾನವಾಗಿದ್ದು, ಪ್ರತಿ ಶಾಲೆಯ 2 ಶಿಕ್ಷಕರಿಗೆ ತರಬೇತಿಯನ್ನು ಜಿಲ್ಲಾ/ಬ್ಲಾಕ್ ಮಟ್ಟದಲ್ಲಿ ನೀಡಲಾಗಿರುತ್ತದೆ. ಈ ವಿಧಾನದಲ್ಲಿ ಕಲಿಕಾ ಪ್ರಕ್ರಿಯೆ, ತರಗತಿ ನಿರ್ವಹಣೆ, ಗುಂಪುಗಳ ರಚನೆ, ಕಾರ್ಡುಗಳ ಮತ್ತು ಖಐಒ ಗಳ ಬಳಕೆ ಇವುಗಳ ಕುರಿತು 8 ದಿನಗಳ ತರಬೇತಿ ನೀಡಲಾಗಿರುತ್ತದೆ. ನಲಿ–ಕಲಿ ಅನುಷ್ಠಾನಕ್ಕೆ ಸಂಬಂಧಿಸಿದ ಖರ್ಚುಗಳನ್ನು ಸರ್ವ ಶಿಕ್ಷಣ ಅಭಿಯಾನದ ಅನುದಾನದಿಂದ ಭರಿಸಲಾಗಿರುತ್ತದೆ.

2009–10 ರಿಂದ ನಲಿ–ಕಲಿ ವಿಧಾನವನ್ನು ರಾಜ್ಯದ ಎಲ್ಲಾ ಕನ್ನಡ ಮಾಧ್ಯಮದ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1 ಮತ್ತು 2 ನೇ ತರಗತಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರದ ಆದೇಶವಾಗಿದ್ದು, ಇದಕ್ಕೆ ಪೂರಕವಾಗಿ ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. 3 ಮತ್ತು 4 ನೇ ತರಗತಿಯ ನಲಿ–ಕಲಿ ಸಾಮಾಗ್ರಿಗಳ ಸಿದ್ಧತೆಯು ಡಿಸೆಂಬರ್ 2008 ರಿಂದ ನಡೆಯುತ್ತಿದೆ.

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಈ ಮಂಡಳಿಯು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಾಯಿದೆ 1966ರ ನಿಯಮ 16ರಲ್ಲಿ ಸೂಚಿಸಿರುವ ನಿಬಂಧನೆಗಳಿಗನುಸಾರವಾಗಿ ರಚಿತವಾಗಿರುವ ಸ್ವಾಯತ್ತ ಸಂಸ್ಥೆಯಾಗಿದೆ.

### ಮಂಡಳಿಯು ನಡೆಸುವ ಪರೀಕ್ಷೆಗಳ ವಿವರ

| | |
|---|---|
| 1 | ಎಸ್.ಎಸ್.ಎಲ್.ಸಿ |
| 2 | ಡಿಪ್ಲೊಮಾ ಇನ್ ಎಜುಕೇಷನ್(ಡಿ.ಎಡ್)/ ಟೆಕ್ |
| 3 | ಕಾಮರ್ಸ್ |
| 4 | ಸಂಗೀತ ಮತ್ತು ನೃತ್ಯ |
| 5 | ಕನ್ನಡ ಪಂಡಿತ |
| 6 | ಉರ್ದು ಮುನ್ಷಿ |
| 7 | ಸಂಸ್ಕೃತ |
| 8 | ಅರೇಬಿಕ್ |
| 9 | ಡ್ರಾಯಿಂಗ್ ಗ್ರೇಡ್ |
| 10 | ಫೈಯರ್ ಆರ್ಟ್ |
| 11 | ಹಿಂದಿ ಶಿಕ್ಷಕ್ |
| 12 | ಸಿ.ಪಿ.ಎಡ್ |
| 13 | ಚಲನಚಿತ್ರ/ಹಿನ್ನೆಲೆ ಗಾಯನ |
| 14 | ರಂಗ ತರಬೇತಿ ಶಿಕ್ಷಣ |
| 15 | ಕರ್ನಾಟಕ ಮುಕ್ತ ಶಾಲಾ ಪರೀಕ್ಷೆ |

2008–09ನೇ ಸಾಲಿನಲ್ಲಿ ಎಲ್ಲಾ ಪರೀಕ್ಷಗಳನ್ನೂ ಸಹ ಯೋಜಿಸಿದ ರೀತಿಯಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು. ಮಾರ್ಚ್ 2004 ರಲ್ಲಿ ಪ್ರಾರಂಭಿಸಲಾದ ಕ್ಲಸ್ಟರ್ ಪದ್ಧತಿಯನ್ನು ಈ ಸಾಲಿನಲ್ಲಿಯೂ ಮುಂದುವರೆಸಲಾಯಿತು. ಇದು ನಗರ ಶಾಲೆಗಳ ಹಾಗೂ ಗ್ರಾಮೀಣ ಉಪನಗರಗಳ ವಿದ್ಯಾರ್ಥಿಗಳು ಒಂದೇ ಕ್ಲಸ್ಟರ್‌ನಲ್ಲಿ ಉಳಿಯದೇ ಇರುವಂತಾಗಲು ಕಾರಣವಾಯಿತು ಮತ್ತು ಆ ವಿದ್ಯಾರ್ಥಿಗಳು ಹತ್ತಿರದ ಬೇರೆಬೇರೆ ಕೇಂದ್ರಗಳಲ್ಲಿ ಬರೆಯುವಂತಾಯಿತು. 2008 ರ ಜೂನ್ ತಿಂಗಳಿನಲ್ಲಿ ಪೂರಕ ಪರೀಕ್ಷೆಗಳನ್ನು ಸಾಮಾನ್ಯ ಪರೀಕ್ಷಾ ಕೇಂದ್ರಗಳಲ್ಲಿಯೇ ನಡೆಸಲಾಯಿತು. 2008–09ನೇ ಸಾಲಿಗೆ ಮಾರ್ಚ ಮಾಹೆಯಲ್ಲಿ 2645 ಹಾಗೂ ಜೂನ್ ಮಾಹೆಯಲ್ಲಿ 785 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯನ್ನು ನಡೆಸಲಾಯಿತು. ಪ್ರತಿ ಕೇಂದ್ರಕ್ಕೆ ಕನಿಷ್ಟ 250, ಗರಿಷ್ಟ 500 ಅಭ್ಯರ್ಥಿಗಳು ಮಾತ್ರ ಪರೀಕ್ಷೆಯನ್ನು ಬರೆಯುವಂತೆ ಮಿತಿಯನ್ನು ನಿಗದಿಗೊಳಿಸಲಾಗಿದೆ.

ಉನ್ನತ ತಜ್ಞರು ಹಾಗೂ ಪ್ರಶ್ನೆ ಪತ್ರಿಕೆಯ ತಯಾರಕರ ಕಾರ್ಯಾಗಾರವನ್ನು ಏರ್ಪಡಿಸಿ, ಪ್ರಶ್ನೆಗಳ ಹಾಗೂ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಲಾಗಿದೆ.

2007–08 ರಲ್ಲಿ ಶಿಕ್ಷಕರುಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ, ಗಣಕೀಕರಿಸಿ ಆಯ್ಕೆ ಮಾಡಲಾಯಿತು. ಮಾರ್ಚ್ 2008 ರಲ್ಲಿ ಜಿಲ್ಲಾಮಟ್ಟದ 197 ಮೌಲ್ಯಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅನುಕೂಲತೆ ಇರದ ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರಸ್ಥಾನಗಳಲ್ಲಿ ಮೌಲ್ಯ ಮಾಪನ ಕೇಂದ್ರಗಳನ್ನು ತೆರೆಯಲಾಗಿದೆ. ಜೂನ್–2008ರ ಎಸ್.ಎಸ್.ಎಲ್.ಸಿ. ಪೂರಕ ಪರೀಕ್ಷೆಗಾಗಿ ವಿಭಾಗೀಯ ಮಟ್ಟದಲ್ಲಿ ಆಯಾ ವಿಭಾಗದ ಪ್ರಮುಖ ಆರು ಜಿಲ್ಲೆಗಳಲ್ಲಿ ಮೌಲ್ಯಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಮೌಲ್ಯಮಾಪನ ಕೇಂದ್ರದಲ್ಲಿ ಒಬ್ಬ ಉಪ ಮುಖ್ಯ ಪರೀಕ್ಷಕರು ಹಾಗೂ ಮೂರು ಜನ ಮೌಲ್ಯಮಾಪಕರನ್ನು ಒಂದು ತಂಡವಾಗಿಯೂ, ಜಂಟಿ ಮುಖ್ಯ ಪರೀಕ್ಷಕರನ್ನು ತಂಡದ ನಾಯಕರನ್ನಾಗಿಯೂ ಮಾಡಲಾಗಿದೆ. ನಿಗದಿತ ಶುಲ್ಕವನ್ನು ಪಡೆದು ಎಲ್ಲಾ ವಿಷಯಗಳಲ್ಲಿ ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಗಳನ್ನು ಒದಗಿಸಲಾಗಿದೆ. ಎಲ್ಲಾ ವಿಷಯಗಳ ಮರು ಎಣಿಕೆ ಮತ್ತು ಎಲ್ಲಾ ವಿಷಯಗಳ ಮರು ಮೌಲ್ಯಮಾಪನ ಕಾರ್ಯಗಳನ್ನು ನಿಗದಿತ ಅವಧಿಯೊಳಗೆ ಮುಗಿಸಲಾಯಿತು. ಬೇಜವಾಬ್ದಾರಿಯಿಂದ ಮೌಲ್ಯಮಾಪನ ಮಾಡಿದ ಶಿಕ್ಷಕರನ್ನು ಶಿಕ್ಷಿಸಲಾಗಿದೆ.

ಹಿಂದಿನ ಸಾಲಿನಂತೆ 2008–09ನೇ ಸಾಲಿನಲ್ಲಿಯೂ ಸಹ ಈ ಕೆಳಕಂಡ ಅತಿ ಮುಖ್ಯ ಬದಲಾವಣೆಗಳನ್ನು ಮುಂದುವರೆಸಲಾಗಿದೆ.

1. ಅಭ್ಯರ್ಥಿ: ಶಾಲಾ ಮುಖ್ಯಸ್ಥರುಗಳಿಂದ ಅರ್ಜಿಗಳನ್ನು ತರಿಸುವ ಕ್ರಮದಲ್ಲಿ ಬದಲಾವಣೆಗಳು.
2. ಪ್ರವೇಶ ಪತ್ರ : ನಾಮಿನಲ್ ರೋಲ್ : ಅಂಕಪಟ್ಟಿಗಳಲ್ಲಿ ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿಯನ್ನು ಮುದ್ರಿಸುವುದು.
3. ಪರೀಕ್ಷಾ ಕೇಂದ್ರಗಳನ್ನು ಹೆಚ್ಚು ವ್ಯವಸ್ಥಿತಗೊಳಿಸುವುದು.
4. ಪರೀಕ್ಷಾ ಕೇಂದ್ರಗಳಲ್ಲಿ ಕೊಠಡಿ ಮೇಲ್ವಿಚಾರಕರ ನೇಮಕದಲ್ಲಿ ಬದಲಾವಣೆಗಳು.
5. ಸೂಕ್ಷ್ಮ ಪರೀಕ್ಷಾ ಕೇಂದ್ರಗಳಿಗಾಗಿ ವಿಶೇಷ ದಳಗಳ ರಚನೆ.
6. ಪ್ರಶ್ನೆ ಪತ್ರಿಕೆ ತಯಾರಿಕೆಯಲ್ಲಿ ಬದಲಾವಣೆ.
7. ನೂತನ ಪರೀಕ್ಷಾ ವಿಧಾನದ ಎ,ಬಿ,ಸಿ,ಡಿ ಸರಣಿ ಅಳವಡಿಕೆ.
8. ಪ್ರಶ್ನಪತ್ರಿಕೆಗಳ ಸಾಗಾಣಿಕೆಯಲ್ಲಿ ಬದಲಾವಣೆಗಳು
9 ಮೌಲ್ಯಮಾಪನ ಕೇಂದ್ರಗಳಿಗೆ ಉತ್ತರ ಪತ್ರಿಕೆಗಳ ಸಾಗಾಣಿಕೆಯಲ್ಲಿ ಬದಲಾವಣೆ
10. ಮೌಲ್ಯಮಾಪನ ಕೇಂದ್ರಗಳ ರಚನೆಯಲ್ಲಿ ಬದಲಾವಣೆಗಳು.
11. ಮೌಲ್ಯಮಾಪನದಲ್ಲಿ ಬದಲಾವಣೆಗಳು: ಪ್ರತಿ ಉತ್ತರ ಪತ್ರಿಕೆಯನ್ನು ಆರು ಜನ ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸುವುದು.
12. ಮೌಲ್ಯಮಾಪನ ಕಾರ್ಯವನ್ನು ವಿಕೇಂದ್ರೀಕರಿಸಿ ಜಿಲ್ಲಾ ಮಟ್ಟದಲ್ಲಿ ನಡೆಸುವುದು.
13. ಮಂಡಳಿಯ ವೆಬ್ ಸೈಟ್ ಮೂಲಕ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವುದು.

ಸರ್ಕಾರಿ ಆದೇಶ ಸಂಖ್ಯೆ: ಇಡಿ 51 ವಿ.ಭಾ.ಕಛೇರಿ 2000–01:33, ದಿನಾಂಕ: 28.02.2000ರಲ್ಲಿ ವಿಭಾಗೀಯ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಷ್ಟಿಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕೆಲಸಗಳನ್ನು ವಿಕೇಂದ್ರೀಕರಿಸಿ ಮಂಡಳಿಯ ಕೆಲಸಗಳನ್ನು ವಿಭಾಗೀಯ ಮಟ್ಟದಲ್ಲಿ ನಡೆಸಲು ಆದೇಶಿಸಿದೆ. ನಾಲ್ಕು ವಿಭಾಗೀಯ ಕಚೇರಿಗಳಿಗೆ ಈ ಕೆಳಕಂಡ ಕಾರ್ಯಗಳನ್ನು ಹಂಚಿಕೆ ಮಾಡಲಾಗಿದೆ.

- ದ್ವಿತೀಯ ಅಂಕಪಟ್ಟಿ, ತೃತೀಯ ಮತ್ತು ಅದಕ್ಕೂ ಹೆಚ್ಚು ಅಂಕಪಟ್ಟಿಗಳನ್ನು ನೀಡುವುದು.

- ವಿದ್ಯಾರ್ಥಿಯ ಹೆಸರು, ತಂದೆ ಹೆಸರು ಮತ್ತು ಜನ್ಮ ದಿನಾಂಕ ತಿದ್ದುಪಡಿ ಮಾಡುವುದು.
- ವಲಸೆ ಪ್ರಮಾಣ ಪತ್ರ ನೀಡುವುದು.
- ಪರೀಕ್ಷಾ ಕಾರ್ಯದಲ್ಲಿ ನಡೆದಿದ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸುವುದು.

2008–09ನೇ ಸಾಲಿನಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ ಮೌಲ್ಯಮಾಪನ ಘಟಕದ ಸಹಯೋಗದೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಅತಿ ಕಡಿಮೆ ಪರೀಕ್ಷಾ ಫಲಿತಾಂಶ ಪಡೆದ ಶಾಲೆಗಳ ಶಿಕ್ಷಕರಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ, ಬೋಧನ ಸಾಮಗ್ರಿ, ಸಾಹಿತ್ಯ ಪೂರೈಕೆ, ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಹಾಗೂ ಮೌಲ್ಯಮಾಪನದ ಬಗ್ಗೆ ಶಿಕ್ಷಕರಿಗೆ ತರಬೇತಿ ನೀಡುವುದು, ಪ್ರಶ್ನೆ ಪತ್ರಿಕೆ ಬ್ಯಾಂಕುಗಳನ್ನು ತಯಾರಿಸುವುದು, ಮುಂತಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

## 2008ನೇ ಸಾಲಿನ ಮಾರ್ಚ್ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದ ಬಗ್ಗೆ ಸಂಕ್ಷಿಪ್ತ ವರದಿ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 2008ನೇ ಸಾಲಿನ ಮಾರ್ಚ್ ತಿಂಗಳಲ್ಲಿ ದಿನಾಂಕ: 31.03.2008 ರಿಂದ 09.04.2008ರವರೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಒಟ್ಟು 2645 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಿತು. ಈ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿದೆ.

| ಕ್ರ | ವಿವರ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | ಮೊದಲ ಬಾರಿಗೆ ಪರೀಕ್ಷೆ ತೆಗೆದುಕೊಂಡವರು | 380534 | 352499 | 733033 |
| 2 | ಖಾಸಗಿಯಾಗಿ ಪರೀಕ್ಷೆ ತೆಗೆದುಕೊಂಡವರು | 16842 | 5466 | 22308 |
| 3 | ಪುನರಾವರ್ತಿತ ಅಭ್ಯರ್ಥಿಗಳು | 56231 | 27434 | 83665 |

**ಲಿಂಗವಾರು ಸಾಧನೆ**

| ವಿಷಯ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಶೇಕಡಾವಾರು |
|---|---|---|---|
| ಬಾಲಕರು | 453607 | 290953 | 64.14 |
| ಬಾಲಕಿಯರು | 385399 | 265921 | 69.00 |
| **ಒಟ್ಟು** | **839006** | **556874** | **66.37** |
| ಪರಿಶಿಷ್ಟ ಜಾತಿ | 125673 | 71615 | 56.99 |
| **ಜಾತಿವಾರು ಅಂಕಿಅಂಶ** | | | |
| ಪರಿಶಿಷ್ಟ ವರ್ಗ | 44538 | 26968 | 60.55 |
| ಸಾಮಾನ್ಯ | 553429 | 394029 | 71.20 |
| ಆರ್ಥಿಕವಾಗಿ ಹಿಂದುಳಿದವರು | 31701 | 20701 | 65.43 |
| **ಒಟ್ಟು** | **755341** | **513355** | **74.88** |
| **ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ** | | | |
| ಗ್ರಾಮಾಂತರ | 432262 | 298555 | 69.07 |

| | | | |
|---|---|---|---|
| ಪಟ್ಟಣ | 323079 | 214800 | 66.49 |
| **ಒಟ್ಟು** | **755341** | **513355** | **67.96** |
| **ಸರ್ಕಾರಿ ಮತ್ತು ಸರ್ಕಾರೇತರ ಶಾಲೆಗಳ ಅಂಕಿಅಂಶ** | | | |
| ಸರ್ಕಾರಿ | 295670 | 183353 | 62.01 |
| ಖಾಸಗಿ | 459671 | 330002 | 71.79 |
| **ಒಟ್ಟು** | **755341** | **513355** | **67.96** |

ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ದಿನಾಂಕ: 09.04.2008 ರಿಂದ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲಾದ ಒಟ್ಟು 197 ಕೇಂದ್ರಗಳಲ್ಲಿ ನಡೆಸಲಾಯಿತು. ಈ ಕಾರ್ಯಕ್ಕೆ ಒಟ್ಟು 36,920 ಮೌಲ್ಯಮಾಪಕರು ಹಾಜರಾಗಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿರುತ್ತಾರೆ.

ಈ ಪರೀಕ್ಷಾ ಫಲಿತಾಂಶವನ್ನು ದಿನಾಂಕ: 04.05.2008 ರಂದು ರಾಜ್ಯದ ಮಾನ್ಯತೆ ಪಡೆದ ಹಾಗೂ ಸರ್ಕಾರಿ ಪ್ರೌಢ ಶಾಲೆ, ಕಿರಿಯ ಕಾಲೇಜುಗಳಲ್ಲಿ ಹಾಗೂ ಮಂಡಳಿ ಕಛೇರಿ ಆವರಣದಲ್ಲಿ ಪ್ರಕಟಿಸಲಾಯಿತು. ಪರೀಕ್ಷೆಗೆ ಕುಳಿತಿದ್ದ ಅಭ್ಯರ್ಥಿಗಳ ಅಂಕಪಟ್ಟಿ, ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಶಾಲಾ, ಕಾಲೇಜುಗಳಿಗೆ ಮೇ 31 ರೊಳಗೆ ಕಳುಹಿಸಲಾಗಿತ್ತು.

ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 122 ಅವ್ಯವಹಾರದ ಪ್ರಕರಣಗಳು ವರದಿಯಾಗಿದ್ದು, ಅವರ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಯಿತು. ಕಳೆದ ವರ್ಷ ಇಂತಹ 304 ಪ್ರಕರಣಗಳಿದ್ದವು.

ಅನೇಕ ಸಂಸ್ಥೆಗಳ ತಾಂತ್ರಿಕ ಸಹಯೋಗದೊಂದಿಗೆ ವೆಬ್ ಸೈಟ್ ಮೂಲಕ ಫಲಿತಾಂಶವನ್ನು ಪ್ರಕಟಿಸಲಾಗಿತ್ತು ಹಾಗೂ ಬಿ.ಎಸ್.ಎನ್.ಎಲ್. ಮತ್ತು ಖಾಸಗಿ ಮೊಬೈಲ್ ದೂರವಾಣಿಗಳಲ್ಲೂ ಕರೆ ಮಾಡಿ ತಮ್ಮ ನೋಂದಣಿ ಸಂಖ್ಯೆಯನ್ನು ತಿಳಿಸಿ ಫಲಿತಾಂಶವನ್ನು ಪಡೆಯುವ ವ್ಯವಸ್ಥೆ ಸಹ ಮಾಡಲಾಗಿತ್ತು.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## (ಇತರೆ ಪರೀಕ್ಷೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು 1966ನೇ ಇಸವಿಯಲ್ಲಿ ಜಾರಿಗೆ ಬಂದಿದ್ದು, ಪ್ರೌಢ ಹಂತದ ವಿವಿಧ ಪರೀಕ್ಷೆಗಳನ್ನು ನಡೆಸುವುದು ಇದರ ಮುಖ್ಯ ಉದ್ದೇಶವಾಗಿದೆ. ಎಸ್.ಎಸ್.ಎಲ್.ಸಿ, ಟಿ.ಸಿ.ಹೆಚ್, ಸಂಗೀತ, ವಾಣಿಜ್ಯ, ಡ್ರಾಯಿಂಗ್ (ಚಿತ್ರಕಲೆ) ಸಂಸ್ಕೃತ, ಅರೇಬಿಕ್ ಮುಂತಾದ ಹಲವಾರು ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದ್ದು, ಒಂದೇ ಕಛೇರಿಯ ಮೂಲಕ ಈ ಎಲ್ಲ ಪರೀಕ್ಷೆಗಳನ್ನು ನಡೆಸಲು ಕಷ್ಟಕರವಾಗಿದ್ದು, ಪರೀಕ್ಷೆಗಳನ್ನು ಕ್ರಮ ಬದ್ಧವಾಗಿ ನಡೆಸುವ ಜವಾಬ್ದಾರಿಯೊಂದಿಗೆ ಮತ್ತೊಬ್ಬ ನಿರ್ದೇಶಕರ ಅಗತ್ಯತೆಯಿಂದಾಗಿ ಮಂಡಳಿಯನ್ನು ಇಬ್ಭಾಗವಾಗಿ ವಿಭಜಿಸಲಾಯಿತು. ಒಂದು ವಿಭಾಗವು ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪ್ರತ್ಯೇಕವಾಗಿ ನಡೆಸಲು ಮತ್ತು ಇನ್ನೊಂದು ವಿಭಾಗವು ಇತರೆ ಪರೀಕ್ಷೆಗಳನ್ನು ಅಂದರೆ, ಡಿಎಡ್, ಡಿ.ಪಿಎಡ್, ಸಂಸ್ಕೃತ, ವಾಣಿಜ್ಯ, ಚಿತ್ರಕಲೆ ಇತ್ಯಾದಿ ವಿಷಯಗಳ ಬಗ್ಗೆ ಪರೀಕ್ಷೆಯನ್ನು ನಡೆಸುತ್ತದೆ. ಇತರೆ ಪರೀಕ್ಷೆಗಳ ನಿರ್ದೇಶನಾಲಯವು. ಅ.ಸಂ. ಇಡಿ.78.ಡಿಪಿಐ.97 ಬೆಂಗಳೂರು ದಿನಾಂಕ: 18.12.1997ರ ಅನ್ವಯ ಅಸ್ತಿತ್ವಕ್ಕೆ ಬಂದಿತು.

ಅಂದಿನಿಂದ ಇಂದಿನವರೆವಿಗೂ ಇತರೆ ಪರೀಕ್ಷೆಗಳ ವಿಭಾಗದಿಂದ ಶಿಕ್ಷಕರ ಶಿಕ್ಷಣಕ್ಕೆ ಸಂಬಂಧಿಸಿದ ಪರೀಕ್ಷೆಗಳಾದ ಡಿ.ಎಡ್(ಡಿಪ್ಲೊಮಾ ಇನ ಎಜುಕೇಷನ್)(ಹಿಂದೆ ಟಿ.ಸಿ.ಹೆಚ್. ಎಂದು ಕರೆಯಲ್ಪಡುತ್ತಿತ್ತು), ಡಿ.ಪಿ.ಎಡ್ ಮತ್ತು ಹಿಂದಿ ಶಿಕ್ಷಕ್ ಪರೀಕ್ಷೆಗಳನ್ನು ಹಾಗೂ ಭಾರತೀಯ ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸುವಲ್ಲಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವಂತಹ ಪರೀಕ್ಷೆಗಳಾದ ಸಂಗೀತ, ನೃತ್ಯ, ತಾಳವಾದ್ಯ ಹಾಗೂ ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವ ಪರೀಕ್ಷೆಗಳಾದ ಚಿತ್ರಕಲೆ, ರಂಗ ಶಿಕ್ಷಣ ಮುಂತಾದ ಪರೀಕ್ಷೆಗಳನ್ನು ಹಾಗೂ ಭಾರತೀಯ ಪ್ರಾಚೀನ ಭಾಷೆಯಾದ ಸಂಸ್ಕೃತ ಹಾಗೂ ವೇದಗಳ ಪರೀಕ್ಷೆಗಳೊಂದಿಗೆ ಅರೇಬಿಕ್ ಪರೀಕ್ಷೆಗಳು ಹಾಗೂ ಬೆರಳಚ್ಚು ಮತ್ತು ಶೀಘ್ರಲಿಪಿ ಕಲಿಸುವ ವಾಣಿಜ್ಯ ಪರೀಕ್ಷೆಗಳನ್ನು ನಡೆಸುತ್ತಾ ಬಂದಿದೆ. ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ, ಚಲನಚಿತ್ರ ಪರೀಕ್ಷೆಗಳು, ಚೊಕ್ಕವಾಗಿ ಹೇಳುವುದಾದರೆ ಕ.ಪ್ರೌ.ಶಿ.ಪ (ಇತರೆ ಪರೀಕ್ಷೆಗಳು) .ಮಂಡಳಿಯು ಸುಮಾರು 16 ಪರೀಕ್ಷೆಗಳನ್ನು ನಡೆಸುತ್ತಿದೆ. ಈ ಎಲ್ಲ ಪರೀಕ್ಷೆಗಳು ಹಾಗೂ ಅವುಗಳ ಬಗೆಗಿನ ಮಾಹಿತಿಯನ್ನು ನೀಡಲಾಗಿದೆ.

### ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಇತರೆ ಪರೀಕ್ಷೆಗಳ ವಿಭಾಗದಲ್ಲಿ ನಡೆಸುತ್ತಿರುವ ಪರೀಕ್ಷೆಗಳ ವಿವರ

| ಕ್ರ ಸಂ | ಪರೀಕ್ಷೆಗಳ ವಿವರ |
|---|---|
| 1 | ಡಿ.ಎಡ್./ಟಿ.ಸಿ.ಹೆಚ್./ಮಲ್ಟಿಕ್ಯಾಟಗರಿ ಪರೀಕ್ಷೆ |
| 2 | ವಾಣಿಜ್ಯ ಪರೀಕ್ಷೆ |
| 3 | ನೃತ್ಯ / ಸಂಗೀತ / ತಾಳವಾದ್ಯ ಪರೀಕ್ಷೆ |
| 4 | ಕನ್ನಡ ಪಂಡಿತ್ – 2 ವರ್ಷಗಳಿಗೊಮ್ಮೆ |
| 5 | ಸಂಸ್ಕೃತ ಪರೀಕ್ಷೆ |
| 6 | ಅರೇಬಿಕ್ / ಉಸ್ತಾನಿಯಾ / ಫೌಕಾನಿಯಾ / ಅಬ್ಜಲ್ ಉಲ್ ಉಲ್ಮಾ |
| 7 | ಡ್ರಾಯಿಂಗ್ ಗ್ರೇಡ್ ಪರೀಕ್ಷೆ |
| 8 | ಹಿಂದಿ ಶಿಕ್ಷಕ ಪರೀಕ್ಷೆ |
| 9 | ದೈಹಿಕ ಶಿಕ್ಷಣ ಪರೀಕ್ಷೆ |
| 10 | ಚಲನಚಿತ್ರ ನಟನೆ / ಹಿನ್ನೆಲೆ ಗಾಯನ ಪರೀಕ್ಷೆ |
| 11 | ರಂಗ ಶಿಕ್ಷಣ |

**ಡಿ.ಎಡ್. ಪರೀಕ್ಷೆ :–**

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಬಯಸುವ ಅಭ್ಯರ್ಥಿಗಳಿಗಾಗಿ ಈ ಪರೀಕ್ಷೆಯನ್ನು ರಾಜ್ಯಾದ್ಯಂತ ಒಟ್ಟು 147 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ ಪ್ರಾಂಶುಪಾಲರಿಗೆ ಸಹಾಯಕರಾಗಿ ಜಿಲ್ಲಾ ತರಬೇತಿ ಸಂಸ್ಥೆಗಳಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಸೂಕ್ಷ್ಮ ಪರೀಕ್ಷಾ ಕೇಂದ್ರಗಳ ಮೇಲೆ ನಿಗಾ ಇಡಲು ಸ್ಥಾನಿಕ ಮತ್ತು ಸಂಚಾರಿ ದಳಗಳನ್ನು ರಚಿಸಲಾಗಿದೆ.

| ಪರೀಕ್ಷೆ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|---|
| ಡಿ.ಎಡ್. ಪ್ರಥಮ | ನವೆಂಬರ್ –08 | 46184 | 34965 | 75.71 |
| ದ್ವಿತೀಯ | | 41739 | 36256 | 86.86 |

**ಪಿ.ಪಿ.ಟಿ. ಪರೀಕ್ಷೆಗಳು:–**

ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಲಿಚ್ಚಿಸುವ ಅಭ್ಯರ್ಥಿಗಳಿಗೆ ಈ ಪರೀಕ್ಷೆಯನ್ನು ನಡೆಸಲಾಗಿದೆ.

| ಪರೀಕ್ಷೆ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|---|
| ಪಿ.ಪಿ.ಟಿ. | ನವೆಂಬರ್–2008 | 290 | 267 | 92.07 |

**ಹಿಂದಿ ಶಿಕ್ಷಕ್ ಪರೀಕ್ಷೆಗಳು:–**

ಹಿಂದಿ ಶಿಕ್ಷಕ್ ತರಬೇತಿಯು ಒಂದು ವರ್ಷದ ನಿಕಟ ತರಬೇತಿಯಾಗಿದ್ದು, ಈ ಒಂದು ವರ್ಷದ ತರಬೇತಿಗಾಗಿ ಪರೀಕ್ಷೆಯನ್ನು ವರ್ಷಾಂತ್ಯದಲ್ಲಿ ನಡೆಸಿ ಅಂಕಪಟ್ಟಿಯನ್ನು ನೀಡಲಾಗಿದೆ.

| ಪರೀಕ್ಷೆ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|---|
| ಹಿಂದಿ ಶಿಕ್ಷಕ್ | ಮೇ– 2006 | 644 | 558 | 86.06 |

**ಡಿ.ಪಿ.ಇಡಿ. ಪರೀಕ್ಷೆಗಳು:–**

ಆರಿಟಿರಟಚಿ ುಟಿ ಕುಥುಭಿಚಿಟ ಇಜಣಛಿಚಿಣುರಿಟಿ (ಆಕಇಆ) ಪರೀಕ್ಷೆಗಳನ್ನು ದೈಹಿಕ ಶಿಕ್ಷಣದಲ್ಲಿ ಡಿಪ್ಲೋಮ ಎಂದು ಕರೆಯಲಾಗುತ್ತಿದ್ದು, ಈ ಪರೀಕ್ಷೆಗಳು 2 ವರ್ಷದ ಅವಧಿಯದ್ದಾಗಿರುತ್ತದೆ. ಅಭ್ಯರ್ಥಿಗಳಿಗೆ ಪ್ರಥಮ ಹಾಗೂ ದ್ವಿತೀಯ ವರ್ಷದ ತರಬೇತಿಗಳ ನಂತರ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

| ಪರೀಕ್ಷೆ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|---|
| ಸಿ.ಪಿ.ಇಡಿ. | ನವೆಂಬರ್– 2008 | 08 | 06 | 75 |
| ಡಿ.ಪಿ.ಇಡಿ. | | | | |

| | | | | |
|---|---|---|---|---|
| ಪ್ರಥಮ ವರ್ಷ | ನವೆಂಬರ್– 2008 | 535 | 415 | 77.57 |
| ದ್ವಿತೀಯ ವರ್ಷ | | 432 | 397 | 91.90 |

**ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳು:–**

ಭಾರತೀಯ ಸಂಸ್ಕೃತಿಯಲ್ಲಿ ಸಂಗೀತ, ನೃತ್ಯ ಹಾಗೂ ಇತರೇ ಲಲಿತ ಕಲೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಈಗ ಮಂಡಳಿಯಲ್ಲಿ ಜೂನಿಯರ್‌ನಿಂದ ವಿದ್ವತ್‌ವರೆಗೆ ಮಕ್ಕಳ/ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಹಾಗೂ ಕಲಾ ಪ್ರೌಢಿಮೆಗಳನ್ನು ಅಳೆಯಲು ಪರೀಕ್ಷೆಗಳನ್ನು ನಡೆಸಲಾಗುತ್ತದೆ.

**ಮೇ–2008ರಲ್ಲಿ 10160 ಅಭ್ಯರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದು, ವಿವರ ಈ ಕೆಳಕಂಡಂತೆ ಇದೆ.**

| ಕ್ರ. ಸಂ. | ಪರೀಕ್ಷೆ ಹೆಸರು | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣ ರಾದವರು | ಶೇಕಡ |
|---|---|---|---|---|
| 1. | ಕರ್ನಾಟಕ ಸಂಗೀತ ಹಾಡುಗಾರಿಕೆ ಕಿರಿಯ ದರ್ಜೆ | 3836 | 3169 | 82.61 |
| 2. | ಕರ್ನಾಟಕ ಸಂಗೀತ ವಾದ್ಯಗಳು ಕಿರಿಯ ದರ್ಜೆ | 262 | 173 | 66.03 |
| 3. | ಕರ್ನಾಟಕ ಸಂಗೀತ ಹಾಡುಗಾರಿಕೆ ಹಿರಿಯ ದರ್ಜೆ | 389 | 238 | 61.18 |
| 4. | ಕರ್ನಾಟಕ ಸಂಗೀತ ವಾದ್ಯಗಳು ಹಿರಿಯ ದರ್ಜೆ | 40 | 22 | 55.00 |
| 5. | ಕರ್ನಾಟಕ ತಾಳವಾದ್ಯ ಕಿರಿಯ ದರ್ಜೆ | 120 | 92 | 76.67 |
| 6. | ಕರ್ನಾಟಕ ತಾಳವಾದ್ಯ ಹಿರಿಯ ದರ್ಜೆ | 21 | 6 | 28.57 |
| 7. | ಹಿಂದೂಸ್ತಾನಿ ಸಂಗೀತ ಹಾಡುಗಾರಿಕೆ ಕಿರಿಯ ದರ್ಜೆ | 1046 | 802 | 76.67 |
| 8. | ಹಿಂದೂಸ್ತಾನಿ ಸಂಗೀತ ವಾದ್ಯಗಳು ಕಿರಿಯ ದರ್ಜೆ | 34 | 19 | 55.88 |
| 9. | ಹಿಂದೂಸ್ತಾನಿ ಸಂಗೀತ ಹಾಡುಗಾರಿಕೆ ಹಿರಿಯ ದರ್ಜೆ | 655 | 458 | 69.92 |
| 10. | ಹಿಂದೂಸ್ತಾನಿ ಸಂಗೀತ ವಾದ್ಯಗಳು ಹಿರಿಯ ದರ್ಜೆ | 5 | 2 | 40.00 |
| 11. | ಹಿಂದೂಸ್ತಾನ ತಾಳವಾದ್ಯ ಕಿರಿಯ ದರ್ಜೆ | 239 | 202 | 84.52 |
| 12. | ಹಿಂದೂಸ್ತಾನಿ ತಾಳವಾದ್ಯ ಹಿರಿಯ ದರ್ಜೆ | 58 | 43 | 74.14 |
| 13. | ಭರತನಾಟ್ಯ ಕಿರಿಯ ದರ್ಜೆ | 2634 | 2218 | 84.21 |
| 14. | ಭರತನಾಟ್ಯ ಹಿರಿಯ ದರ್ಜೆ | 520 | 400 | 76.92 |
| 15. | ಕಥಕ್ ಕಿರಿಯ ದರ್ಜೆ | 7 | 7 | 100 |
| 16. | ಕಥಕ್ ಹಿರಿಯ ದರ್ಜೆ | 2 | 2 | 100 |
| 17. | ಕೂಚೂಪುಡಿ ಕಿರಿಯ ದರ್ಜೆ | 23 | 18 | 78.26 |
| 18. | ಕೂಚೂಪುಡಿ ಹಿರಿಯ ದರ್ಜೆ | 3 | 1 | 33.33 |
| 19. | ಕರ್ನಾಟಕ ವಿದ್ವತ್ ಸಂಗೀತ ಹಾಡುಗಾರಿಕೆ (ಹಳೇಪಠ್ಯ) | 6 | 5 | 83.33 |
| 20 | ಕರ್ನಾಟಕ ವಿದ್ವತ್ ಸಂಗೀತ ವಾದ್ಯಗಳು (ಹಳೇಪಠ್ಯ) | 15 | 12 | 80.00 |
| 21. | ಕರ್ನಾಟಕ ತಾಳವಾದ್ಯ ವಿದ್ವತ್ (ಹಳೇಪಠ್ಯ) | 3 | 1 | 33.33 |
| 22. | ಹಿಂದೂಸ್ಥಾನಿ ವಿದ್ವತ್ ಹಾಡುಗಾರಿಕೆ (ಹಳೇಪಠ್ಯ) | 2 | 2 | 100 |
| 23. | ಹಿಂದೂಸ್ಥಾನಿ ತಾಳವಾದ್ಯ ವಿದ್ವತ್ (ಹಳೇಪಠ್ಯ) | 3 | 1 | 33.33 |
| 24. | ಭರತನಾಟ್ಯ ವಿದ್ವತ್ (ಹಳೇಪಠ್ಯ) | 32 | 15 | 46.88 |
| 25. | ಕರ್ನಾಟಕ ವಿದ್ವತ್ ಪೂರ್ವ ಸಂಗೀತ ಹಾಡುಗಾರಿಕೆ(ಹೊಸ ಪಠ್ಯ) | 31 | 10 | 32.26 |
| 26. | ಕರ್ನಾಟಕ ವಿದ್ವತ್ ಪೂರ್ವ ಸಂಗೀತ ವಾದ್ಯಗಳು (ಹೊಸ | 4 | 1 | 25.00 |

| | | | | |
|---|---|---|---|---|
| | ಪತ್ಯ) | | | |
| 27. | ಕರ್ನಾಟಕ ತಾಳವಾದ್ಯ ವಿದ್ವತ್ ಪೂರ್ವ (ಹೊಸ ಪತ್ಯ) | 3 | 2 | 66.67 |
| 28. | ಹಿಂದೂಸ್ತಾನಿ ವಿದ್ವತ್ ಪೂರ್ವ ಹಾಡುಗಾರಿಕೆ (ಹೊಸ ಪತ್ಯ) | 48 | 26 | 54.17 |
| 29. | ಹಿಂದೂಸ್ತಾನಿ ವಿದ್ವತ್ ಪೂರ್ವ ಸಂಗೀತ ವಾದ್ಯಗಳು(ಹೊಸ ಪತ್ಯ) | 1 | 1 | 100 |
| 30. | ಹಿಂದೂಸ್ಥಾನಿ ತಾಳವಾದ್ಯ ವಿದ್ವತ್ ಪೂರ್ವ (ಹೊಸ ಪತ್ಯ) | 8 | 6 | 75.00 |
| 31. | ಭರತನಾಟ್ಯ ವಿದ್ವತ್ ಪೂರ್ವ (ಹೊಸ ಪತ್ಯ) | 113 | 61 | 53.58 |
| 32. | ಕರ್ನಾಟಕ ಸಂಗೀತ ಹಾಡುಗಾರಿಕೆ ವಿದ್ವತ್ ಅಂತಿಮ | – | – | – |
| 33. | ಕರ್ನಾಟಕ ಸಂಗೀತ ವಾದ್ಯಗಳು ವಿದ್ವತ್ ಅಂತಿಮ | – | – | – |
| 34. | ಹಿಂದೂಸ್ತಾನಿ ಸಂಗೀತ ಹಾಡುಗಾರಿಕೆ ವಿದ್ವತ್ ಅಂತಿಮ | – | – | – |
| 35. | ಭರತನಾಟ್ಯ ವಿದ್ವತ್ ಅಂತಿಮ | – | – | – |
| | ಒಟ್ಟು | 10160 | 8014 | 78.88 |

**ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳು:–**

ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳು ಪ್ರೌಢ ಶಾಲಾ ಅಂದರೆ 8ನೇ, 9ನೇ ಮತ್ತು 10ನೇ ತರಗತಿಯ ಅಭ್ಯರ್ಥಿಗಳಿಗೆ ನಡೆಸುವ ಪರೀಕ್ಷೆಯಾಗಿರುತ್ತದೆ. ಈ ಪರೀಕ್ಷೆಗಳು ಮಕ್ಕಳಲ್ಲಿ ಸೌಂದರ್ಯ ಪ್ರಜ್ಞೆ ಹಾಗೂ ಕ್ರಿಯಾಶೀಲತೆಯನ್ನು ವೃದ್ಧಿಸಲು ಸಹಾಯಕ ವಾಗಿದ್ದು, ಮುಂದೆ ಈ ಮಕ್ಕಳು ಚಿತ್ರಕಲೆಯಲ್ಲಿ ಉನ್ನತ ವ್ಯಾಸಂಗ ಮಾಡಲು ಸಹಕರಿ ಸುತ್ತವೆ. ಈ ಬಾರಿ ನವೆಂಬರ್ 2008ರಲ್ಲಿ ಒಟ್ಟು 23,482 ವಿದ್ಯಾರ್ಥಿಗಳು ಈ ಪರೀಕ್ಷೆ ಯನ್ನು ತೆಗೆದುಕೊಂಡಿದ್ದು, ಪರೀಕ್ಷೆಯ ಫಲಿತಾಂಶದ ಅಂಕಿ ಅಂಶಗಳನ್ನು ಕೆಳಗೆ ನೀಡಿದೆ.

| ಕ್ರ. ಸಂ | ಪರೀಕ್ಷೆ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣ ರಾದವರು | ಶೇಕಡ |
|---|---|---|---|---|---|
| 1. | ಡ್ರಾಯಿಂಗ್ ಗ್ರೇಡ್–ಹೈಯರ್ | ನವೆಂಬರ್–2008 | 10070 | 8944 | 88.82 |
| 2. | ಡ್ರಾಯಿಂಗ್ ಗ್ರೇಡ್–ಲೋಯರ್ | ನವೆಂಬರ್–2008 | 13412 | 11489 | 85.66 |

**ಸಂಸ್ಕೃತ ಮತ್ತು ವೇದ ಪರೀಕ್ಷೆಗಳು:–**

15070 ಜನ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯ ಅಧ್ಯಯನ ನಡೆಸಿ ಫೆಬ್ರವರಿ 2008ರಲ್ಲಿ ನಡೆದ ಪರೀಕ್ಷೆಗಳನ್ನು ತೆಗೆದುಕೊಂಡಿದ್ದು, ವಿದ್ವದುತ್ತಮದಲ್ಲಿ ಶೇ 79.84ರಷ್ಟು ಫಲಿತಾಂಶ ಬಂದಿದೆ. ಹಾಗೆಯೇ ವೇದ ಪರೀಕ್ಷೆಗಳಿಗೆ 767 ಜನ ಅಭ್ಯರ್ಥಿಗಳು ತೆಗೆದುಕೊಂಡು ಉತ್ತಮ ಫಲಿತಾಂಶ ಪಡೆದಿರುತ್ತಾರೆ.

| ಕ್ರ.ಸಂ. | ವಿಷಯ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣ ರಾದವರು | ಶೇಕಡ |
|---|---|---|---|---|
| 1. | ಪ್ರಥಮ | 10125 | 8807 | 86.98% |
| 2. | ಕಾವ್ಯ | 3913 | 3261 | 83.34% |
| 3. | ಸಾಹಿತ್ಯ | 578 | 409 | 70.76% |
| 4. | ವಿದ್ವನ್ಮಧ್ಯಮ | 325 | 175 | 53.84% |

| | | | | |
|---|---|---|---|---|
| 5. | ವಿದ್ವದುತ್ತಮ | 129 | 103 | 79.84% |

***ವೇದ ಪರೀಕ್ಷೆಗಳು:-***

| ಕ್ರ ಸಂ. | ವಿಷಯ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣ ರಾದವರು | ಶೇಕಡ |
|---|---|---|---|---|
| 1. | ಪ್ರಥಮ | 486 | 423 | 87% |
| 2. | ಪ್ರವೇಶ | 201 | 75 | 37.31% |
| 3. | ಮೂಲ | 80 | 65 | 81.25% |

**ಅರೇಬಿಕ್ ಪರೀಕ್ಷೆಗಳು:-**

ಅರೇಬಿಕ್ ಪರೀಕ್ಷೆಗಳನ್ನು ಸಹ ಮಂಡಳಿ ನಡೆಸುತ್ತಾ ಬಂದಿದ್ದು, ಉಸ್ಥಾನಿಯಾ, ಫೌಕಾನಿಯ ಪರೀಕ್ಷೆಗಳೊಟ್ಟಿಗೆ ಅಫ್‌ಜಲ್-ಉಲ್-ಉಲ್ಮಾ ಉತ್ತಮ / ಮಧ್ಯಮ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಫೆಬ್ರವರಿ 2008ರಲ್ಲಿ 3135 ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಫಲಿತಾಂಶದ ಅಂಕಿ ಅಂಶ ಈ ಕೆಳನಂತಿದೆ.

| ಕ್ರ.ಸಂ | ವಿಷಯ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|---|
| 1 | **ಉಸ್ತಾನಿಯ** | 1991 | 1820 | 91.40% |
| 2 | ಫೌಕಾನಿಯ | 937 | 864 | 92.21% |
| 3 | ಅಫ್ಜಲ್-ಉಲ್-ಉಲೂಂ ಮಧ್ಯಮ | 121 | 115 | 95% |
| 4 | ಅಫ್ಜಲ್-ಉಲ್-ಉಲೂಂ ಉತ್ತಮ | 86 | 76 | 88.37% |

**ವಾಣಿಜ್ಯ ಪರೀಕ್ಷೆಗಳು:-**

ಕನ್ನಡ, ಇಂಗ್ಲೀಷ್ ಬೆರಳಚ್ಚು ಹಾಗೂ ಶೀಘ್ರಲಿಪಿ ಪರೀಕ್ಷೆಗಳೊಂದಿಗೆ, ಕಛೇರಿ ಆಡಳಿತ, ಬುಕ್ ಕೀಪಿಂಗ್ ಹೀಗೆ ಒಟ್ಟು 18 ಪರೀಕ್ಷೆಗಳನ್ನು ವಾಣಿಜ್ಯ ಪರೀಕ್ಷೆಗಳ ಗುಂಪಿಗೆ ಸೇರಿಸಲಾಗುತ್ತದೆ. ಈ ಪರೀಕ್ಷೆಗಳನ್ನು ಮೇ-2008 ಮತ್ತು ನವೆಂಬರ್-2008ರಲ್ಲಿ ನಡೆಸಲಾಗಿದ್ದು, ಈ ಪರೀಕ್ಷೆಗಳಿಗೆ ಹಾಜರಾದ ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

| ಪರೀಕ್ಷೆಯ ಹೆಸರು | ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡಾವಾರು |
|---|---|---|---|---|
| **ವಾಣಿಜ್ಯ ಪರೀಕ್ಷೆಗಳು** | ಮೇ-2008 | 9644 | 4893 | 50.74 |
| | ನವೆಂಬರ್-08 | 7395 | 3423 | 46.29 |

**ಕರ್ನಾಟಕ ಮುಕ್ತ ಶಾಲಾ ಪರೀಕ್ಷೆ :-**

ಶಿಕ್ಷಣ ವಂಚಿತರಿಗೆ ಓದುವ ಅವಕಾಶ ಕಲ್ಪಿಸಿಕೊಟ್ಟು ಬೇರೆ ವಿದ್ಯಾರ್ಥಿಗಳಂತೆ ಮುಖ್ಯ ವಾಹಿನಿಯಲ್ಲಿ ಅವರನ್ನು ವಿಲೀನಗೊಳಿಸುವ ಉದ್ದೇಶದಿಂದ ಪ್ರಾರಂಭವಾದ ಪರೀಕ್ಷೆ ಕರ್ನಾಟಕ ಮುಕ್ತ ಶಾಲಾ ಪರೀಕ್ಷೆ. (ಕರ್ನಾಟಕ ಓಪನ್ ಸ್ಕೂಲ್). ಈ ಪರೀಕ್ಷೆಗಳು ಈಗ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಿಗೆ ತತ್ಸಮಾನವೆಂದು ಸರ್ಕಾರವು ಘೋಷಿಸಿದೆ. ಈ ಪರೀಕ್ಷೆಗಳ ಅಂಕಿ ಅಂಶಗಳು ಕೆಳಗಿನಂತಿದೆ.

| ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|

| | | | |
|---|---|---|---|
| ಮೇ-2008 | 4055 | 1973 | 48.66 |
| ನವೆಂಬರ್-2008 | 4088 | 2252 | 49.08 |

**ಚಲನಚಿತ್ರ ಪರೀಕ್ಷೆಗಳು:-**

ಈ ಪರೀಕ್ಷೆಗಳನ್ನು ಚಲನಚಿತ್ರ ವಿಭಾಗದಲ್ಲಿ ಪರಿಣಿತಿಯನ್ನು ಹೊಂದಲಿಚ್ಛಿಸುವ, ತೆಗೆದುಕೊಳ್ಳುವ ನೂರುಜನ ಅಭ್ಯರ್ಥಿಗಳಿಗೆ ಪ್ರತಿ ವರ್ಷ ಈ ಪರೀಕ್ಷೆಗಳನ್ನು ನಡೆಸಲಾಗುವುದು. ಸದರಿ ವರ್ಷದಲ್ಲಿ 144 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 94 ಜನ ಅಭ್ಯರ್ಥಿಗಳು ಉತ್ತೀರ್ಣರಾಗಿ 65.27% ರಷ್ಟು ಫಲಿತಾಂಶ ಬಂದಿದೆ.

| | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|
| ಚಲನಚಿತ್ರ | 144 | 94 | 65.27 |

**ರಂಗ ಶಿಕ್ಷಣ ಹಾಗೂ ನೀನಾಸಂ ಪರೀಕ್ಷೆಗಳು:-**

ರಂಗ ಸಜ್ಜಿಕೆ, ನಿರ್ದೇಶನ ಹಾಗೂ ನಟನೆಯನ್ನು ಒಳಗೊಂಡ ಈ ಪರೀಕ್ಷೆಯನ್ನು 17 ಅಭ್ಯರ್ಥಿಗಳು ತೆಗೆದುಕೊಂಡಿದ್ದು, ವಿವರಗಳನ್ನು ಈ ಕೆಳಗೆ ನೀಡಲಾಗಿದೆ..

| ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|
| ಜೂನ್ 2008 | 17 | 17 | 100 |

**ಯೋಗ ಶಿಕ್ಷಣ ಪರೀಕ್ಷೆಗಳು:-**

ಚಿತ್ರದುರ್ಗದ ಮಲ್ಲಾಡಿ ಹಳ್ಳಿಯಲ್ಲಿ ಈ ಪರೀಕ್ಷೆಗಳನ್ನು ನಡೆಸಲಾಗುವುದು. ಇದರಲ್ಲಿ ಯೋಗ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ವ್ಯಕ್ತಿತ್ವ ವಿಕಾಸನಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. 16 ಅಭ್ಯರ್ಥಿಗಳು ಪರೀಕ್ಷೆ ತೆಗೆದುಕೊಂಡು 16 ಜನ ಅಭ್ಯರ್ಥಿಗಳು ಉತ್ತೀರ್ಣರಾಗಿ 100% ರಷ್ಟು ಫಲಿತಾಂಶ ಬಂದಿದೆ.

| ಮಾಹೆ | ಒಟ್ಟು ಅಭ್ಯರ್ಥಿಗಳು | ಉತ್ತೀರ್ಣರಾದವರು | ಶೇಕಡ |
|---|---|---|---|
| ಜೂನ್ 2008 | 16 | 16 | 100 |

# <u>ಸರ್ವ ಶಿಕ್ಷಣ ಅಭಿಯಾನ</u>

ರಾಜ್ಯ ಯೋಜನಾ ಕಚೇರಿಯು ರಾಜ್ಯ ಯೋಜನಾ ನಿರ್ದೇಶಕರ ನೇತೃತ್ವದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ನಿರ್ವಹಿಸುತ್ತದೆ.

ಸರ್ವ ಶಿಕ್ಷಣ ಅಭಿಯಾನವು ಭಾರತ ಸರ್ಕಾರದ ಸಂಯೋಜಿತ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವು 10ನೇ ಪಂಚವಾರ್ಷಿಕ ಯೋಜನೆಯಲ್ಲಿ (ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇ. 75:25ರ ಅನುಪಾತದಲ್ಲಿ) ಪ್ರಾರಂಭಿಸಲಾಗಿದ್ದುದನ್ನು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಂದುವರೆಸಲಾಗಿದೆ. 2007–08 ಮತ್ತು 2008–09ನೇ ಸಾಲಿನ ಕೇಂದ್ರ ರಾಜ್ಯದ ಅನುಪಾತ 65:35 ಇದರ ಮೂಲ ಉದ್ದೇಶ ಶಾಲಾ ಸೌಲಭ್ಯ ಇಲ್ಲದೆಡೆ ಹೊಸ ಶಾಲೆಗಳ ನಿರ್ಮಾಣ, ಹಾಲಿ ಶಾಲೆಗಳ ಪುನರುದ್ದಾರ, ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳು, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವಿಕೆ ಹಾಗೂ ಶಿಕ್ಷಕರ ಕೊರತೆಯನ್ನು ನಿವಾರಿಸುವಿಕೆ, ಹಾಲಿ ಶಿಕ್ಷಕರಿಗೆ ಹೆಚ್ಚಿನ ಗುಣಮಟ್ಟದ ತರಬೇತಿಯನ್ನು ನೀಡಲಾಗುತ್ತಿದ್ದು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲಕ ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಅಭಿವೃದ್ಧಿಪಡಿಸಿ ಅದರಲ್ಲೂ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶೇಷವಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲಕ ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## ಅ) **ಫೀಡರ್ ಶಾಲೆ**

6 ರಿಂದ 14 ವರ್ಷ ವಯೋಮಾನದ ಮಕ್ಕಳ ಸಂಖ್ಯೆ ಕಡಿಮೆ ಇದ್ದು ಹಾಗೂ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಯೋಗ್ಯವಲ್ಲದ ಸ್ಥಳಗಳನ್ನು ಗುರುತಿಸಿ ಅಂತಹ ಸ್ಥಳಗಳಲ್ಲಿ ರಾಜ್ಯದಲ್ಲಿ ಒಟ್ಟು 61 ಫೀಡರ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಕೇಂದ್ರಗಳ ಉಸ್ತುವಾರಿಯನ್ನು ಸಮುದಾಯ ಆಯ್ಕೆ ಮಾಡಿದ ಸ್ವಯಂ ಸೇವಕರುಗಳು ನೋಡಿಕೊಳ್ಳುತ್ತಾರೆ. ಸ್ವಯಂ ಸೇವಕರು ಶಿಕ್ಷಕರಿಂದ ಶಿಕ್ಷಣದ ಬಗ್ಗೆ ಸಲಹೆಗಳನ್ನು ಪಡೆಯುತ್ತಾರೆ. ಈ ಅವಧಿಯಲ್ಲಿ 1429 ಮಕ್ಕಳು ದಾಖಲಾಗಿರುತ್ತಾರೆ.

## ಆ) **ಬೇಸಿಗೆಯ ಸೇತುಬಂಧ ಶಿಬಿರಗಳು** :

ಚಿಣ್ಣರ ಅಂಗಳ :

ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಬೇಸಿಗೆ ರಜೆಯ ಕಾಲದಲ್ಲಿ ಎರಡು ತಿಂಗಳ ಅವಧಿಯ ಸೇತುಬಂಧ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ರಾಜ್ಯದಲ್ಲಿ 1899 ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಅವುಗಳಲ್ಲಿ 7 ರಿಂದ 14 ವರ್ಷ ವಯೋಮಾನದ 18327 ಮಕ್ಕಳನ್ನು ದಾಖಲಿಸಲಾಗಿದೆ.

## ಇ) **12 ತಿಂಗಳ ವಸತಿ ಸೇತುಬಂಧ ಶಿಬಿರಗಳು** :

ಆಶಾಕಿರಣ :

ಶಾಲೆಗಳಿಗೆ ಎಂದೂ ದಾಖಲಾಗದ ಮಕ್ಕಳನ್ನು ಶಾಲೆಗೆ ಕರೆತರುವ ಉದ್ದೇಶದಿಂದ 12 ತಿಂಗಳ ವಸತಿ ಸೇತುಬಂಧ ಸಿದ್ದತಾ ಶಿಬಿರಗಳನ್ನು ಆಯೋಜಿಸಲಾಗಿದೆ. ಈ ಶಿಬಿರದ ಅವಧಿಯಲ್ಲಿ 617 ಕೇಂದ್ರಗಳಲ್ಲಿ 18690 ಮಕ್ಕಳು ದಾಖಲಾಗಿರುತ್ತಾರೆ.

ಈ) **ಎರಡು ತಿಂಗಳ ವಸತಿ ಸೇತುಬಂಧ ಶಿಬಿರ** :

ಶಾಲೆಯಿಂದ ಹೊರಗುಳಿಯುವ ಮಕ್ಕಳನ್ನು ಶಾಲೆಗೆ ಕರೆತರುವ ಉದ್ದೇಶದಿಂದ ಎರಡು ತಿಂಗಳ ವಸತಿ ಸೇತುಬಂಧ ಶಿಬಿರಗಳನ್ನು ಆಯೋಜಿಸಲಾಗಿದೆ. ಈ ಶಿಬಿರದ ಅವಧಿಯಲ್ಲಿ 1578 ಕೇಂದ್ರಗಳಲ್ಲಿ 11171 ಮಕ್ಕಳು ದಾಖಲಾಗಿರುತ್ತಾರೆ.

ಉ) **ವಿಶೇಷ ದಾಖಲಾತಿ ಆಂದೋಲನ** :

ಶಾಲೆಗೆ ಸೇರಲು ಅರ್ಹತೆಯಿರುವ ಮಕ್ಕಳನ್ನು ಶಾಲೆಗೆ ದಾಖಲಿಸಲು ರಾಜ್ಯಾದ್ಯಂತ ವಿಶೇಷ ದಾಖಲಾತಿ ಆಂದೋಲನ ನಡೆಸಲಾಗಿದೆ. ಶಾಲೆಗೆ ದಾಖಲಾಗದ ಅನೇಕ ಮಕ್ಕಳನ್ನು ಈ ಆಂದೋಲನಗಳಿಂದ ಗುರ್ತಿಸಿ ಶಾಲೆಗೆ ಸೇರಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯರು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರು ಹಾಗೂ ಸಮುದಾಯ ಸದಸ್ಯರು ಕ್ರಿಯಾತ್ಮಕವಾಗಿ ಪಾಲ್ಗೊಂಡಿರುತ್ತಾರೆ. ಪ್ರಸ್ತುತ ವರ್ಷದಲ್ಲಿ 12608 ಮಕ್ಕಳು ದಾಖಲಾಗಿರುತ್ತಾರೆ.

ಊ) **ಸಂಚಾರಿ ಶಾಲೆಗಳು** :

ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿನ ಮಕ್ಕಳಿಗೆ ಶಾಲಾ ಶಿಕ್ಷಣ ಒದಗಿಸುವ ಉದ್ದೇಶದಿಂದ 7 ಸಂಚಾರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಕೊಳಚೆ ಪ್ರದೇಶಗಳಿಂದ ಹೊರಗಿನ ಶಾಲೆಗೆ ಹೋಗದಿರುವ ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಗುರುತಿಸಲಾದ ಕೊಳಚೆ ಪ್ರದೇಶದ ಮಕ್ಕಳನ್ನು ಕೊಳಚೆ ಪ್ರದೇಶದಿಂದ ಹೊರಗೆ, ಸಮೀಪದ ಉದ್ಯಾನವನ/ಶಾಲೆಗಳಿಗೆ ಕರೆದುಕೊಂಡು ಹೋಗಿ ಶಿಕ್ಷಣ ನೀಡಲಾಗುತ್ತಿದೆ. ಈ ಕಾರ್ಯಕ್ರಮದಿಂದ 525 ಮಕ್ಕಳು ಪ್ರಯೋಜನ ಪಡೆದಿರುತ್ತಾರೆ.

ಋ) **ಟೆಂಟ್ (ಗುಡಾರ) ಶಾಲೆಗಳು** :

ವಲಸೆ ಕಾರ್ಮಿಕರ ಮಕ್ಕಳಿಗೆ 103 ಟೆಂಟ್ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು ಇದರಿಂದ 3117 ಮಕ್ಕಳು ದಾಖಲಾಗಿರುತ್ತಾರೆ.

ಎ) **ಇತರೆ ಚಟುವಟಿಕೆಗಳು** :

- 8ನೇ ತರಗತಿಯನ್ನು ಪ್ರಾರಂಭಿಸಿರುವ ಪ್ರಾಥಮಿಕ ಶಾಲೆಗಳಿಗೆ 101 ತರಬೇತಿ ಹೊಂದಿದ ಪದವೀಧರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಮಂಜೂರಾತಿ ನೀಡಲಾಗಿದೆ.
- ಇಲಾಖೆಯು 233155 ಶಿಕ್ಷಕರಿಗೆ ಸೇವಾನಿರತ ತರಬೇತಿಯನ್ನು ನೀಡಲಾಗಿದೆ.
- 450 ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಉನ್ನತೀಕರಿಸಲಾಗಿದೆ.
- ಪ್ರಾಥಮಿಕ ಹಂತದಲ್ಲಿ ತರಗತಿಯ ಕೊಠಡಿಗಳಲ್ಲಿ ಕಡಿಮೆ ವೆಚ್ಚದ/ ವೆಚ್ಚ ರಹಿತ ಕಲಿಕಾ ಸಾಮಗ್ರಿಗಳಿಗಾಗಿ, ರಾಜ್ಯದಲ್ಲಿರುವ ಪ್ರತಿ 2.27 ಲಕ್ಷಕ್ಕೆ ಒಬ್ಬ ಶಿಕ್ಷಕರಿಗೆ ರೂ. 500/- ಅನುದಾನವನ್ನು ವಾರ್ಷಿಕವಾಗಿ ನೀಡಲಾಗಿರುತ್ತದೆ. 2008-09ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನವು ವಿಶೇಷ ಮಧ್ಯಸ್ತಿಕೆ ವಹಿಸಿ, ಕಿರಿಯ ಪ್ರಾಥಮಿಕ ಶಾಲೆಗಳಿಗೆ ರೂ. 5000/- ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ 12000/- ನೀಡಿದೆ.

ಏ) **ಲಿಂಗಬೇಧ**

ಗ್ರಾಮೀಣ ಪ್ರದೇಶದಲ್ಲಿ ಅದರಲ್ಲೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಮುದಾಯದಲ್ಲಿ ಲಿಂಗಬೇಧವು ಇನ್ನೂ ಇದೆ. ಅಲ್ಲದೆ ಕೆಲವು ಗುಂಪುಗಳೂ ಸಹ ಶಾಲೆಗೆ ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಿವೆ. ಸರ್ಕಾರದ ಅನೇಕ ಕಾರ್ಯಕ್ರಮಗಳಾದ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ವಿದ್ಯಾರ್ಥಿ ವೇತನ ಮುಂತಾದವುಗಳು ಲಿಂಗಬೇಧವನ್ನು ಕಡಿಮೆಮಾಡಲು ಸಹಾಯವಾಗಿರುತ್ತದೆ.

ಸರ್ವ ಶಿಕ್ಷಣ ಅಭಿಯಾನದ ಮುಖ್ಯ ಗುರಿ ಶಾಲಾ ಪ್ರವೇಶಕ್ಕೆ ಉತ್ತೇಜನ, ಹೆಣ್ಣು ಮಕ್ಕಳು ಶಾಲೆಯಿಂದ ಹೊರಗುಳಿಯುವಿಕೆಯನ್ನು ತಡೆಯುವುದು. ವಿವಿಧ ರೀತಿಯಲ್ಲಿ ಮಧ್ಯಸ್ತಿಕೆಯನ್ನು ವಹಿಸುವುದರ ಮೂಲಕ ಮತ್ತು ತಮ್ಮ ಕಾರ್ಯಕ್ಷೇತ್ರವನ್ನು ಸಶಕ್ತಗೊಳಿಸುವುದರ ಮೂಲಕ ಒಳ್ಳೆಯ ಶಿಕ್ಷಣವನ್ನು ಕೊಡುವುದು ಆಗಿರುತ್ತದೆ.

**ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ :**

ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವ ಸಲುವಾಗಿ 100 ಪ್ರವೇಶಾವಕಾಶದ 61 ಸನಿವಾಸ ಶಾಲೆಗಳನ್ನು 61 ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‍ಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ನೂತನ ರಾಷ್ಟ್ರೀಯ ಕಾರ್ಯಕ್ರಮ (ಓಕಇಉಇಐ)**

ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ನೂತನ ರಾಷ್ಟ್ರೀಯ ಕಾರ್ಯಕ್ರಮ (ಓಕಇಉಇಐ) ವನ್ನು 2003–04 ರಿಂದ ಪ್ರಾರಂಭಿಸಲಾಯಿತು. ಇದು ಮಹಿಳಾ ಸಾಕ್ಷರತಾ ಪ್ರಮಾಣವನ್ನು ಉತ್ತಮಪಡಿಸುವ ಹಾಗೂ ಲಿಂಗ ತಾರತಮ್ಯವನ್ನು ನಿವಾರಿಸಿ ಸಮಾನತೆಯನ್ನು ಕಾಯ್ದುಕೊಳ್ಳುವ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ಹೆಚ್ಚುವರಿ ಘಟಕಗಳಾದ ಮಾದರಿ ಉನ್ನತ ಪ್ರಾಥಮಿಕ ಶಾಲೆಯನ್ನು ಪ್ರತಿ ಸಮೂಹ (ಛಿಟಣಣಜಡಿ) ದಲ್ಲಿಯೂ ಪ್ರಾರಂಭಿಸುವುದು, ಕಲಿಕಾ ಸಮಾಗ್ರಿಗಳನ್ನು ಒದಗಿಸುವುದು ಇತ್ಯಾದಿ.

ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ನೂತನ ರಾಷ್ಟ್ರೀಯ ಕಾರ್ಯಕ್ರಮ (ಓಕಇಉಇಐ) ವನ್ನು ಶೈಕ್ಷಣಿಕವಾಗಿ ಹಿಂದುಳಿದ 18 ಜಿಲ್ಲೆಯ 61 ಬ್ಲಾಕ್‍ಗಳಲ್ಲಿ 2006–07ರಲ್ಲಿ ಪ್ರಾರಂಭಿಸಲಾಯಿತು. ಆನಂತರ 233 ಹೆಚ್ಚುವರಿ ಸಮೂಹದಲ್ಲಿ ಮಂಜೂರು ಮಾಡಿ ಒಟ್ಟಾರೆ 2008–09ರಲ್ಲಿ 4 ನಗರ ಕೊಳಚೆ ಪ್ರದೇಶಗಳು ಸೇರಿ 921 ಸಮೂಹದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 108 ಸಮೂಹ ಮಹಿಳಾ ಸಮಾಖ್ಯದಿಂದ ನಿರ್ವಹಿಸಲಾಗುತ್ತಿದೆ.

**ಶಾಲಾಭಿವೃದ್ಧಿ ಉಸ್ತುವಾರಿ ಸಮಿತಿ (ಖಆಒಅ)**

ಶಿಕ್ಷಣ ಪದ್ಧತಿಯಲ್ಲಿ ಸಮುದಾಯವು ಒಂದು ಮುಖ್ಯ ಹಿಡುವಳಿಯನ್ನಾಗಿ ತೆಗೆದುಕೊಳ್ಳಲಾಗಿದೆ. ಟಾಸ್ಕ್ ಫೋರ್ಸ್‍ನ ಶಿಫಾರಸ್ಸಿನ ಮೇರೆಗೆ 2001 ರಲ್ಲಿ ಶಾಲಾ ಶಿಕ್ಷಣದ ದಕ್ಷ ನಿರ್ವಹಣೆಗಾಗಿ ಶಾಲಾಭಿವೃದ್ಧಿ ಉಸ್ತುವಾರಿಯನ್ನು ರಚಿಸಲಾಗಿದೆ.

ಶಾಲಾಭಿವೃದ್ಧಿ ಉಸ್ತುವಾರಿ ಸಮಿತಿಯು ಶಾಲಾಭಿವೃದ್ಧಿ ಯೋಜನೆ, ಮಕ್ಕಳ ಹಾಜರಾತಿ ಮತ್ತು ವಿದ್ಯಾರ್ಥಿಗಳ ಕಲಿಕೆಯನ್ನು ಸರ್ಕಾರದಿಂದ ಉತ್ತೇಜನ ಕೊಡುವಂತೆ ವಿತರಿಸಲಾಗಿರುವ ಕಾರ್ಯಕ್ರಮಗಳಾದ ಪಠ್ಯಪುಸ್ತಕ, ಸಮವಸ್ತ್ರ ಮತ್ತು ಮಧ್ಯಾಹ್ನ ಬಿಸಿಊಟ, ಶಾಲೆಗಳಲ್ಲಿನ ವಸ್ತುಗಳನ್ನು ಶಾಲೆಯ ಸಮಾನತೆ ನೋಡಿಕೊಳ್ಳುವ ಮತ್ತು ಮಕ್ಕಳಿಗೆ ಅವಶ್ಯವಾದ ಶಾಲಾ ಸೌಲಭ್ಯಗಳನ್ನು ನೋಡಿಕೊಳ್ಳುತ್ತಿದೆ.

ಶಾಲಾಭಿವೃದ್ಧಿ ಉಸ್ತುವಾರಿ ಸಮಿತಿಯು ಶಾಲಾ ಕೆಲಸಗಳಿಗಾಗಿ ಸರ್ವ ಶಿಕ್ಷಣ ಅಭಿಯಾನದಡಿ ಅನುದಾನವನ್ನು ಜಂಟಿ ಖಾತೆಯಲ್ಲಿ ತೊಡಗಿಸಿ ಶಾಲಾ ಕಟ್ಟಡ, ಹೆಚ್ಚುವರಿ ಕೊಠಡಿಗಳು, ಕಾಂಪೌಂಡ್, ಶೌಚಾಲಯ, ಕುಡಿಯುವ ನೀರು, ಟಿ.ಎಲ್.ಎಂ ನಿಂದ ಹೊಸ ಶಾಲೆಗಳ ನಿರ್ಮಾಣಗಳಿಗಾಗಿ ಬಿಡುಗಡೆಗೊಳಿಸುತ್ತಿದೆ.

429 ರಾಜ್ಯಮಟ್ಟದ ಶಿಕ್ಷಕ ಸಂಪನ್ಮೂಲ ವ್ಯಕ್ತಿಗಳು ಮತ್ತು 6050 ಜಿಲ್ಲಾಮಟ್ಟದ ಸಂಪನ್ಮೂಲ ವ್ಯಕ್ತಿಗಳು ಈಗಾಗಲೇ ತರಬೇತಿ ಹೊಂದಿದ್ದಾರೆ. ಎಸ್.ಡಿ.ಎಂ.ಸಿ / ಸಿ.ಎ.ಸಿ ತರಬೇತಿಯು ಸಹ ಪ್ರಗತಿಯಲ್ಲಿದೆ. ಇದರ ಫಲದಿಂದಾಗಿ ಶಾಲೆಗಳ ಸ್ವಯಂ ನಿರ್ವಹಣೆಯು ವಿಶ್ವವ್ಯಾಪಿ ಮಾದರಿಯಾಗಿ ಸಾಗಿದೆ.

## ಪ್ರಾಥಮಿಕ ಶಿಕ್ಷಣದಡಿಯಲ್ಲಿ ಆದ ನೋಂದಣಿಯ ವಿವರ

| 1. ಪ್ರಾಥಮಿಕ ಶಿಕ್ಷಣ | 2006–07 | 2007–08 | 2008–09 | 2006–07 | 2007–08 | 2008–09 |
|---|---|---|---|---|---|---|
| **ಅ) 1 ರಿಂದ 5 ನೇ ತರಗತಿ** | | | | 9.87 | 6.25 | 7.86 |
| • **ಬಾಲಕರು** | 29.55 | 28.86 | 28.29 | | | |
| • **ಬಾಲಕಿಯರು** | 27.70 | 27.10 | 26.58 | | | |
| **ಒಟ್ಟು** | **57.25** | **55.96** | 54.88 | | | |
| **ಆ) 6ರಿಂದ 7 ನೇ ತರಗತಿ** | | | | 14.25 | 13.99 | 10.49 |
| • **ಬಾಲಕರು** | 10.96 | 10.69 | 10.38 | | | |
| • **ಬಾಲಕಿಯರು** | 10.04 | 10.00 | 9.71 | | | |
| **ಒಟ್ಟು** | **21.01** | **20.70** | 20.09 | | | |
| **1. ಶಿಕ್ಷಕರ ಸಂಖ್ಯೆ** | 253576 | 273462 | 283992 | | | |
| **2. ಶಾಲೆಗಳ ಸಂಖ್ಯೆ** | | | | | | |
| ಕಿರಿಯ ಪ್ರಾಥಮಿಕ ಶಾಲೆಗಳು | 28499 | 28871 | 26961 | | | |
| ಹಿರಿಯ ಪ್ರಾಥಮಿಕ ಶಾಲೆಗಳು | 27849 | 27570 | 30583 | | | |

# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ರಚನೆ:**

ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕಾಗಿ ಮತ್ತು ಕಾರ್ಯಕ್ಷೇತ್ರ ಲೋಕಕ್ಕಾಗಿ ತಯಾರು ಮಾಡುವ ಪ್ರೌಢ ಶಿಕ್ಷಣವು ಶೈಕ್ಷಣಿಕ ಕ್ರಮಾಗತ ವ್ಯವಸ್ಥೆಯಲ್ಲಿ ನಿರ್ಣಾಯಕವಾಗಿರುತ್ತದೆ. 9 ಮತ್ತು 10 ನೇ ತರಗತಿಯನ್ನು ಪ್ರೌಢ ಹಂತವೆಂದು ಪರಿಗಣಿಸಿದರೆ, 11 ಮತ್ತು 12 ನೇ ತರಗತಿಗಳನ್ನು ಹಿರಿಯ ಪ್ರೌಢ ಹಂತವೆಂದು ಪರಿಗಣಿಸಲಾಗಿದೆ. ಪ್ರೌಢ ಹಂತದಲ್ಲಿ ವಿದ್ಯಾರ್ಥಿಗಳ ವಯಸ್ಸು 14 ರಿಂದ 16 ಇದ್ದು, ಹಿರಿಯ ಪ್ರೌಢ ಹಂತದ ವಿದ್ಯಾರ್ಥಿಗಳ ವಯಸ್ಸು 16 ರಿಂದ 18 ಇರುತ್ತದೆ. ಈ ಎರಡೂ ಹಂತದಲ್ಲಿ ವಿದ್ಯಾರ್ಥಿಗಳು ಕಠಿಣ ಪರಿಶ್ರಮವನ್ನು ಎದುರಿಸುವುದರಿಂದ ಭಾರತೀಯ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಸ್ಫರ್ದೆಯನ್ನು ಎದುರಿಸುವ ಸ್ಥೈರ್ಯವನ್ನು ಹೊಂದುತ್ತಾರೆ.

ಹಾಗಾಗಿ ಹೆಚ್ಚಿನ ಪ್ರವೇಶಾಕಾಶವನ್ನು ಒದಗಿಸುವುದರ ಮೂಲಕ ಮತ್ತು ಗುಣಮಟ್ಟವನ್ನು ಪರಿಣಾಮಕಾರಿಯಾಗಿ ಸುಧಾರಿಸುವುದರ ಮೂಲಕ ಪ್ರೌಢ ಶಿಕ್ಷಣವನ್ನು ಬಲಪಡಿಸುವ ಅಗತ್ಯ ಇರುತ್ತದೆ. 2001 ರ ಜನಗಣತಿಯ ಅಂಕಿ ಅಂಶದ ಪ್ರಕಾರ 14 ರಿಂದ 18 ವರ್ಷ ವಯಸ್ಸಿನವರ ಜನಸಂಖ್ಯೆ 8.55 ಕೋಟಿ ಇರುತ್ತದೆ. ದಿನಾಂಕ: 1–3–2005 ರಂದು ಈ ಜನಸಂಖ್ಯೆಯು 9.48 ಕೋಟಿ ಇರಬಹುದೆಂದು ಅಂದಾಜಿಸಲಾಗಿದ್ದು, ದಿನಾಂಕ: 1–3–2007 ಕ್ಕೆ ಅಂದರೆ 11 ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ 9.69ಕ್ಕೆ ಏರಬಹುದೆಂದು ಅಂದಾಜಿಸಲಾಗಿದೆ. 2011 ರ ಹೊತ್ತಿಗೆ ಈ ಸಂಖ್ಯೆಯು 9.70 ಕ್ಕೆ ಸ್ಥಿರಗೊಳ್ಳಬಹುದು.

2005–06 ರಲ್ಲಿ 9 ರಿಂದ 12 ನೇ ತರಗತಿಗೆ ಒಟ್ಟು ನೋದಣಿಯು 40.49% ಇತ್ತು. 9 ಮತ್ತು 10 ನೇ ತರಗತಿಗೆ 52.26% ಇದ್ದರೆ 11 ಮತ್ತು 12 ನೇ ತರಗತಿಯಲ್ಲಿ 28.54% ಇತ್ತು. ಭಾರತದ ಅರ್ಥ ವ್ಯವಸ್ಥೆಯನ್ನು ಸಡಿಲಗೊಳಿಸಿದ್ದರಿಂದ ಮತ್ತು ಜಾಗತಿಕಗೊಳಿಸಿದ್ದರಿಂದ, ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತಿನಲ್ಲಿ ಕ್ಷಿಪ್ರ ಗತಿಯ ಬದಲಾವಣೆಗಳು ಉಂಟಾದ ಹಿನ್ನೆಲೆಯಲ್ಲಿ, ಬಡತನವನ್ನು ಕಡಿಮೆ ಮಾಡಲು ಮತ್ತು ಜೀವನ ಶೈಲಿಯ ಗುಣಮಟ್ಟವನ್ನು ಹೆಚ್ಚಿಸಲು, ವಿದ್ಯಾರ್ಥಿಗಳು ಉದ್ಯೋಗಸ್ಥರಾಗಲು ಸಹಾಯಕವಾಗುವಂತೆ ವೃತ್ತಿಪರ ಜ್ಞಾನ ಮತ್ತು ಕೌಶಲ್ಯಗಳನ್ನು ಒದಗಿಸಲು ಸುಧಾರಿತ ಅವಕಾಶಗಳನ್ನು ನೀಡುವುದು.

ಪ್ರಾಥಮಿಕ ಶಿಕ್ಷಣವು ಸಂವಿಧಾನಾತ್ಮಕವಾಗಿ ಜಾಗತಿಕವಾಗಿ ಕಡ್ಡಾಯವಾಗಿರುವುದರಿಂದ, ಹಲವು ಮುಂದುವರಿದ ಮತ್ತು ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಸಾಧಿಸಿರುವಂತೆ ಪ್ರೌಢ ಶಿಕ್ಷಣವನ್ನೂ ಸಹ ಜಾಗತಿಕ ಮಟ್ಟದಲ್ಲಿ ಮುಂದುವರೆಯುವಂತೆ ಮಾಡುವ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ನ್ಯಾಷನಲ್ ಪಾಲಿಸಿ ಆಫ್ ಎಜುಕೇಷನ್ (ಎನ್.ಪಿ.ಇ), 1986, (1992 ರಲ್ಲಿ ಪರಿಷ್ಕರಿಸಿದಂತೆ) ಈ ಕೆಳಕಂಡಂತೆ ಹೇಳುತ್ತದೆ.

> "ಬಾಲಕಿಯರನ್ನು, ಪರಿಶಿಷ್ಟ ಜಾತಿಯ, ಪಂಗಡದ ಮಕ್ಕಳನ್ನು ವಿಶೇಷವಾಗಿ ವಿಜ್ಞಾನ, ವಾಣಿಜ್ಯ ಮತ್ತು ವೃತ್ತಿ ಶಿಕ್ಷಣದ ಮುಖ್ಯವಾಹಿನಿಗೆ ತರುವ ಬಗ್ಗೆ ಹೆಚ್ಚು ಒತ್ತು ನೀಡಿ ಪ್ರೌಢ ಶಿಕ್ಷಣಕ್ಕೆ ಹೆಚ್ಚು ಪ್ರವೇಶಾವಕಾಶಗಳನ್ನು ಕಲ್ಪಿಸಲಾಗುವುದು...............ವಿಶೇಷ ಸಂಸ್ಥೆಗಳ ಮೂಲಕ ಅಥವಾ ಪ್ರೌಢ ಶಿಕ್ಷಣವನ್ನು ಮರು ನಿರೂಪಿಸುವ ಮೂಲಕ ಈ ಹಂತದಲ್ಲಿ ಆರ್ಥಿಕವಾಗಿ ಬೆಳೆಯುವ ನಿಟ್ಟಿನಲ್ಲಿ ಅಮೂಲ್ಯ ಮಾನವ ಸಂಪನ್ಮೂಲವನ್ನು ಒದಗಿಸುತ್ತದೆ."
>
> ಯೋಜನಾ ಆಯೋಗದ ಹತ್ತನೇ ಯೋಜನೆಯ ಮಿಡ್ ಟರ್ಮ್ ಅಪ್ರೇಸಲ್ (ಎಂಟಿಎ), ಕೂಡಾ ಕೆಳಕಂಡಂತೆ ಶಿಫಾರಸ್ಸು ಮಾಡುತ್ತದೆ: "ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಪೂರ್ಣ ಪ್ರಮಾಣದ ಅಥವಾ ಪೂರ್ಣಕ್ಕೆ ಹತ್ತಿರವೆನಿಸುವ ಸಾಧನೆಯನ್ನು ಯೋಜಿಸುವ ಸಲುವಾಗಿ ಪ್ರೌಢ ಶಿಕ್ಷಣದ ದೊಡ್ಡ ಪ್ರಮಾಣದ ವಿಸ್ತರಣೆಯನ್ನು ಸಾಧಿಸಲು, ಸರ್ವ ಶಿಕ್ಷಣ ಅಭಿಯಾನದ ಹೆಜ್ಜೆಯಲ್ಲಿಯೇ ನಡೆದು ಪ್ರೌಢ ಶಿಕ್ಷಣದ ಹೊಸ ಗುರಿಯನ್ನು ಹೊಂದಬೇಕಾಗುತ್ತದೆ."

**ಗುರಿ**

ಒಳ್ಳೆಯ ಶಿಕ್ಷಣವು 14 ರಿಂದ 18 ವಯಸ್ಸಿನ ಎಲ್ಲ ಎಳೆಯರಿಗೂ ಸುಲಭ ಸಾಧ್ಯವಾದ ರೀತಿಯಲ್ಲಿ ದೊರೆಯುವಂತೆ ಮತ್ತು ಕೈಗೆಟಕುವಂತೆ ಮಾಡುವುದೇ ಪ್ರೌಢ ಶಿಕ್ಷಣದ ಗುರಿಯಾಗಿದೆ. ಈ ದೃಷ್ಟಿಕೋನದಿಂದ ಕೆಳಕಂಡದ್ದನ್ನು ಸಾಧಿಸ ಬೇಕಾಗಿದೆ.

- ✓ ಯಾವುದೇ ವಾಸಸ್ಥಳಕ್ಕೆ ಸಮಂಜಸವೆನಿಸುವ ಅಂತರದಲ್ಲಿ ಅಂದರೆ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಪ್ರೌಢ ಶಾಲೆಯನ್ನು ಒದಗಿಸುವುದು ಮತ್ತು 7 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಹಿರಿಯ ಪ್ರೌಢ ಶಾಲೆಯನ್ನು ಒದಗಿಸುವುದು;
- ✓ 2017 ರ ಹೊತ್ತಿಗೆ ಜಾಗತಿಕ ಪ್ರವೇಶಾವಕಾಶವನ್ನು (ಉಇಖ 100%) ಮತ್ತು ಜಾಗತಿಕ ಉಳಿಕೆಯನ್ನು 2020 ರ ಹೊತ್ತಿಗೆ ಸಾಧಿಸುವುದು;
- ✓ ಗ್ರಾಮೀಣ ಪ್ರದೇಶದಲ್ಲಿರುವ, ಪ.ಜಾ/ಪ.ಪಂ, ಇತರ ಹಿಂದುಳಿದ ವರ್ಗಗಳ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ (ಇಃಒ) ವರ್ಗಗಳ ಬಾಲಕಿಯರಿಗೆ, ಅಂಗವಿಕಲ ಮಕ್ಕಳಿಗೆ ವಿಶೇಷವಾಗಿ ಪ್ರೌಢ ಶಿಕ್ಷಣದಲ್ಲಿ ಪ್ರವೇಶಾವಕಾಶವನ್ನು ಕಲ್ಪಿಸುವುದು.

**ಧ್ಯೇಯಗಳು:**

ಪ್ರೌಢ ಶಿಕ್ಷಣದ ಜಾಗತೀಕರಣದ ಸವಾಲನ್ನು ಎದುರಿಸಲು (ಗಖಇ), ಪ್ರೌಢ ಶಿಕ್ಷಣದ ಭಾವನಾತ್ಮಕ ರಚನೆಯ ದೃಷ್ಟಿಕೋನವನ್ನು ಬದಲಾಯಿಸಬೇಕು. ಈ ಬಗ್ಗೆ ಕೆಳಕಂಡ ಮಾರ್ಗಸೂಚಿ ನಿಯಮಗಳಿವೆ; ಜಾಗತಿಕ ಪ್ರವೇಶಾವಕಾಶ, ಸಮಾನತೆ ಮತ್ತು ಸಾಮಾಜಿಕ ನ್ಯಾಯ, ಸಮಂಜಸ, ಅಭಿವೃದ್ಧಿ, ವ್ಯಾಸಂಗ ಕ್ರಮ ಮತ್ತು ವಿನ್ಯಾಸಾತ್ಮಕ ಅಂಶಗಳು. ಪ್ರೌಢ ಶಿಕ್ಷಣವನ್ನು ಜಾಗತೀಕರಣಗೊಳಿಸುವುದರಿಂದ ಸಮಾನತೆಯತ್ತ ಸಾಗಲು ಅವಕಾಶ ಕಲ್ಪಿಸುತ್ತದೆ. ಈ ಮೇಲ್ಕಂಡ ಗುರಿಯು ಈ ಕೆಳಕಂಡ ಧ್ಯೇಯಗಳನ್ನು ಭಾಷಾಂತರಿಸುತ್ತದೆ/ ವಿವರಿಸುತ್ತದೆ.

- ➢ ಎಲ್ಲಾ ಸರ್ಕಾರಿ/ಸ್ಥಳೀಯ ಸಂಸ್ಥೆ/ ಸರ್ಕಾರದಿಂದ ಅನುದಾನಿತ ಪ್ರೌಢ ಶಾಲೆಗಳಲ್ಲಿ ವಾಸ್ತವವಾದ ಸವಲತ್ತುಗಳು, ಸಿಬ್ಬಂದಿ ಮತ್ತು ನಿಗದಿತ ಕನಿಷ್ಠ ಮಟ್ಟದ ಗುಣಮಟ್ಟದ ಲಭ್ಯತೆಯನ್ನು ಕಾಯ್ದು ಕೊಳ್ಳುವುದು ಮತ್ತು ಇತರೆ ಶಾಲೆಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಕ್ರಮಬದ್ಧವಾದ ರಚನೆಯನ್ನು ಹೊಂದುವುದು;
- ➢ ಸರಿಯಾದ ಸ್ಥಳದಲ್ಲಿ (ಅಂದರೆ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಪ್ರೌಢ ಶಾಲೆಯನ್ನು ಒದಗಿಸುವುದು ಮತ್ತು 7 ರಿಂದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಹಿರಿಯ ಪ್ರೌಢ ಶಾಲೆಗೆ) ಸಮರ್ಥ ಮತ್ತು ಸುರಕ್ಷಿತ ಸಾರಿಗೆ ವ್ಯವಸ್ಥೆ/ ವಸತಿ ಗೃಹ ಅಗತ್ಯವಿದ್ದರೆ ಮುಕ್ತ ಶಾಲೆಯೂ ಸೇರಿದಂತೆ ಇತ್ಯಾದಿ ವ್ಯವಸ್ಥೆಗಳನ್ನು ಒದಗಿಸುವುದರ ಮೂಲಕ ನಿಗದಿತ ಪ್ರಮಾಣದಲ್ಲಿ ಎಲ್ಲ ಎಳೆಯರಿಗೂ ಪ್ರೌಢ ಶಿಕ್ಷಣವು ದೊರೆಯುವಂತೆ ಸುಧಾರಿಸುವುದು. ಹೇಗಾದರೂ, ಈ ಕಟ್ಟಳೆಯನ್ನು ಗುಡ್ಡಗಾಡು ಪ್ರದೇಶ ಹಾಗೂ ಕಷ್ಟಕರ ಪ್ರದೇಶಗಳಲ್ಲಿ ಸಡಿಲಿಸ ಬಹುದು. ಮುಖ್ಯವಾಗಿ ಅಂತಹ ಪ್ರದೇಶಗಳಲ್ಲಿ ವಸತಿ ಶಾಲೆಗಳನ್ನು ನಿರ್ಮಿಸಬಹುದು;
- ➢ ಯಾವುದೇ ರೀತಿಯ ಲಿಂಗ, ಸಾಮಾಜಿಕ–ಆರ್ಥಿಕ, ಅಂಗವೈಕಲ್ಯತೆ ಮತ್ತಿತರ ಅಡೆತಡೆಗಳ ಕಾರಣಗಳಿಗಾಗಿ ಯಾವ ಮಗುವೂ ಪ್ರೌಢ ಶಿಕ್ಷಣದಿಂದ ವಂಚಿತವಾಗದಂತೆ ನೋಡಿಕೊಳ್ಳುವುದು;
- ➢ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದರ ಮೂಲಕ ಬೌದ್ಧಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಶಿಕ್ಷಣವನ್ನು ವರ್ಧಿಸುವುದು.
- ➢ ಪ್ರೌಢ ಶಿಕ್ಷಣವನ್ನು ಪಡೆಯುತ್ತಿರುವ ಎಲ್ಲರಿಗೂ ಒಳ್ಳೆಯ ಗುಣಮಟ್ಟದ ಶಿಕ್ಷಣ

ದೊರೆಯುತ್ತಿರುವ ಬಗ್ಗೆ ಧೃಡೀಕರಿಸಿ ಕೊಳ್ಳುವುದು.

**ಕೌಶಲ್ಯ/ಕಲೆ**

ಪ್ರೌಢ ಶಿಕ್ಷಣದ ಜಾಗತೀಕರಣದ (ಗಖಇ) ಹಿನ್ನೆಲೆಯಲ್ಲಿ, ವಿದ್ಯಾರ್ಥಿಗಳ ಸಂಖ್ಯೆ, ವಿಶ್ವಾಸಾರ್ಹತೆ ಮತ್ತು ಗುಣಮಟ್ಟದ ಬಗೆಗಿನ ಸವಾಲುಗಳನ್ನು ಎದುರಿಸುವ ಸಲುವಾಗಿ ಹೆಚ್ಚುವರಿ ಶಾಲೆಗಳು, ಹೆಚ್ಚುವರಿ ಕೊಠಡಿಗಳು, ಶಿಕ್ಷಕರು ಮತ್ತಿತರ ಸವಲತ್ತುಗಳನ್ನು ಒದಗಿಸುವ ಸಲುವಾಗಿ ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಇದಕ್ಕೆ ಪೂರಕವಾಗಿ ಶೈಕ್ಷಣಿಕ ಬೇಡಿಕೆಗಳನ್ನು, ವಾಸ್ತವ ಮೂಲಭೂತ ಸೌಕರ್ಯಗಳನ್ನು, ಮಾನವ ಸಂಪನ್ಮೂಲವನ್ನು, ಶೈಕ್ಷಣಿಕ ಹೂಡಿಕೆಗಳನ್ನು, ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅಳವಡಿಕೆಯ ಬಗ್ಗೆ ಅವಕಾಶಗಳನ್ನು ಅಂದಾಜಿಸುವುದೂ ಸಹ ಅಗತ್ಯವಿರುತ್ತದೆ. ಈ ಯೋಜನೆಯು ಮೊದಲು 10 ನೇ ತರತಿಯವರೆಗೆ ವ್ಯಾಪ್ತಿಯನ್ನು ಹೊಂದಿರುತ್ತದೆ. ನಂತರದಲ್ಲಿ, ಯೋಜನೆಯನ್ನು ಜಾರಿಗೊಳಿಸಿದ ಎರಡೇ ವರ್ಷಗಳಲ್ಲಿ ಹಿರಿಯ ಪ್ರೌಢ ಹಂತವನ್ನೂ ಸಹ ಪರಿಗಣಿಸಲಾಗುತ್ತದೆ. ಪ್ರೌಢ ಶಿಕ್ಷಣದ ಜಾಗತೀಕರಣವು ಕೆಳಕಂಡ ಕೌಶಲ್ಯ ನೀತಿಯನ್ನು ಹೊಂದಿರುತ್ತದೆ:

<u>ಪ್ರವೇಶಾವಕಾಶ:</u>

ದೇಶದ ವಿವಿಧ ಪ್ರದೇಶಗಳಲ್ಲಿ ಶಾಲಾ ಸವಲತ್ತುಗಳಲ್ಲಿ ಸಮತೆ ಇರುವುದಿಲ್ಲ. ಖಾಸಗಿ ಶಾಲೆಗಳ ನಡುವೆ ಮತ್ತು ಖಾಸಗಿ ಹಾಗೂ ಸರ್ಕಾರಿ ಶಾಲೆಗಳಲ್ಲಿ ಈ ಅಸಮತೆ ಕಂಡು ಬರುತ್ತದೆ, ಒಳ್ಳೆಯ ಗುಣಮಟ್ಟದ ಪ್ರೌಢ ಶಿಕ್ಷಣಲ್ಲಿ ಜಾಗತಿಕ ಪ್ರವೇಶಾವಕಾಶ ಕಲ್ಪಿಸಬೇಕಾದಲ್ಲಿ, ರಾಷ್ಟ್ರ ಮಟ್ಟದಲ್ಲಿ ವೈಶಾಲ್ಯತೆಯುಳ್ಳ ವಿಶೇಷವಾಗಿ ರಚಿತವಾದ ಮಾದರಿಯನ್ನು ಹೊಂದುವುದು ಮತ್ತು ರಾಜ್ಯ ಮತ್ತು ಯೂನಿಯನ್ ಟೆರಿಟರಿಗಳ ಭೌಗೋಳಿಕ, ಸಾಮಾಜಿಕ-ಸಾಂಸ್ಕೃತಿಕ. ಭಾಷಾ ಮತ್ತು ಜನಸಂಖ್ಯೆಯ ಸ್ಥಿತಿ-ಗತಿಗಳನ್ನು ಗಮನದಲ್ಲಿ ಇರಿಸಿಕೊಳ್ಳುವುದು ಮಾತ್ರವಲ್ಲದೇ, ಅವಶ್ಯಕತೆ ಇರುವ ಪ್ರದೇಶಗಳಲ್ಲಿ ಅವಕಾಶ ಕಲ್ಪಿಸಬೇಕಾಗುತ್ತದೆ. ಪ್ರೌಢ ಶಿಕ್ಷಣದ ಮಾದರಿಯು ಕೇಂದ್ರೀಯ ವಿದ್ಯಾಲಯಗಳೊಂದಿಗೆ ಹೋಲಿಸಿ ನೋಡುವಂತಿರಬೇಕು.

<u>ಮೂಲಭೂತ ಸೌಕರ್ಯ ಮತ್ತು ಕಲಿಕಾ ಸಾಧನ</u>ಗಳನ್ನು ಈ ಕೆಳಕಂಡಂತೆ ಅಭಿವೃದ್ಧಿ ಪಡಿಸಲಾಗುವುದು;

- ಪ್ರಸ್ತುತ ಇರುವ ಪ್ರೌಢ ಶಾಲಾ ಮತ್ತು ಹಿರಿಯ ಪ್ರೌಢ ಶಾಲೆಗಳ ವಿಸ್ತರಣೆ ಮತ್ತು ಧ್ಯೇಯಗಳನ್ನು ಹಾಲಿ ಇರುವ ಶಾಲೆಗಳಿಗೆ ಸ್ಥಳಾಂತರಿಸುವುದು.
- ಸೂಕ್ಷ್ಮ ಯೋಜನೆಯನ್ನು ಆಧರಿಸಿದ ಅಭ್ಯಾಸ ನಡೆಸ್ಮತ್ತಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಎಲ್ಲ ಮೂಲಭೂತ ಸೌಕರ್ಯಗಳನ್ನು ಮತ್ತು ಶಿಕ್ಷಕರನ್ನು ಒದಗಿಸುವುದರ ಮೂಲಕ ಉನ್ನತೀಕರಿಸುವುದು.
- ಅಗತ್ಯಕ್ಕೆ ತಕ್ಕಂತೆ ಪ್ರೌಢ ಶಾಲೆಗಳನ್ನು ಹಿರಿಯ ಪ್ರೌಢ ಶಾಲೆಗಳಾಗಿ ಉನ್ನತೀಕರಿಸುವುದು.
- ಶಾಲಾ ನಕ್ಷೆಗಳನ್ನು ಆಧರಿಸಿ, ಸೇವೆ ಲಭ್ಯವಿಲ್ಲದ ಪ್ರದೇಶಗಳಲ್ಲಿ ಪ್ರೌಢ/ ಹಿರಿಯ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವುದು. ಈ ಎಲ್ಲ ಕಟ್ಟಡಗಳು ಕಡ್ಡಾಯವಾಗಿ ಮಳೆ ನೀರು ಸಂಗ್ರಹಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುತ್ತವೆ ಹಾಗೂ ....................
- ಹಾಲಿ ಇರುವ ಶಾಲಾ ಕಟ್ಟಡಗಳಲ್ಲಿಯೂ ಮಳೆ ನೀರು ಸಂಗ್ರಹಣಾ ವ್ಯವಸ್ಥೆಯನ್ನು ಅಳವಡಿಸಲಾಗುತ್ತದೆ.

- ಹೊಸ ಶಾಲೆಗಳನ್ನು ಸಹ ಪಿಪಿಪಿ ಮಾದರಿಯಲ್ಲಿಯೇ ಪ್ರಾರಂಭಿಸಲಾಗುವುದು.

ಗುಣಮಟ್ಟ:

ಗುಣಮಟ್ಟಕ್ಕೆ ಯಥೋಚಿತ ಪ್ರಾಮುಖ್ಯತೆಯನ್ನು ನೀಡಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲು ಉದ್ದೇಶಿಸಲಾಗಿದೆ.

- ಕಪ್ಪು ಹಲಗೆ, ಪೀಠೋಪಕರಣಗಳು, ಗ್ರಂಥಾಲಯ, ವಿಜ್ಞಾನ ಮತ್ತು ಗಣಿತ ಪ್ರಯೋಗಾಲಯಗಳು, ಗಣಕಯಂತ್ರ ಪ್ರಯೋಗಾಲಯ, ಶೌಚಾಲಯ ಕ್ಲಸ ರ್ ಇತ್ಯಾದಿ ಮೂಲಭೂತ ಸವಲತ್ತುಗಳನ್ನು ಒದಗಿಸುವುದು.
- ಶಿಕ್ಷಕರುಗಳನೇಮಕಾತಿ ಮತ್ತು ಸೇವಾ ನಿರತ ಶಿಷಕರಿಗೆ ತರಬೇತಿ ನೀಡುವುದು.
- ಎಂಟನೇ ತರಗತಿಯಿಂದ ಉತ್ತೀರ್ಣರಾಗಿ ಹೋಗುವ ವಿದ್ಯಾರ್ಥಿಗಳಿಗೆ ಸೇತುಬಂಧ ತರಬೇತಿ ನೀಡಿ ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಎನ್‌ಸಿಎಫ್ 2005 ರ ನಿರೀಕ್ಷೆಯ ಮಟ್ಟವನ್ನು ತಲುಪುವ ಸಲುವಾಗಿ ಪಠ್ಯಕ್ರಮವನ್ನು ಪುನರ್ ಪರಿಶೀಲಿಸುವುದು.
- ಗ್ರಾಮೀಣ ಮತ್ತು ಕಷ್ಟಕರವಾದ ಗುಡ್ಡಗಾಡು ಪ್ರದೇಶಗಳಲ್ಲಿ ಶಿಕ್ಷಕರಿಗೆ ವಸತಿ ಕಲ್ಪಿಸುವುದು.
- ವಸತಿ ಕಲ್ಪಿಸುವ ಸಂದರ್ಭದಲ್ಲಿ ಮಹಿಳಾ ಶಿಕ್ಷಕರಿಗೆ ಆದ್ಯತೆ ನೀಡಲಾಗುವುದು.

ಸಮಾನತೆ:

ಸಮಾನತೆಯ ಅಂಶವನ್ನು ಪರಿಗಣಿಸಲು ಈ ಕೆಳಕಂಡ ಮಾನದಂಡಗಳನ್ನು ಕೈಗೆತ್ತಿಕೊಳ್ಳಲಾಗುವುದು;

- ಪ.ಜಾ/ಪಂಗಡದ, ಇತರೆ ಹಿಂದುಳಿದ ವರ್ಗದ ಹಾಗೂ ಅಲ್ಪಸಂಖ್ಯಾತ ಮಕ್ಕಳಿಗೆ ಉಚಿತ ಊಟ, ವಸತಿ;
- ಬಾಲಕಿಯರಿಗೆ ವಿದ್ಯಾರ್ಥಿ ನಿಲಯ/ ವಸತಿ ಶಾಲೆ, ಪ್ರೋತ್ಸಾಹಕ ಧನ, ಸಮವಸ್ತ್ರ, ಪುಸ್ತಕ ಮತ್ತು ಪ್ರತ್ಯೇಕ ಶೌಚಾಲಯ;
- ಪ್ರೌಢ ಹಂತದಲ್ಲಿ ಅಗತ್ಯತೆ ಇರುವ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ. ಪರಿಪೂರ್ಣ ಶಿಕ್ಷಣವು ಎಲ್ಲ ಚಟುವಟಿಕೆಗಳ ಹೆಗ್ಗುರುತಾಗಿರುತ್ತದೆ. ವಿಧ ವಿಧ ರೀತಿಯಲ್ಲಿ ಅರ್ಹತೆಯಿರುವ ಮಕ್ಕಳಿಗೆ ಎಲ್ಲ ರೀತಿಯ ಸವಲತ್ತುಗಳನ್ನು ಎಲ್ಲ ಶಾಲೆಯಲ್ಲಿಯೂ ನೀಡುವುದು;
- ಪೂರ್ಣ ಪ್ರಮಾಣದಲ್ಲಿ ಪ್ರೌಢ ಶಿಕ್ಷಣವನ್ನು ಕಲಿಯಲಾಗದವರಿಗಾಗಿ ಮತ್ತು ಮುಖತಃ ನೀಡುವ ಶಿಕ್ಷಣವನ್ನು ಪೂರಕವಾಗಿ ಸಮೃದ್ಧಗೊಳಿಸುವ ಸಲುವಾಗಿ ಮುಕ್ತ ಹಾಗೂ ದೂರ ಕಲಿಕೆಯನ್ನು ವಿಸ್ತೃತಗೊಳಿಸುವ ಕಾರ್ಯ ಕೈಗೊಳ್ಳಬೇಕಿದೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಶಿಕ್ಷಣದಲ್ಲಿ ಈ ವ್ಯವಸ್ಥೆಯು ಮಹತ್ವದ ಪಾತ್ರವಹಿಸುತ್ತದೆ.

ಸ್ಥಾನಮಾನ:

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಈಗ ಪ್ರಾಥಮಿಕ ಹಂತದಲ್ಲಿದೆ. 2009–10 ರಲ್ಲಿ ಈ ಅಭಿಯಾನವು ಕಾರ್ಯರೂಪಕ್ಕೆ ಬರುತ್ತದೆ ಎಂದು ನಿರೀಕ್ಷಿಸಲಾಗಿದೆ.

## ಮಹಿಳಾ ಸಮಾಖ್ಯಾ

ಮಹಿಳಾ ಸಮಾಖ್ಯಾವು ಕರ್ನಾಟಕ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದೆ. ಸರ್ಕಾರದ ಒಳಗಿನ ಹಾಗೂ ಹೊರಗಿನ ಪರಿಣತರನ್ನು ಒಗ್ಗೂಡಿಸಿ, ಗ್ರಾಮೀಣ ಮಹಿಳೆಯರ ಜಾಗತಿಕ ಲಾಭಕ್ಕಾಗಿಮಹಿಳಾ ಸಮಾಖ್ಯಾವು ವೈವಿಧ್ಯಮಯ ಸಂಪನ್ಮೂಲವನ್ನು ಒಟ್ಟುಗೂಡಿಸುತ್ತದೆ. 1986 ರ ಹೊಸ ಶಿಕ್ಷಣ ನೀತಿಯು ಸಕಾರಾತ್ಮಕ ಹಾಗೂ ಮಧ್ಯವರ್ತಿ ಎನಿಸುವ ಮತ್ತು ಮಹಿಳೆಯರಿಗೆ ಸಮಾನತೆ

ಮತ್ತು ಸಮಾನ ಅವಕಾಶಗಳನ್ನು ಕಲ್ಪಿಸುವ ಶಿಕ್ಷಣ ಕಾರ್ಯಕ್ರಮಕ್ಕೆ ಪ್ರಾಮುಖ್ಯತೆಯನ್ನು ನೀಡಿದೆ.

ಕರ್ನಾಟಕ:

ಮಹಿಳಾ ಸಮಾಖ್ಯಾ ಕರ್ನಾಟಕವು 1989 ರಲ್ಲಿ ಒಂದು ಸಂಸ್ಥೆಯ ರೂಪದಲ್ಲಿ ನೋಂದಣಿಯಾಯಿತು. ಮಹಿಳಾ ಸಮಾಖ್ಯಾ ಕರ್ನಾಟಕವು 3500 ಸಂಘಗಳಲ್ಲಿ, ರಾಜ್ಯದ ಬೀದರ್, ಬಿಜಾಪುರ, ಮೈಸೂರು, ರಾಯಚೂರು, ಗುಲ್ಬರ್ಗಾ, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಚಾಮರಾಜನಗರ, ಬೆಳಗಾವಿ, ಗದಗ ಮತ್ತು ಚಿಕ್ಕಬಳ್ಳಾಪುರ, ಈ 12 ಜಿಲ್ಲೆಗಳ 2500 ಗ್ರಾಮಗಳಲ್ಲಿ, ಸುಮಾರು 70,000 ಕ್ಕೂ ಹೆಚ್ಚು ಮಹಿಳೆಯರನ್ನು ಸಂಘಟಿಸಿ ಕಾರ್ಯನಿರ್ವಹಿಸುತ್ತಿದೆ. ಮಹಿಳಾ ಸಮಾಖ್ಯಾ ಕರ್ನಾಟಕವು ಗ್ರಾಮ ಮಟ್ಟದ ಸಮುದಾಯಗಳನ್ನು ಪೋಷಿಸುತ್ತದೆ ಹಾಗೂ ಇವು ಸಂಘವೆಂದು ಕರೆಸಿಕೊಳ್ಳಲ್ಪಡುತ್ತವೆ. ಸಮುದಾಯಿಕ ಮತ್ತು ಸಹಕಾರ ಭಾವನೆಗಳನ್ನು ಹುಟ್ಟಿಸುವ ಸಂಘಗಳು, ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿಯಲು ಮತ್ತು ಅವರಲ್ಲಿ ಆತ್ಮವಿಶ್ವಾಸ ಹಾಗೂ ಆತ್ಮ ಗೌರವವನ್ನು ಬೆಳೆಸುವ ಮೂಲಕ ಸಂಘಟಿತ ಕ್ರಿಯೆಯನ್ನು ಸಶಕ್ತಗೊಳಿಸ್ಮತ್ತವೆ. ಈ ಸಂಘಗಳು ತಾಲ್ಲೂಕು ಮಟ್ಟದಲ್ಲಿ ತಮ್ಮದೇ ಆದ ಒಕ್ಕೂಟವನ್ನು ಹೊಂದಿದು ್ದ, ಸಬಲೀಕರಣ ಕಾರ್ಯಕ್ಕೆ ಹಾಗೂ ಮಹಿಳಾ ಹಕ್ಕುಗಳ ಬಗ್ಗೆ ಪ್ರತಿಪಾದಿಸಲು ಬಹು ದೊಡ್ಡ ಆಧಾರವಾಗಿವೆ. ಶಿಕ್ಷಣವು ದೃಷ್ಟಿಕೋನವನ್ನು ಬದಲಾಯಿಸುವ ವಾತಾವರಣವನ್ನು ಮಹಿಳಾ ಸಮಾಖ್ಯಾ ಕರ್ನಾಟಕವು ಸೃಷ್ಟಿಸುತ್ತದೆ, ಮಹಿಳೆಯರು ಸಮಾನತೆಯನ್ನು ಹೊಂದುವ ಗುರಿಗಳನ್ನು ಹೆಚ್ಚಿಸುತ್ತದೆ, ಇದರಿಂದ ಹೆಚ್ಚು ಹೆಚ್ಚು ಮಹಿಳೆಯರು ಮತ್ತು ಬಾಲಕಿಯರು ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಶಿಕ್ಷಣವನ್ನು ಆಯ್ದುಕೊಳ್ಳಲು ಸಶಕ್ತರನ್ನಾಗಿಸುತ್ತದೆ. ಮಹಿಳೆಯರು ಹಾಗೂ ಬಾಲಕಿಯರು ತಮ್ಮ ಭವಿಷ್ಯದ ಬಗ್ಗೆ ನಿರ್ಣಯಿಸಲು ಹಾಗೂ ತಮ್ಮ ಅದೃಷ್ಟವನ್ನು ತಾವೆ ಬರೆದುಕೊಳ್ಳಲು ಮಹಿಳಾ ಸಮಾಖ್ಯಾ ಕರ್ನಾಟಕವು ಅವಕಾಶವನ್ನು ಕಲ್ಪಿಸುತ್ತದೆ.

- ಲಿಂಗ ಸಮಾನತೆಯ ಮೇಲೆ ದೊಡ್ಡ ದೊಡ್ಡ ಕುಂಚಗಳಿಂದ ಗೆರೆ ಎಳೆದು, ಪ್ರತಿಬಿಂಬ, ವಿಶ್ಲೇಷಣೆ ಮತ್ತು ತರಬೇತಿ ಎಂಬ ಉಪಕರಣಗಳಿಂದ ಸಾಮಾಜಿಕ ಪರಿವರ್ತನೆಯ ಬಟ್ಟೆಯ ಮೇಲೆ ಬಣ್ಣ ತುಂಬಿಸುವುದು.

- ಮಹಿಳೆಯರಿಗೆ ಮನೆಯಲ್ಲಿ ಮತ್ತು ಸಮಾಜದಲ್ಲಿ ಸಂಪನ್ಮೂಲಗಳು ಹೆಚ್ಚಾಗಿ ಸಿಗುವಂತೆ ಮಾಡಿ ಅವರ ವ್ಯವಹಾರ ಕೌಶಲ್ಯವನ್ನು ಹೆಚ್ಚಿಸುವುದು.

- ವಿಶಾಲವಾದ ಸಮುದಾಯಿಕ ಸಂಪನ್ಮೂಲಗಳನ್ನು ಉತ್ಪತ್ತಿ ಮಾಡಿಅವುಗಳನ್ನು ಆಶಾದಾಯಕ ರೀತಿಯಲ್ಲಿ, ಸಬಲೀಕರಿಸಿ ವ್ಮರು ಹಂಚಿಕೆ ಮಾಡಿ, ಮಹಿಳೆಯರಿಗೆ ವಿಶಾಲವಾದ ಸಧೃಡ ಆರ್ಥಿಕ ಮಾರ್ಗಗಳನ್ನು ತೋರಿಸಿಕೊಡುವುದು.

- ಸಾಕ್ಷರತಾ ಆಂದೋಲನ, ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಮತ್ತು ಹಕ್ಕುಗಳನ್ನು ತಿಳಿಸಿ ಕೊಡುವ, ಮಾಹಿತಿಯನ್ನು ತಿಳಿಯಲು ಮಹಿಳೆಯರ ಕ್ಷಮತೆಯನ್ನು ಹೆಚ್ಚಿಸುವ ಕಾನೂನು ಶಿಕ್ಷಣ ಮತ್ತು ಸಾಧಾರಣ ನ್ಯಾಯಿಕ ವ್ಯವಸ್ಥೆಯಿಂದ ಪರಿಹಾರ ಪಡೆಯುವ ಬಗ್ಗೆ, ಸ್ಥಾನೀಯ ಸರಕಾರಗಳ ಸಕ್ರಿಯ ಭಾಗವಹಿಸುವಿಕೆ,ಆರ್ಥಿಕ ಸಬಲೀಕರಣ, ಉಳಿತಾಯ ಮತ್ತು ಲೇವಾದೇವಿ ಚಟುವಟಿಕೆಗಳು, ಸಣ್ಣ ಉದ್ದಿಮೆಗಳು, ಸಂಘಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಮೂಲಕ ಮಹಿಳಾ ಸಮಾಖ್ಯಾ ಕರ್ನಾಟಕವು ಮಹಿಳೆಯರು ಗುರಿಯನ್ನು ಸಾಧಿಸಲು ಮತ್ತು ಕನಸನ್ನು ನನಸಾಗಿಸಲು ಪ್ರಯತ್ನಿಸುತ್ತದೆ.

ಮಹಿಳಾ ಶಿಕ್ಷಣ ಕೇಂದ್ರ :

1993 ರಲ್ಲಿ ಪ್ರಾರಂಭವಾದ ಈ ಕೇಂದ್ರವು ಶಾಲೆಯಿಂದ ಹೊರಗುಳಿದವರಿಗೆ ಪುನಃ ಶಿಕ್ಷಣ

ಕೊಡಿಸುವನಿಟ್ಟಿನಲ್ಲಿ ಶ್ರಮಿಸುತ್ತಿದೆ. ವಯಸ್ಸು ಮತ್ತು ಕಲಿಕಾ ಮಟ್ಟವನ್ನು ಆಧರಿಸಿ ಹತ್ತನೇ ತರಗತಿಯಲ್ಲಿ ನೋಂದಣಿ ಹೊಂದಿದ ಬಾಲಕಿಯರು 10 ನೇ ತರಗತಿಯಲ್ಲಿ ಉತ್ತೀರ್ಣರಾಗಲು ಸಹಾಯ ಮಾಡುತ್ತಿದೆ. ಮಹಿಳಾ ಸಮಾಖ್ಯಾ ಕರ್ನಾಟಕವು ಕಾರ್ಯನಿರ್ವಹಿಸುತ್ತಿರುವ 9 ಜಿಲ್ಲೆಗಳಲ್ಲಿ ಈ ವರ್ಷ 50 ಬಾಲಕಿಯರನ್ನು ನೋಂದಾಯಿಸಲಾಗಿದೆ. ಅವರಲ್ಲಿ 20 ಹುಡುಗಿಯರು ಮಂಡಳಿಯ ಪರೀಕ್ಷೆಯನ್ನು, 23 ಹುಡುಗಿಯರು ಶಾಲೆಯ ಮುಕ್ತ ಪರೀಕ್ಷೆಯನ್ನು ಎದುರಿಸಿದ್ದು , 7 ಜನ ಹುಡುಗಿಯರು ಕನಿಷ್ಠ ವಯೋ ಮಿತಿಯನ್ನು ಹೊಂದದೇ ಇದ್ದುದರಿಂದ ಪರೀಕ್ಷೆಯನ್ನು ಎದುರಿಸಲು ಸಾಧ್ಯವಾಗಿರುವುದಿಲ್ಲ.

ಶಿಕ್ಷಣದ ಜೊತೆಗೆ ಅವರಿಗೆ ಸಾಮಾಜಿಕ ಅರಿವು, ಮಕ್ಕಳ ಹಕ್ಕುಗಳು, ಮಹಿಳೆಯರ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು, ಪರಿಸರ, ಕಾನೂನು ಇತ್ಯಾದಿ ವಿಷಯಗಳ ಬಗ್ಗೆಯೂ ಸಹ ಮಹಿಳಾ ಸಮಾಖ್ಯಾ ಕರ್ನಾಟಕದ ಮತ್ತು ಸಿಂಧುವಾಣಿಯ  ಸದಸ್ಯರಿಂದ ಮಾಹಿತಿ ನೀಡಲಾಗುತ್ತದೆ. ಅವರುಗಳನ್ನು ಸ್ಥಳೀಯ ಬ್ಯಾಂಕುಗಳು, ಅಂಚೆ ಕಚೇರಿ ಮತ್ತು ಗ್ರಾಮ ಪಂಚಾಯ್ತಿ ಕಚೇರಿಗಳಿಗೆ ಕರೆದೊಯ್ಯಲಾಗುತ್ತದೆ. ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳಿಗೆ ವಿಶೇಷ ಶಿಕ್ಷಣವನ್ನು ನೀಡಿ ಪಠ್ಯಕ್ರಮವನ್ನು ಅನುಸರಿಸಲು ಸಹಾಯ ಮಾಡಲಾಗುತ್ತದೆ.

ಪಠ್ಯೇತರ ಚಟುವಟಿಕೆಗಳಿಗೂ ಸಹ ಈ ಕಾರ್ಯಕ್ರಮದಲ್ಲಿ ಪ್ರೋತ್ಸಾಸ ನೀಡಲಾಗುತ್ತಿದ್ದು, ರಾಷ್ಟ್ರೀಯ ಹಬ್ಬಗಳ ಆಚರಣೆ  ಸಂದರ್ಭದಲ್ಲಿ ಪ್ರಬಂಧ ರಚನೆ, ಚಿತ್ರಕಲೆ, ಗಾಯನ, ಕರಾಟೆ, ಭಾಷಣ ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಆಸಕ್ತ ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಇದರಿಂದ ಅವರ ಆತ್ಮವಿಶ್ವಾಸದ ಮಟ್ಟ ಹೆಚ್ಚಿರುತ್ತದೆ. ಇದಲ್ಲದೆ ಅವರುಗಳನ್ನು ಶೈಕ್ಷಣಿಕ ಪ್ರವಾಸಕ್ಕೆ ಕೂಡ ಕರೆದುಕೊಂಡು ಹೋಗಲಾಗುತ್ತದೆ.

<u>ಸಾಕ್ಷರ ಸಮಾಖ್ಯಾ ಕಾರ್ಯಕ್ರಮ:</u>

ಮಹಿಳಾ ಸಮಾಖ್ಯಾ ಕರ್ನಾಟಕದ ಸಂಘದ 18 ರಿಂದ 35 ವಯಸ್ಸಿನ ಮಹಿಳೆಯರನ್ನು ಈ ಕಾರ್ಯಕ್ರಮದಡಿ ತರಲು ಇದನ್ನು 2006 ರ ಏಪ್ರಿಲ್–ಮೇ ತಿಂಗಳೀನಲ್ಲಿ ಪ್ರಾರಂಭಿಸಲಾಯಿತು. ಮಹಿಳೆಯರನ್ನು ಸಾಕ್ಷರತಾ ಕಾರ್ಯಕ್ರಮದಲ್ಲಿ ತೊಡಗಿಸಲು, ಅಕ್ಷರಾಭ್ಯಾಸ ಮಾಡಿ ಗ್ರಾಮ ಮಟ್ಟದಲ್ಲಿ ತಮ್ಮ ಕಲಿಕೆಯನ್ನು ಕಲಿಕಾ ಕೇಂದ್ರಗಳಲ್ಲಿ ಮುಂದುವರೆಸಲು ಪ್ರೇರೇಪಿಸುವುದು. ಕೇಂದ್ರದಲ್ಲಿ ಪ್ರತಿ 10 ಜನ ಪ್ರಶಿಕ್ಷಣಾರ್ಥಿಗಳಿಗೆ ಒಬ್ಬ "ಅಕ್ಷರ ಸಂಗಾತಿ" ಇದ್ದು, ಆಕೆ ಕಲಿಸುವ – ಕಲಿಯುವ ಕ್ರಿಯೆಯನ್ನು ನಿರ್ವಹಿಸುತ್ತಾಳೆ. ಕಾರ್ಯಕ್ರಮದ ಮೊದಲ ಹಂತದಲ್ಲಿ ಸುಮಾರು 12,360 ಮಹಿಳೆಯರನ್ನು, 9 ಜಿಲ್ಲೆಗಳ 1121 ಕೇಂದ್ರಗಳಲ್ಲಿ ತೊಡಗಿಸಲಾಗಿರುತ್ತದೆ. ಎರಡನೆ ಹಂತದಲ್ಲಿ 8,502 ಮಹಿಳೆಯರನ್ನು ತೊಡಗಿಸಲಾಗಿದೆ. ಇಂದಿಗೆ ಸುಮಾರು 20,862 ಮಹಿಳೆಯರು ತಮ್ಮನ್ನು ತಾವು ಓದಿ ಬರೆಯುವ ಕಲಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಮೊದಲ ಹಂತದಲ್ಲಿ ತೊಡಗಿಸಿಕೊಂಡ ಮಹಿಳೆಯರಲ್ಲಿ 6,320 ಮಹಿಳೆಯರನ್ನು ಮೌಲ್ಯಮಾಪನ ಮಾಡಲಾಗಿದ್ದು ಅವರಲ್ಲಿ 4,376 ಮಹಿಳೆಯರನ್ನು ಲೋಕ ಶಿಕ್ಷಣ ಇಲಾಖೆಯು ಅಕ್ಷರಸ್ಥರೆಂದು ಪ್ರಮಾಣೀಕರಿಸಿರುತ್ತದೆ.

ಸಂಘಗಳಲ್ಲಿನ ಬಹುತೇಕ (ಸುಮಾರು 80%) ಮಹಿಳೆಯರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದು, ಅಷ್ಟೊಂದು ಮಂದಿ ಮಹಿಳೆಯರು ಓದಲು ಬರೆಯಲು ಕಲಿತಿರುವುದು ಮಹಿಳಾ ಸಮಾಖ್ಯಾ ಕರ್ನಾಟಕವು ಹೆಮ್ಮೆ ಪಡುವಂತಹ ವಿಷಯವಾಗಿರುತ್ತದೆ.

**<u>ಗುರಿ</u>**

<u>ಸಾಕ್ಷರತಾ ಶಿಬಿರಗಳು:</u>

ಮಹಿಳೆಯರಲ್ಲಿ ಕಲಿಕೆಯ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಲು ಮತ್ತು ಅವರಿಗೆ ಕಲಿಕೆಯ ಮೌಲ್ಯವನ್ನು ತಿಳಿಸಲು, ಎಲ್ಲಾ ಮಹಿಳಾ ಸಮಾಖ್ಯಾ ಜಿಲ್ಲೆಗಳಲ್ಲಿ 3,5,15 ಮತ್ತು 18 ದಿನಗಳ ಶಿಬಿರಗಳನ್ನು ಪ್ರಾರಂಭಿಸಲಾಯಿತು. ಮಹಿಳೆಯರು ತಮ್ಮನ್ನು ಕಲಿಕೆಯ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದಲ್ಲದೇ ಗ್ರಾಮ ಮಟ್ಟದ ಕಲಿಕಾ ಕೇಂದ್ರಗಳಲ್ಲಿ ತಮ್ಮ ಕಲಿಕೆಯನ್ನು ಮುಂದುವರೆಸಿರುತ್ತಾರೆ.

ರಾಜ್ಯದ 9 ಜಿಲ್ಲೆಗಳಲ್ಲಿ 40% ಕ್ಕಿಂತ ಕಡಿಮೆ ಸಾಕ್ಷರತೆಯಿದ್ದ ಗ್ರಾಮಗಳನ್ನು ಆರಿಸಿ 18 ದಿನಗಳ ವಸತಿ ರಹಿತ ಸಾಕ್ಷರತಾ ಶಿಬಿರವನ್ನು ನಡೆಸಲಾಯಿತು. ಉಳಿದ ಮಹಿಳೆಯರನ್ನೂ ಸಹ ತೊಡಗಿಸಲು 9 ಜಿಲ್ಲೆಗಳಲ್ಲಿ ವಸತಿ ಸಹಿತ ಶಿಬಿರಗಳನ್ನು ನಡೆಸಲಾಯಿತು. ಸಾಕ್ಷರತೆಯ ಜೊತೆಗೆ ವೃತ್ತಿ ಶಿಕ್ಷಣ ಕೌಶಲ್ಯವನ್ನು ಮತ್ತು ಹವ್ಯಾಸಗಳನ್ನು ಬೆಳೆಸಿಕೊಳ್ಳಲು ತರಬೇತಿ ನೀಡಲಾಯಿತು, ಕಾನೂನು, ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳ ಬಗ್ಗೆಯೂ ಸಹ  ಮಾಹಿತಿನೀಡಲಾಯಿತು. ಅದರ ಜೊತೆಗೆ ಅವರನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಸಹ ತೊಡಗಿಸಲಾಯಿತು. ದೈನಂದಿನ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಗ್ರಾಮಗಳಲ್ಲಿಯೇ ಶಿಬಿರಗಳನ್ನು ನಡೆಸಲಾಯಿತು. ಸಂಘದ ಸದಸ್ಯರಲ್ಲದ ಮಹಿಳೆಯರೂ ಸಹ ಈ ಶಿಬಿರಗಳಲ್ಲಿ ಭಾಗವಹಿಸಿದ್ದು ಕಂಡು ಬಂತು. "ಬಾರವ್ವಾ ಕಲಿಯಾಕ" "ನಾಡು ನುಡಿ" "ಸಾಕ್ಷರ ಸಂಗಾತಿ" ಇತ್ಯಾದಿ ಪುಸ್ತಕಗಳನ್ನು ವಿತರಿಸಲಾಯಿತು. ಓದುವ ಸಾಮರ್ಥ್ಯವನ್ನು ಬೆಳೆಸುವ ಸಲುವಾಗಿ ಡಿಎಂಇ ಶಿಫಾರಸು ಮಾಡಿದ ಕಥೆ ಪುಸ್ತಕಗಳನ್ನು ಸಂಘದ ಸದಸ್ಯರಿಗೆ ಪ್ರಚಾರಿಸಲಾಯಿತು. ಶಿಕ್ಷಕರ ಮತ್ತು ಶಿಕ್ಷಣಾರ್ಥಿಗಳ ನಡುವೆ ಆಸಕ್ತಿಯನ್ನು ಉಳಿಸಲು ಮತ್ತು ಬೆಳೆಸಲು, ಹೊಸ ಕಲಿಕಾ ಪದ್ಧತಿಯ ಬಗ್ಗೆ ಡಿಎಂಇ ಯ ಅಧಿಕಾರಿಗಳಿಂದ ಎರಡು ದಿನದ ತರಬೇತಿ ನೀಡಲಾಯಿತು. ಶಿಕ್ಷಣಾರ್ಥಿಗಳ ಕಲಿಕೆಯನ್ನು ಪ್ರತೀ ತಿಂಗಳೂ ಕ್ಲಸ್ಟರ್‌ಗಳಲ್ಲಿ ಪರಿಶೀಲನೆ ಮಾಡಲಾಗುತ್ತದೆ. ಗ್ರಾಮ ಪಂಚಾಯತಿ, ಸ್ಥಳೀಯ ಶಿಕ್ಷಣ ಸಮಿತಿಯ ಸದಸ್ಯರುಗಳು ಮತ್ತು ಸಮಾಖ್ಯಾದ ಕಾರ್ಯಕರ್ತರು ಶಿಕ್ಷಣಾರ್ಥಿಗಳ ಅಭಿವೃದ್ಧಿಯನ್ನು ಗಮನಿಸಲು ಈ ಕೇಂದ್ರಗಳಿಗೆ ಭೇಟಿ ನೀಡುತ್ತಾರೆ. ಡಯಟ್ ಹಾಗೂ ವಿಶ್ವವಿದ್ಯಾಲಯಗಳನ್ನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗಿದೆ. ಇದುವರೆಗೂ 6,320 ಮಹಿಳೆಯರನ್ನು ಮೌಲ್ಯಮಾಪನ ಮಾಡಲಾಗಿದ್ದು ಅವರಲ್ಲಿ 4,376 ಮಹಿಳೆಯರನ್ನು ಅಕ್ಷರಸ್ಥರೆಂದು ಪ್ರಮಾಣೀಕರಿಸಲಾಗಿದೆ.

ಫಲಿತಾಂಶ:

ಕಲಿಕಾ ಕೌಶಲ್ಯವು ಹೆಚ್ಚಿದಂತೆಲ್ಲಾ ಮಹಿಳೆಯರಲ್ಲಿ ಆತ್ಮವಿಶ್ವಾಸವು ಪರಿಣಾಮಕಾರಿಯಾಗಿ ಹೆಚ್ಚುತ್ತಿದೆ. ಅವರುಗಳು ಸಮಾಜದಲ್ಲಿ ಎದ್ದು ನಿಲ್ಲುತ್ತಿರುವುದೂ ಸಹ ಹೆಚ್ಚುತ್ತಿದೆ. ಅವರು ತಮ್ಮ ಕುಟುಂಬದವರಿಂದ ಸ್ನೇಹಿತರುಗಳಿಂದ ಗೌರವವನ್ನು ಪಡೆಯುತ್ತಿದ್ದಾರೆ. 2008 ರ ವರ್ಷಾಂತ್ಯದಲ್ಲಿ ಸಂಘದ ಬಹುತೇಕ ಸದಸ್ಯರು ಅಕ್ಷರಸ್ಥರಾಗಿರುವುದನ್ನು ಗಮನಿಸಲಾಗಿದೆ. ಮಹಿಳೆಯರ ಕಲಿಕಾ ಕೌಶಲ್ಯ ಸುಧಾರಿಸಿರುವುದರಿಂದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಅವರ ಭಾಗವಹಿಸುವಿಕೆ ಮತ್ತು ಅವರ ವೈಯಕ್ತಿಕ ಜೀವನ ಮಟ್ಟವೂ ಸಹ ಸುಧಾರಿಸಿದೆ. ಸಂವಹನದಲ್ಲಿ ಮತ್ತು ಓದಿ ಬರೆಯುವ ಸಂದರ್ಭಗಳಲ್ಲಿ ಅವರುಗಳು ಎದುರಿಸುತ್ತಿದೆ ಸಮಸ್ಯೆಗಳು ಕಡಿಮೆ ಆಗುವ ಸಾಧ್ಯತೆಗಳಿವೆ. ಕಲಿಕೆಯಲ್ಲಿ ಅವರ ಆಸಕ್ತಿ ಹೆಚ್ಚುವ ಮತ್ತು ಬಾಲಕಿಯರು ಅವಶ್ಯಕವಿರುವ ಸಂಪ್ರದಾಯ ಬದ್ಧ ಶಿಕ್ಷಣವನ್ನು ಪಡೆಯುತ್ತಾರೆ ಎಂಬ ಬಗ್ಗೆ ಧೃಢಿಕರಣವೂ ಸಹ ಹೆಚ್ಚುವುದೆಂಬ ನಿರೀಕ್ಷೆ ಇದೆ. ಸಂಘಗಳಲ್ಲಿನ ಬಹುತೇಕ (ಸುಮಾರು 80%) ಮಹಿಳೆಯರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ.

ಪುರುಷರಿಗೆ ಮತ್ತು ಬಾಲಕರಿಗೆ ಲಿಂಗದ ಬಗ್ಗೆ ಅರಿವು:

ಮಹಿಳೆಯರು ಮನೆಯಿಂದ ಹೊರಗೆ ಹೋಗಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವ ಬಗ್ಗೆ ಪುರುಷರು ಅಸಮಾಧಾನದ ಭಾವನೆ ತಳೆದಿರುವುದನ್ನು ಗಮನಿಸಲಾಯಿತು. ಮಹಿಳೆಯರು ಮನೆಯಿಂದ ಹೊರಗೆ ಹೋಗುವುದಕ್ಕೂ ಕಷ್ಟ ಪಡಬೇಕಾಗುತ್ತಿತ್ತು. ಇದನ್ನು ಪರಿಹರಿಸಲು, ಪುರುಷರನ್ನು ಒಂದೆಡೆ ಸೇರಿಸಿ, ಸಮಾಖ್ಯಾದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು ಇದರಿಂದ ಅವರುಗಳಿಗೆ ಮಹಿಳೆಯರ ಮತ್ತು ಮಹಿಳಾ ಸಮಾಖ್ಯಾ ಕರ್ನಾಟಕದ ಚಟುವಟಿಕೆಗಳ ಬಗ್ಗೆ ಅರ್ಥ ಮಾಡಿಕೊಳ್ಳುವಂತಾಯಿತು. ಸಮಾಖ್ಯಾದ ಬಗ್ಗೆ ಪರಿಚಯಿಸಿ, ಲಿಂಗ ಸಮಾನತೆ, ಪುರುಷರ ಮತ್ತು ಮಹಿಳೆಯರ ಪಾತ್ರ, ಮಹಿಳೆಯರಿಗೆ ಪುರುಷರ ನೀಡಬೇಕಾದ ಸಹಯೋಗದ ಬಗ್ಗೆ ಈ ತರಬೇತಿ ಕಾರ್ಯಕ್ರಮಗಳಲ್ಲಿ ಮಾಹಿತಿ ನೀಡಲಾಯಿತು.

**ಗಮನಿಸಲಾದ ಪ್ರಮುಖ ಬದಲಾವಣೆಗಳೆಂದರೆ;**

ಬಾಲ್ಯವಿವಾಹವನ್ನು ತಡೆಗಟ್ಟುವುದರ ಬಗ್ಗೆ ನಡೆಸಲಾಗುತ್ತಿದ್ದ ಬೀದಿ ನಾಟಕವನ್ನು ನೋಡುವಂತೆ ಪಂಚಾಯ್ತಿ ಸದಸ್ಯರುಗಳು ಮನೆಮನೆಗೆ ಹೋಗಿ ಗ್ರಾಮಸ್ಥರನ್ನು ಪ್ರೋತ್ಸಾಹಿಸುತ್ತಿದ್ದಾರೆ. ತರಬೇತಿಯಲ್ಲಿ ಭಾಗವಹಿಸಿದ ಪುರುಷರು ಸಂಘದ ಎಲ್ಲ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ತಮ್ಮ ಪತ್ನಿಯರನ್ನು ಪ್ರೊತ್ಸಾಹಿಸುತ್ತಿದ್ದಾರೆ. ಈ ರೀತಿಯ ಸಕಾರಾತ್ಮಕ ಪರಿಣಾಮಗಳಿಂದಾಗಿ ಮುಂಬರುವ ದಿನಗಳಲ್ಲಿ ಎಲ್ಲ ಜಿಲ್ಲೆಗಳಲ್ಲಿ ಗ್ರಾಮ ಮಟ್ಟದ ತಿಳುವಳಿಕೆ ನೀಡುವ ಶಿಬಿರಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಕಿಶೋರಿ ಮೇಳ:

ಫೆಬ್ರವರಿ 2008 ರಲ್ಲಿ 11 ರಿಂದ 18 ವರ್ಷ ವಯಸ್ಸಿನ ಕಿಶೋರಿಗಳಿಗೆ ಎರಡು ದಿನಗಳ ಜಿಲ್ಲಾ ಮಟ್ಟದ ಮೇಳವನ್ನು ನಡೆಸಲಾಯಿತು. ಸುಮಾರು 500 ಕಿಶೋರಿಗಳು ಭಾಗವಹಿಸಿದ್ದರು. ಮಕ್ಕಳ ಹಕ್ಕುಗಳು, ಲಿಂಗದ ಬಗ್ಗೆ ಸಾಮಾನ್ಯ ಜ್ಞಾನ, ವೈಯಕ್ತಿಕ ನೈರ್ಮಲ್ಯ, ಮತ್ತು ಶಿಕ್ಷಣದ ಪ್ರಾಮುಖ್ಯತೆ ಬಗ್ಗೆ ವಿವಿಧ ಅಧಿವೇಶನಗಳಲ್ಲಿ ಸಾಮಗ್ರಿಗಳನ್ನು ಒದಗಿಸಲಾಯಿತು. ಕೆಜಿಬಿವಿ ಮಕ್ಕಳಿಂದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಯಿತು.ಶಿಕ್ಷಣ ಪಡೆಯುವುದರಿಂದ ಆಗುವ ಲಾಭಗಳ ಬಗ್ಗೆ ಮತ್ತು ಶಿಕ್ಷಣವನ್ನು ಮಉಂದುವರೆಸಲು ಇರುವ ಸವಲತ್ತುಗಳ ಬಗ್ಗೆ ಈ ಮೇಳವು ಕಿಶೋರಿಗಳನ್ನು ಪ್ರೇರೇಪಿಸಿರುತ್ತದೆ.

ಮಹಿಳಾ ಸಮಾಖ್ಯಾ ಕರ್ನಾಟಕ ಮತ್ತು ಪುರುಷರು:

ಪ್ರಾರಂಭದಲ್ಲಿ; ಸಂಘರಚನೆ ಮಾಡುವ ಬಗ್ಗೆ ಮತ್ತು ಸಭೆಗಳಿಗಾಗಿ ಹಾಗೂ ಸಂಘದ ಕೆಲಸಕ್ಕಾಗಿ ಮಹಿಳೆಯರು ಹೊರಗೆ ಹೋಗುವ ಬಗ್ಗೆ ಪುರುಷರು ವಿರೋಧ ವ್ಯಕ್ತ ಪಡಿಸಿರುತ್ತಾರೆ. ಮಹಿಳೆಯರು ಮನೆಯಿಂದ ಹೊರಗೆ ಮುಂದೆ ಬಂದು ಯಾವುದೇ ಕೆಲಸ ಮಾಡುವುದಕ್ಕೆ ಅವಕಾಶವಿರಲಿಲ್ಲ. ಮಹಿಳೆಯರು ಮನೆಯ ನಾಲಕು ಗೋಡೆಗಳ ಮಧ್ಯೆ ಇರುವುದೇ ಸರಿ ಎಂಬ ಮನಸ್ತತ್ವ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಇದು ಕಾಳಜಿಯ ವಿಷಯವಾಗಿತ್ತು. ಪುರುಷರನ್ನು ಸೇರಿಸಿಕೊಂಡು ಅವರಿಗೆ ಸಮಾಖ್ಯಾದ ಕೆಲಸದ ಬಗ್ಗೆ ತಿಳುವಳಿಕೆ ನೀಡುವುದರಿಂದ ಮಹಿಳಾ ಸಮಾಖ್ಯಾ ಕರ್ನಾಟಕದ ಕಾರ್ಯಕ್ರಮಗಳನ್ನು ಆಯೋಜಿಸುವುದು ಸುಲಭವಾಗುತ್ತದೆ ಎಂದು ಭಾವಿಸಲಾಯಿತು. ಮಹಿಲೇಯರ ಬಗ್ಗೆ ಪುರುಷರ ಧೋರಣೆಯನ್ನು ಮತ್ತು ಮನಸ್ತತ್ವಗಳನ್ನು ಬದಲಾಯಿಸುವ ದೃಷ್ಟಿಯಿಂದ ಲಿಂಗ ತರಬೇತಿಯನ್ನು ರೂಪಿಸಲಾಯಿತು ಮತ್ತು ಸಕಾರಾತ್ಮಕ ಪರಿಸರ ಸೃಷ್ಟಿಯಾಯಿತು. ಪುರುಷರಿಗಾಗಿಯೇ ವಿಶೇಷ ಲಿಂಗ ತರಬೇತಿಯ ಮಾದರಿಯನ್ನು ರೂಪಿಸಲಾಯಿತು. ಎಲ್ಲ ಜಿಲ್ಲೆಗಳಲ್ಲಿ ಗ್ರಾಮ ಮಟ್ಟದಲ್ಲಿ ತರಬೇತಿಯನ್ನು ನಡೆಸಲಾಯಿತು. ಅದರ ಪರಿಣಾಮವಾಗಿ ಪುರುಷರು ಮಹಿಳೆಯರ ಅಭಿವೃದ್ಧಿ ಚಟುವಟಿಕೆಗಳಿಗೆ ತಮ್ಮ ಸಹಕಾರವನ್ನು ನೀಡುತ್ತಿದ್ದಾರೆ.

ಭವಿಷ್ಯದ ಯೋಜನೆಗಳು:

ಮಹಿಳಾ ಸಮಾಖ್ಯಾ ಕರ್ನಾಟಕವು 2009 ರ ಪ್ರಾರಂಭದಲ್ಲಿ ಇಪ್ಪತ್ತು ವರ್ಷಗಳ ಇರುವಿಕೆಯನ್ನು ಆಚರಿಸಿದೆ. ಈ ಅವಧಿಯಲ್ಲಿ ಮಹಿಳಾ ಸಮಾಖ್ಯಾ ಕರ್ನಾಟಕವು ಮಹಿಳೆಯರಿಗಾಗಿ ಮತ್ತು ಬಾಲಕಿಯರಿಗಾಗಿ ಸಲ್ಲಿಸುತ್ತಿರುವ ಪರಿಣಾಮಕಾರಿ ಸೇವೆಯನ್ನು ಹಲವು ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿರುತ್ತವೆ.

ಮಹಿಳಾ ಸಮಾಖ್ಯಾ ಕರ್ನಾಟಕವು ಮುನ್ನಡೆಯುತ್ತಿದೆ ಮತ್ತು 2009-10 ನೇ ಸಾಲಿನಲ್ಲಿ ಹೆಚ್ಚು ಜಿಲ್ಲೆಗಳಲ್ಲಿ ಕಾರ್ಯವನ್ನು ವಿಸ್ತರಿಸುವ ಯೋಜನೆಯನ್ನು ಹಾಕಿ ಕೊಂಡಿದೆ. ಇನ್ನೂ ಹೆಚ್ಚಿನ ಹೊಸರೀತಿಯ ಕಾರ್ಯಕ್ರಮಗಳನ್ನೂ ಸಹ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ.

ಮಹಿಳಾ ಸಮಾಖ್ಯಾಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ:

(ಲಕ್ಷಗಳಲ್ಲಿ)

| ವರ್ಷ | ಹಂಚಿಕೆ ಮಾಡಲಾದ ಮೊತ್ತ | ವೆಚ್ಚ | ಉಳಿಕೆ |
|---|---|---|---|
| 2004–05 | 300.86 | 298.79 | 18.05 |
| 2005–06 | 455.00 | 388.39 | 86.26 |
| 2006–07 | 400.00 | 475.71 | 21.45 |
| 2007–08 | 550.00 | 509.12 | 65.51 |
| 2008–09 | 576.70 | 597.33 | 47.14 |

## ಪದವಿ ಪೂರ್ವ ಶಿಕ್ಷಣ

ಪದವಿಪೂರ್ವ ಶಿಕ್ಷಣವು ಅತ್ಯಂತ ಮಹತ್ವಪೂರ್ಣವಾದ ಘಟ್ಟವಾಗಿದೆ. ಈ ಹಂತದಲ್ಲಿಯೇ ಉನ್ನತ ಶಿಕ್ಷಣಕ್ಕೆ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಅಡಿಪಾಯವಾಗಿರುತ್ತದೆ ಹಾಗೂ ಈ ಹಂತದಲ್ಲಿ ವಿದ್ಯಾರ್ಥಿಗಳು ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

ಇಂದು ಉನ್ನತ ಶಿಕ್ಷಣವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಜನರಿಗೆ ಮುಟ್ಟುತ್ತಿದ್ದು ಈ ನಿಟ್ಟಿನಲ್ಲಿ ಉತ್ತಮ ಫಲಿತಾಂಶವೂ ಸಹ ಕಾಣಲಾಗುತ್ತಿದೆ. ಈ ಕಾರಣಗಳಿಗಾಗಿ ಪದವಿ ಪೂರ್ವ ಶಿಕ್ಷಣಕ್ಕೆ ಇನ್ನಿಲ್ಲದ ಬೇಡಿಕೆಯಾಗಿದೆ. ಪದವಿ ಪೂರ್ವ ಶಿಕ್ಷಣವನ್ನು ಬೋಧನೆ ಮಾಡುವ ಎಲ್ಲಾ ಕಾಲೇಜುಗಳು ಆಡಳಿತಾತ್ಮಕವಾಗಿ ಶೈಕ್ಷಣಿಕವಾಗಿ ಮತ್ತು ಪರೀಕ್ಷಾ ಕಾರ್ಯದಲ್ಲಿ ಪದವಿ ಪೂರ್ವ ಶಿಕ್ಷಣ ವ್ಯಾಪ್ತಿಗೆ ಒಳಪಟ್ಟಿವೆ.

1970ಕ್ಕಿಂತ ಪೂರ್ವದಲ್ಲಿ ಒಂದು ವರ್ಷದ ಪಿಯುಸಿ ಇದ್ದು, ಅದು ಪದವಿ ತರಗತಿಗಳನ್ನು ಬೋಧಿಸುವ ಕಾಲೇಜುಗಳ ಅವಿಭಾಜ್ಯ ಅಂಗವಾಗಿತ್ತು. 1971ರಲ್ಲಿ ಪದವಿ ಪೂರ್ವ ಶಿಕ್ಷಣ ಮಂಡಳಿ ಸ್ಥಾಪಿತವಾಯಿತು. 1988ರಲ್ಲಿ ಮಂಡಳಿಯನ್ನು ರದ್ದುಪಡಿಸಿ, 1992ರಲ್ಲಿ ಇಲಾಖೆಯನ್ನಾಗಿ ಪರಿವರ್ತಿಸಲಾಯಿತು. ಪದವಿ ಪೂರ್ವ ಶಿಕ್ಷಣವನ್ನು ಬೋಧಿಸುವ ಎಲ್ಲಾ ಕಾಲೇಜುಗಳನ್ನು ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ ಹಾಗೂ ಪರೀಕ್ಷಾ ಕಾರ್ಯಕ್ಕಾಗಿ ಇಲಾಖೆಯ ವ್ಯಾಪ್ತಿಗೆ ಒಳಪಡಿಸಲಾಯಿತು. ಅಂದರೆ, ಪದವಿ ಪೂರ್ವ ಶಿಕ್ಷಣದ ಜವಾಬ್ದಾರಿ ಇಲಾಖೆಯ ಮೇಲೆ ಇರುತ್ತದೆ.

**ಶೈಕ್ಷಣಿಕ ಚಟುವಟಿಕೆಗಳು:**

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕ ವಿಭಾಗವಿದ್ದು, ಜಂಟಿ ನಿರ್ದೇಶಕರು ಈ ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಆಯುಕ್ತರ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಇಬ್ಬರು ಸಹಾಯಕ ನಿರ್ದೇಶಕರು ಮತ್ತು ಮೂವರು ಶಾಖಾಧಿಕಾರಿಗಳು ಈ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಆರು ಶಿಕ್ಷಕರ ತರಬೇತಿ ಕಾಲೇಜುಗಳಿವೆ. ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಶೋಧನಾ ಮತ್ತು ತರಬೇತಿ ಕೇಂದ್ರವನ್ನು ಒದಗಿಸುವ ನಿಟ್ಟಿನಲ್ಲಿ ಆರು ಸಿಟಿಇ ಕೇಂದ್ರಗಳಲ್ಲಿ ಪದವಿ ಪೂರ್ವ ಶಿಕ್ಷಣಕ್ಕೆ ಪ್ರತ್ಯೇಕವಾದ ವಿಭಾಗವನ್ನು ಪ್ರಾರಂಭಿಸಲು ಸರ್ಕಾರವು ಆದೇಶ ಸಂಖ್ಯೆ: ಇಡಿ 180 ಡಿಪಿಐ 2008 ದಿನಾಂಕ: 17/05/2008ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರನ್ನು ಒಂದು ರೀಡರ್ ಹುದ್ದೆಗೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರನ್ನು ಎರಡು ಉಪನ್ಯಾಸಕರ ಹುದ್ದೆಗಳಿಗೆ ನೇಮಕ ಮಾಡಿ ತುಂಬಲು ಆದೇಶಿಸಿದೆ. ಸರ್ಕಾರದ ಈ ಆದೇಶದಿಂದ ತರಬೇತಿ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಿದಂತಾಗಿದೆ.

ಶೈಕ್ಷಣಿಕ ಶಾಖೆಯ ಪ್ರಮುಖ ಕಾರ್ಯಗಳು ಕೆಳಕಂಡಂತಿವೆ:

<u>ಪಠ್ಯಕ್ರಮ ಸಿದ್ಧಪಡಿಸುವಿಕೆ:</u>

ಪದವಿ ಪೂರ್ವ ಹಂತದಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ಕಾಲಕಾಲಕ್ಕೆ ಅನುಗುಣವಾಗಿ ಪಠ್ಯಕ್ರಮವನ್ನು ಸಿದ್ದಪಡಿಸುವ ಜವಾಬ್ದಾರಿಯನ್ನು ಶೈಕ್ಷಣಿಕ ವಿಭಾಗ ಹೊಂದಿದೆ. ಪಠ್ಯಕ್ರಮದಲ್ಲಿ ಸಾಮಾನ್ಯವಾಗಿ 8 ರಿಂದ 10 ವರ್ಷಕ್ಕೊಮ್ಮೆ ಬದಲಾವಣೆ ಮಾಡಲಾಗುತ್ತದೆ. ಪ್ರೌಢ ಶಿಕ್ಷಣ ಹಂತದಲ್ಲಿ ಪಠ್ಯಕ್ರಮ ಬದಲಾವಣೆಗೊಂಡ ನಂತರ ಇಲ್ಲಿ ಪಠ್ಯಕ್ರಮ ಬದಲಾಗುತ್ತದೆ. ಪಠ್ಯಕ್ರಮವನ್ನು ಪರಿಷ್ಕರಣೆ ಮಾಡುವಾಗ ಎಲ್ಲಾ ಹಿಡುವಳಿದಾರರನ್ನು ಪರಿಗಣನೆಗೆ ತೆಗೆದುಕೊಂಡು ಪ್ರಜಾಸತ್ತಾತ್ಮಕವಾಗಿ ರಚಿಸಲಾಗುತ್ತದೆ. ಎಲ್ಲರ ಭಾವನೆಗಳಿಗೆ ಸ್ಪಂಧಿಸಿ ಅಃಖಅ/ ಖಅಖಇ ಮತ್ತು ನೆರೆ ರಾಜ್ಯಗಳ ಮತ್ತು ರಾಷ್ಟ್ರಮಟ್ಟದಲ್ಲಿರುವ ಪಠ್ಯಕ್ರಮಗಳನ್ನು ಗಮನಕ್ಕೆ ತೆಗೆದುಕೊಂಡು ಆ ಪಠ್ಯಕ್ರಮಗಳಿಗೆ ಸರಿಸಮಾನವಾಗಿ ನಮ್ಮ ರಾಜ್ಯದ ಭಿನ್ನತೆ ಮತ್ತು ಪರಿಸರಕ್ಕೆ ಹೊಂದುವ ಪಠ್ಯಕ್ರಮವನ್ನು ಸಿದ್ದಪಡಿಸಲಾಗಿದೆ. 2004–05ರಲ್ಲಿ ಈಗಿನ ಪಠ್ಯಕ್ರಮವನ್ನು ಪರಿಷ್ಕರಿಸಲಾಯಿತು. ಪಠ್ಯಕ್ರಮದ ವಿಶೇಷ ಲಕ್ಷಣಗಳು:

- ಎಲ್ಲಾ ವಿಷಯಗಳಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸಲಾಗಿದೆ.
- ಪ್ರಶ್ನೆಪತ್ರಿಕೆಗಳಲ್ಲಿ ಏಕ ರೂಪತೆ ತರಲಾಗಿದೆ. ಪ್ರಶ್ನೆಪತ್ರಿಕೆಯ ಸ್ವರೂಪ ಮತ್ತು ನೀಲ ನಕ್ಷೆಯನ್ನು ಪಠ್ಯಕ್ರಮದಲ್ಲಿ ಕೊಡಲಾಗಿದೆ.
- ಭಾಷಾ ವಿಷಯಗಳಲ್ಲಿ ಅಭ್ಯಾಸ ಪುಸ್ತಕಗಳನ್ನು ಜಾರಿಗೆ ತರಲಾಗಿದೆ.

- ➢ ಅಸೈನ್‌ಮೆಂಟ್, ಪ್ರಾಜೆಕ್ಟ್ ಮತ್ತು ಚಟುವಟಿಕೆಗಳನ್ನು ಪ್ರತಿ ವಿಷಯದಲ್ಲಿ ಅಳವಡಿಸಲಾಗಿದೆ.
- ➢ ಕಲಾ ವಿಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ "ಬೇಸಿಕ್ ಮ್ಯಾಥ್ಸ್"ನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ.

<u>ದಾಖಲಾತಿ ಪ್ರಕ್ರಿಯೆಗೆ ವೇಳಾಪಟ್ಟಿ ಸಿದ್ಧಪಡಿಸುವಿಕೆ:</u>

ಪ್ರಥಮ ಪಿಯುಸಿ ತರಗತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ವಿವರವಾದ ಮಾರ್ಗಸೂಚಿಯನ್ನು ಇಲಾಖೆ ಸಿದ್ಧಪಡಿಸಿದೆ. ದಾಖಲಾತಿ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತನ ತರಲಾಗಿದೆ. ಪ್ರತಿ ವರ್ಷ ದಾಖಲಾತಿ ವೇಳಾಪಟ್ಟಿಯನ್ನು ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗುವ ಸಮಯದಲ್ಲಿ ಬಿಡುಗಡೆ ಮಾಡಲಾಗುವುದು. ಇದರ ಪ್ರಮುಖ ಅಂಶಗಳು:

- ಎಲ್ಲಾ ಕಾಲೇಜಿನವರು ರೂ. 15ಕ್ಕೆ ಪ್ರವೇಶ ಅರ್ಜಿಗಳನ್ನು ಮಾರಾಟ ಮಾಡಬೇಕು.
- ಪರಿಚಯ ಪುಸ್ತಕ ಕೊಂಡುಕೊಳ್ಳುವುದು ಕಡ್ಡಾಯವಿರುವುದಿಲ್ಲ.
- ನಿಗಧಿತ ವೇಳಾಪಟ್ಟಿಯ ಪ್ರಕಾರ ಅರ್ಜಿಗಳನ್ನು ವಿತರಿಸುವುದು, ಹಿಂದಕ್ಕೆ ಪಡೆಯುವುದು, ಪಟ್ಟಿ ಪ್ರಕಟಣೆ, ಶುಲ್ಕ ಕಟ್ಟಲು ಸಮಯ ಇತ್ಯಾದಿ ಪ್ರಕ್ರಿಯೆ ನಡೆಯಬೇಕು. ವಿದ್ಯಾರ್ಥಿಗಳಿಂದ ಪಡೆಯುವ ಶುಲ್ಕದ ವಿವರಗಳನ್ನು ಕೊಡಲಾಗಿದೆ.
- ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ದಾಖಲಾತಿಯ ಪ್ರಕ್ರಿಯೆಯ ವಿವರಗಳನ್ನು ಕಾಲೇಜಿನ ವೆಬ್‌ಸೈಟ್‌ನಲ್ಲಿ ಹಾಕಲಾಗುತ್ತಿದೆ.

<u>ಪ್ರಥಮ ಪಿಯುಸಿ ದಾಖಲಾತಿ ಪ್ರಕ್ರಿಯೆ:</u>

ಪದವಿ ಪೂರ್ವ ತಗತಿಗಳಿಗೆ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರೆಸುತ್ತಿರುವುದು ಪ್ರೋತ್ಸಾಹಕ ಲಕ್ಷಣವಾಗಿದೆ. ವಿದ್ಯಾರ್ಥಿಗಳು ವಿವಿಧ ಕಾಲೇಜುಗಳಿಗೆ ತಮ್ಮ ಪ್ರತಿಭೆಗೆ ತಕ್ಕಂತೆ ದಾಖಲಾಗುವ ಅನುವು ಮಾಡಿಕೊಡುವ ಉದ್ದೇಶದಿಂದ ಇಲಾಖೆಯು ದಾಖಲಾತಿ ಮಾರ್ಗಸೂಚಿಯನ್ನು ಸಿದ್ಧಪಡಿಸಿ ಎಲ್ಲಾ ಪದವಿ ಪೂರ್ವ ಕಾಲೇಜುಗಳಿಗೆ ಕಳುಹಿಸಿಕೊಡುತ್ತದೆ. ಪಾರದರ್ಶಕವಾದ ಈ ಮಾರ್ಗಸೂಚಿಯನ್ನು ಎಲ್ಲಾ ಕಾಲೇಜಿನವರು ಅನುಸರಿಸುತ್ತಿರುವುದರಿಂದ ದಾಖಲಾತಿ ಪ್ರಕ್ರಿಯೆ ಸುಗುಮವಾಗಿ ನಡೆಯುತ್ತಿದೆ. ಸರ್ಕಾರವು ಇಗಧಿಪಡಿಸಿರುವ ಮೀಸಲಾತಿ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ. ದಾಖಲಾತಿ ಪ್ರಕ್ರಿಯೆಯು ನಿಷ್ಪಕ್ಷ ಮತ್ತು ಪಾರದರ್ಶಕವಾಗಿದೆ.

<u>ಪದವಿ ಪೂರ್ವ ಕಾಲೇಜುಗಳ ವಿವರ</u> :

| | | |
|---|---|---|
| ಒಟ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು | – | 1200 |
| 800ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯಿರುವ ಕಾಲೇಜುಗಳು – | 80 | |
| 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯಿರುವ ಕಾಲೇಜುಗಳು – | 194 | |
| ಆಟದ ಮೈದಾನ ಇರುವ ಕಾಲೇಜುಗಳು | – | 397 |
| ಪಾಳಿ ಪದ್ಧತಿಯಲ್ಲಿ ನಡೆಯುತ್ತಿರುವ ಕಾಲೇಜುಗಳು | – | 257 |
| 240ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯಿರುವ ಕಾಲೇಜುಗಳು – | 361 | |
| ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು | – | 68 |

ಕಳೆದ ಐದು ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ:

| ವರ್ಷ | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
|---|---|---|
| 2004 | 3,72,058 | 3,25,480 |
| 2005 | 4,12,240 | 3,40,296 |
| 2006 | 4,27,988 | 3,61,807 |
| 2007 | 5,29,879 | 4,33,183 |
| 2008 | 5,34,430 | 4,34,425 |

ಪ್ರತಿ ವರ್ಷ ಶೈಕ್ಷಣಿಕ ಶಾಖೆ ಪ್ರಾಂಶುಪಾಲರಿಗೆ/ಉಪನ್ಯಾಸಕರಿಗೆ ಪ್ರಶಿಕ್ಷಣ ಶಿಬಿರಗಳನ್ನು ಏರ್ಪಡಿಸುತ್ತಿದೆ. ಪ್ರಮುಖ ಕಾರ್ಯಕ್ರಮಗಳು ಈ ಕೆಳಕಂಡಂತಿವೆ:

- ಎಲ್ಲಾ ಜಿಲ್ಲೆಗಳಲ್ಲಿ ಪ್ರಮುಖ ವಿಷಯಗಳಲ್ಲಿ ಜಿಲ್ಲಾ ಉಪ ನಿರ್ದೇಶಕರ ನೇತೃತ್ವದಲ್ಲಿ ಪ್ರಶಿಕ್ಷಣ ಶಿಬಿರವನ್ನು ಜಿಲ್ಲಾ ಕೇಂದ್ರಗಳಲ್ಲಿ ನಡೆಸುವುದು.
- ರಾಜ್ಯ ಮಟ್ಟದಲ್ಲಿ 5 ದಿನಗಳ ಪ್ರಶಿಕ್ಷಣ ಶಿಬಿರವನ್ನು ವಿವಿಧ ಕಡೆ ದಸರಾ ರಜೆಯಲ್ಲಿ ಏರ್ಪಡಿಸಲಾಗುವುದು.
- ದೂರ ಸಂಪರ್ಕ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಏಕ ಮುಖ ಮತ್ತು ದ್ವಿಮುಖ ರೀತಿಯಲ್ಲಿ ಏರ್ಪಡಿಸುವುದು.
- ಹೊಸದಾಗಿ ನೇಮಕಗೊಂಡ ಉಪನ್ಯಾಸಕರಿಗೆ ೨ಟಿಜಣಥಿಣುಠಟ ಣಡಿಚಿಟುಟಿರ ನಡೆಸುವುದು.
- ಬಡ್ತಿ ಹೊಂದಿದ ಪ್ರಾಂಶುಪಾಲರಿಗೆ ಆಡಳಿತ ತರಬೇತಿ ನೀಡುವುದು.
- ಮಾದರಿ ಪ್ರಶ್ನೆಪತ್ರಿಕೆ ಸಿದ್ದಪಡಿಸುವಿಕೆಯಲ್ಲಿ ಉಪನ್ಯಾಸಕರಿಗೆ ತರಬೇತಿ ನೀಡುವುದು.

ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆಗೆ ಅನುಮತಿ, ಸಂಯೋಜನೆ ಬದಲಾವಣೆಗೆ ಅನುಮತಿ, ಅರ್ಹತಾ ಪತ್ರ ಮತ್ತು ವಲಸೆ ಪತ್ರ ನೀಡುವುದು. ವಿದ್ಯಾರ್ಥಿಗಳಿಗೆ ಕಾಲೇಜು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ವಿಭಾಗೀಯ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡುವುದು.

ವಿದ್ಯಾರ್ಥಿಗಳಿಗೆ ಕಾಲೇಜು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ವಿಭಾಗೀಯ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಏರ್ಪಡಿಸುವುದು. ಎಸ್.ಜಿ.ಎಫ್.ಐ ನಿಂದ ಏರ್ಪಡಿಸಲಾಗುವ ರಾಷ್ಟ್ರ ಮಟ್ಟದ ಸ್ಪರ್ಧೆಗಳಿಗೆ ರಾಜ್ಯ ಮಟ್ಟದ ತಂಡಗಳನ್ನು ಕಳುಹಿಸುವುದು.

ಮಾನ್ಯತೆ ಕೋಶ :

ಪದವಿ ಪೂರ್ವ ಕಾಲೇಜುಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದಾರ ನೀತಿಯನ್ನು ಅನುಸರಿಸುತ್ತಿದೆ. ಮಾನ್ಯ ರಾಷ್ಟ್ರಪತಿಗಳ 11 ಅಂಶಗಳಲ್ಲಿ ತಿಳಿಸಿರುವಂತೆ ವಿಜ್ಞಾನ ಕಾಲೇಜುಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡಲಾಗುತ್ತಿದೆ. 2008-09ನೇ ಶೈಕ್ಷಣಿಕ ಸಾಲಿನಲ್ಲಿ ಈ ಕೆಳಕಂಡಂತೆ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ.

ಹೊಸ ಖಾಸಗಿ ಪದವಿ ಪೂರ್ವ ಕಾಲೇಜುಗಳು :

| ಕ್ರ. ಸಂ. | ವರ್ಷ | ಮಂಜೂರಾದ ಪದವಿ ಪೂರ್ವ ಕಾಲೇಜುಗಳು |
|---|---|---|
| 01 | 2004-05 | 103 |

| | | |
|---|---|---|
| 02 | 2005–06 | 216 |
| 03 | 2006–07 | 275 |
| 04 | 2007–08 | 217 |
| 05 | 2008–09 | 95 |
| | **ಒಟ್ಟು** | **906** |

ಹೊಸ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾರಂಭ:

| ಕ್ರ ಸಂ | ವರ್ಷ | ಮಂಜೂರಾದ ಪದವಿ ಪೂರ್ವ ಕಾಲೇಜುಗಳು |
|---|---|---|
| 01 | 1996–97 | 60 |
| 02 | 2005–06 | 22 |
| 03 | 2006–07 | 199 |
| 04 | 2007–08 | 293 |
| 05 | 2008–09 | – |
| | **ಒಟ್ಟು** | **574** |

ಕರ್ನಾಟಕ ರಾಜ್ಯವು ಕೃಷಿ ಪ್ರಧಾನವಾದ ರಾಜ್ಯ. ಇದು ಕೃಷಿ ಕೈಗಾರಿಕೆ ಹಾಗೂ ಇತರೆ ಔದ್ಯೋಗಿಕ ಶ್ರಮಿಕರಿಂದ ತುಂಬಿರುವ ನಾಡು. ಇಲ್ಲಿ ಬೃಹತ್ ಪ್ರಮಾಣದ ಬಡತನವಿದ್ದು ಪ್ರತಿಯೊಬ್ಬರು ಆರ್ಥಿಕ ಅವಲಂಬನೆಗೆ ದುಡಿಯುವುದು ಅಗತ್ಯವಾಗಿರುತ್ತದೆ. ಈ ಕಾರಣದಿಂದ ಅನೇಕರು ವಿದ್ಯೆ ಕಲಿಯಲಾಗುವುದಿಲ್ಲ. ಭಾರತದ ಸಂವಿಧಾನದ 45ನೇ ವಿಧಿಯಂತೆ ಶಾಲೆಗೆ ಸೇರಿ ವಿದ್ಯೆ ಕಲಿಯಲಾಗದವರು ಹಾಗು ಮಧ್ಯದಲ್ಲಿ ಶಾಲೆ ಬಿಟ್ಟ ವಯಸ್ಕರಿಗೆ ಶಿಕ್ಷಣ ಒದಗಿಸುವ ಸಲುವಾಗಿ 15 ರಿಂದ 35 ವರ್ಷ ವಯೋಮಾನದ ಎಲ್ಲಾ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸುವ ಸಲುವಾಗಿ ಲೋಕ ಶಿಕ್ಷಣ ನಿರ್ದೇಶನಾಲಯ ಕಾರ್ಯ ಪ್ರವೃತ್ತವಾಗಿದೆ. ಕರ್ನಾಟಕ ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮವು ಸ್ವಾತಂತ್ರ ಪೂರ್ವದಿಂದಲೂ (1943) ಜಾರಿಯಲ್ಲಿದೆ.

**ಈ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಸಮರ್ಪಕವಾಗಿ ಜಾರಿಗೊಳಿಸುತ್ತಿರುವ ನಿರ್ದೇಶನಾಲಯದಲ್ಲಿನ ಹಾಗೂ ರಾಜ್ಯದ ಜಿಲ್ಲಾ ಮಟ್ಟದ ಕಚೇರಿಗಳಲ್ಲಿನ ಸಿಬ್ಬಂದಿ ವಿವರ ಈ ಕೆಳಕಂಡಂತಿದೆ**

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾದ ಹುದ್ದೆ | ಕಾರ್ಯನಿರ್ವಹಿಸು ತ್ತಿರುವವರು | ಖಾಲಿ ಹುದ್ದೆ |
|---|---|---|---|---|
| 1 | ನಿರ್ದೇಶಕರು | 1 | 1 | 0 |
| 2 | ಉಪ ನಿರ್ದೇಶಕರು (ಆಡಳಿತ) | 1 | 1 | 0 |
| 3 | ಉಪ ನಿರ್ದೇಶಕರು (ಕಾರ್ಯಕ್ರಮ) | 1 | 1 | 0 |
| 4 | ಸಹಾಯಕ ನಿರ್ದೇಶಕರು (ಆಡಳಿತ) | 1 | 1 | 0 |
| 5 | ಸಹಾಯಕ ನಿರ್ದೇಶಕರು (ಕಾರ್ಯಕ್ರಮ) | | | |

**2008-09 ನೇ ಸಾಲಿನಲ್ಲಿ ರಾಜ್ಯದಲ್ಲಿ ಜಾರಿಗೊಳಿಸಲಾದ ವಿವಿಧ ಸಾಕ್ಷರತಾ ಕಾರ್ಯಕ್ರಮಗಳ ವಿವರ:**

1. **ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ:**

ಔಪಚಾರಿಕ, ಅನೌಪಚಾರಿಕ ಮತ್ತು ಪ್ರಾಸಂಗಿಕ ಶಿಕ್ಷಣ ಪಡೆದ ಜನರ ನಿರಂತರ ಕಲಿಕೆ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಿ ಕೊಡುವ ಶಿಕ್ಷಣವೇ ಮುಂದುವರಿಕೆ ಶಿಕ್ಷಣ. ರಾಜ್ಯದಲ್ಲಿ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಮೂಲಕ 2000-01 ರಿಂದ ಜಾರಿಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ 16571 ಸಿ.ಇ.ಸಿ. ಹಾಗೂ 1737 ಎನ್.ಸಿ.ಇ.ಸಿ. ಒಟ್ಟು 18208 ಕೇಂದ್ರಗಳಿವೆ.

ಇದು 5 ವರ್ಷಗಳ ಕಾಲ ಮಿತಿ ಕಾರ್ಯಕ್ರಮವಾಗಿದ್ದು ಮೊದಲ 3 ವರ್ಷಗಳಿಗೆ ಕೇಂದ್ರ ಸರ್ಕಾರವು ಶೇಕಡ 100 ರಷ್ಟು ಅನುದಾನ ನೀಡುತ್ತದೆ. ಉಳಿದ 2 ವರ್ಷಗಳ ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇಕಡ 50 ರಷ್ಟು ಅನುದಾನವನ್ನು ನೀಡುತ್ತದೆ ನಂತರ ಜನ ಸಮುದಾಯವೇ ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. 2008-09ನೇ ಸಾಲಿನಲ್ಲಿ ರಾಜ್ಯದಲ್ಲಿ 26 ಜಿಲ್ಲೆಗಳಲ್ಲಿ 27 ಯೋಜನೆಗಳ ಮೂಲಕ ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ ಜಾರಿಯಲ್ಲಿರುತ್ತದೆ.

ಈ ಕಾರ್ಯಕ್ರಮದಲ್ಲಿ 2008-09ನೇ ಸಾಲಿನಲ್ಲಿ 2.00 ಲಕ್ಷ ಅನಕ್ಷರಸ್ಥರು ಕಲಿಕೆಗೆ ದಾಖಲಾಗಿ ಕಲಿಯುತ್ತಿದ್ದಾರೆ. 1.91 ಜನರು ಪ್ರಾಥಮಿಕೆ ಭಾಗ-3ನ್ನು ಪೂರ್ಣಗೊಳಿಸಿರುವರು. ಇವರಲ್ಲಿ 0.43 ಲಕ್ಷ ಪುರಷರು ಹಾಗೂ 1.48 ಲಕ್ಷ ಮಹಿಳೆಯರಾಗಿರುತ್ತಾರೆ. ಕೇಂದ್ರ ಸರ್ಕಾರದ ಆದೇಶದನ್ವಯ 31.03.2009ಕ್ಕೆ ಈ ಯೋಜನೆ ಅಂತ್ಯಗೊಂಡಿದೆ.

2. **ಬಾಕಿ ಉಳಿದ ಅನಕ್ಷರಸ್ಥರ ಸಾಕ್ಷರತಾ ಕಾರ್ಯಕ್ರಮ (ಕಖಖ) :**

ಸಾಕ್ಷರತಾ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಬಾಕಿ

ಉಳಿದ ಅನಕ್ಷರಸ್ಥರ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. 17 ಜಿಲ್ಲೆಗಳ ಯೋಜನಾ ಪ್ರಸ್ತಾವನೆಯನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರಕ್ಕೆ ಸಲ್ಲಿಸಲಾಗಿ 14 ಜಿಲ್ಲೆಗಳ ಯೋಜನಾ ಪ್ರಸ್ತಾವನೆಗಳು 2005-06ನೇ ಸಾಲಿನಲ್ಲಿ ಮಂಜೂರಾತಿ ಪಡೆದಿವೆ. ಮಂಜೂರಾದ ಕಲಿಕಾರ್ಥಿಗಳ ತಲಾ ಅನುದಾನ ಕಡಿಮೆ ಆಗಿದ್ದರಿಂದ 2007-08ನೇ ಸಾಲಿನಲ್ಲಿ ಪರಿಷ್ಕೃತ ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿ ರೂ.130ರಂತೆ ತಲಾ ಅನುದಾನ ಮಂಜೂರಾತಿಯನ್ನು ಪಡೆಯಲಾಗಿದೆ. ಈ ಕಾರ್ಯಕ್ರಮವು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹ ಭಾಗಿತ್ವದಲ್ಲಿ ಜಾರಿಗೊಳಿಸಬೇಕಾಗಿದ್ದು, ಕೇಂದ್ರ ಸರ್ಕಾರವು 2/3 ಭಾಗ ರಾಜ್ಯ ಸರ್ಕಾರವು 1/3 ಭಾಗ ಭರಿಸ ಬೇಕಾಗಿರುತ್ತದೆ. 2008-09 ನೇ ಸಾಲಿನಲ್ಲಿ ಈ ಯೋಜನೆಯಡಿ ಪಿಆರ್ಐ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ ಕಾರ್ಯಕ್ರಮವನ್ನು ನಡೆಸಲಾಗಿದೆ. 2008-09ರಲ್ಲಿ ಈ ಯೋಜನೆಯಡಿ 13.29 ಲಕ್ಷ ಕಲಿಕಾರ್ಥಿಗಳು ದಾಖಲಾಗಿದ್ದು, 6.70 ಲಕ್ಷ, ಪ್ರಾಥಮಿಕೆಯ ಭಾಗ-3ರ ಕಲಿಕೆ ಪೂರ್ಣಗೊಳಿಸಿದ್ದು, ಯೋಜನೆ ಮುಂದುವರೆದಿದೆ, ಬಾಹ್ಯ ಮೌಲ್ಯಮಾಪನ ಕಾರ್ಯ ಪ್ರಗತಿಯಲ್ಲಿದೆ.

### 3. <u>ವಿದ್ಯಾರ್ಥಿಗಳ ಮೂಲಕ ಸಾಕ್ಷರತೆ:</u>

ಅನಕ್ಷರತೆ ನಿವಾರಣೆಗೆ ವಿದ್ಯಾರ್ಥಿ ಯುವ ಜನರಲ್ಲಿರುವ ಸೇವಾ ಮನೋಭಾವವನ್ನು ಬಳಸಿಕೊಳ್ಳುವ ದೃಷ್ಟಿಯಿಂದ ಕರ್ನಾಟಕದಲ್ಲಿ ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮವನ್ನು 2005-06ನೇ ಸಾಲಿನಲ್ಲಿ ಆರಂಭಿಸಲಾಗಿದೆ. ವಿದ್ಯಾರ್ಥಿಗಳ ಮನೆ ಮತ್ತು ನೆರೆ-ಹೊರೆಯ ಅನಕ್ಷರಸ್ಥರನ್ನು ಕಲಿಸಲು ಪ್ರೇರೇಪಿಸಲಾಗಿದೆ. ವಿದ್ಯಾರ್ಥಿಗಳು ಕಲಿಯುತ್ತಾ ಕಲಿಸುವ ಕೌಶಲವನ್ನು ಪಡೆಯಲು ಅವಕಾಶ ಮಾಡಲಾಗಿದೆ. ಈ ಕಾರ್ಯಕ್ರಮ 2008-09ನೇ ಸಾಲಿನಲ್ಲೂ ಮುಂದುವರೆದಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನು ನೀಡಲು ಯೋಚಿಸಿದ್ದು, ಅದರಂತೆ ಪ್ರೌಢಶಾಲೆ 8ನೇ, 9ನೇ ತರಗತಿ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಪಠ್ಯ ವಿಷಯದ ಆಂತರಿಕ ಮೌಲ್ಯಮಾಪನಕ್ಕೆ ನಿಗದಿಪಡಿಸಿರುವ ಅಂಕಗಳನ್ನು ಗಳಿಸಲು ತಮ್ಮ ಸಾಮರ್ಥ್ಯದಿಂದ ಇಬ್ಬರು ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ 10 ಅಂಕಗಳನ್ನು ನೀಡಲಾಗುವುದು. 2008-09ನೇ ಸಾಲಿನಲ್ಲಿ 2.75 ಲಕ್ಷ ಅನಕ್ಷರಸ್ಥರು ಕಲಿಕೆಗೆ ದಾಖಲಾಗಿ 1.25 ಲಕ್ಷ ಜನರು ಪ್ರಾಥಮಿಕೆ ಭಾಗ-3ನ್ನು ಪೂರ್ಣಗೊಳಿಸಿರುವರು.

### 4. <u>ವಿಶೇಷ ಘಟಕ ಯೋಜನೆ (ಎಸ್‌ಸಿಪಿ)</u>
### ಗಿರಿಜನ ಉಪಯೋಜನೆ (ಟಿಎಸ್‌ಪಿ)

ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಜನರ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯಡಿಯಲ್ಲಿ ವಿಶೇಷ ಶಿಬಿರ ಸಾಕ್ಷರತಾ ಕಾರ್ಯಕ್ರಮವನ್ನು 2007-08ನೇ ಸಾಲಿನಲ್ಲಿ ಜಾರಿಗೊಳಿಸಲಾಗಿದೆ. ಈ ಕಾರ್ಯಕ್ರಮದ ಕ್ರಿಯಾಯೋಜನೆಯನ್ವಯ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಜನರು ವಾಸಿಸುವ ಗ್ರಾಮ, ಕಾಲೋನಿ ಹಟ್ಟಿ, ತಾಂಡ, ಪಾಳ್ಯಗಳಲ್ಲಿ 60 ದಿವಸಗಳ ಶಿಬಿರವನ್ನು ನಡೆಸುವುದಾಗಿದೆ. ಪ್ರತಿ ಶಿಬಿರದಲ್ಲಿ 15-35 ವಯೋಮಿತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 50 ಜನ ಅನಕ್ಷರಸ್ಥರು ಓದು ಬರಹ ಕಲಿತು ಸಾಕ್ಷರರಾಗಲು ಅವಕಾಶ ಕಲ್ಪಿಸಲಾಯಿತು. 10 ಜನ ಕಲಿಕಾರ್ಥಿಗಳಿಗೆ ಕಲಿಸಲು ಒಬ್ಬ ಸ್ವಯಂ ಸೇವಕರಿಗೆ ತರಬೇತಿ ನೀಡಲಾಯಿತು. 5 ಜನ ಸ್ವಯಂ ಸೇವಕರು ಶಿಬಿರದಲ್ಲಿ 05 ತಂಡಗಳಲ್ಲಿ 50 ಜನ ಕಲಿಕಾರ್ಥಿಗಳಿಗೆ ಪ್ರತಿ ದಿನ ಸಂಜೆ 3 ಗಂಟೆಗಳ ಕಾಲ ಕಲಿಕಾ ಮತ್ತು ಬೋಧನಾ ಪ್ರಕ್ರಿಯೆ ನಡೆಸಿರುವರು. 60 ದಿನಗಳ ಒಳಗೆ ಕಲಿಕೆಯನ್ನು ಪೂರ್ಣಗೊಳಿಸಲು ಅಥವಾ ಅಗತ್ಯವಾದರೆ ಕಲಿಕೆ ಅವಧಿಯನ್ನು ವಿಸ್ತರಿಸಲು ಅವಕಾಶ ಮಾಡಿದೆ.

ಎಸ್.ಸಿ.ಪಿ/ಟಿ.ಎಸ್.ಪಿ.ಯೋಜನೆಯಲ್ಲಿ ಪ್ರತಿ ಶಿಬಿರಕ್ಕೆ ರೂ.29851/-ಗಳನ್ನು ಭರಿಸಲು ರಾಜ್ಯ ಸರ್ಕಾರ ಅವಕಾಶ ಮಾಡಿದೆ. 2008-09ನೇ ಸಾಲಿನಲ್ಲಿ ಎಸ್‌ಸಿಪಿ ಯೋಜನೆಯಡಿಯಲ್ಲಿ 670 ಶಿಬಿರಗಳ ಗುರಿ ಹೊಂದಿದ್ದು 33500 ಅನಕ್ಷರಸ್ಥರನ್ನು ಸಾಕ್ಷರರನ್ನಾಗಿಸಬೇಕಾಗಿದ್ದು, ಈ ಶಿಬಿರಗಳಲ್ಲಿ 33500 ಜನ ಪರಿಶಿಷ್ಟ ಜಾತಿಯ ಅನಕ್ಷರಸ್ಥರು ದಾಖಲಾಗಿ 29656 ಜನ ಪ್ರಾಥಮಿಕೆ ಭಾಗ 3ನ್ನು ಪೂರ್ಣಗೊಳಿಸಿರುತ್ತಾರೆ. ಇದರಲ್ಲಿ ಮಹಿಳೆಯರು 23079 ಮತ್ತು ಪುರುಷರು 6577.

2008–09ನೇ ಸಾಲಿನಲ್ಲಿ ಟಿಎಸ್‌ಪಿ ಯೋಜನೆಯಡಿಯಲ್ಲಿ 335 ಶಿಬಿರಗಳ ಗುರಿ ಹೊಂದಿದ್ದು ಈ ಶಿಬಿರಗಳಲ್ಲಿ 16700 ಜನ ಪರಿಶಿಷ್ಟ ಪಂಗಡದ ಅನಕ್ಷರಸ್ಥರು ದಾಖಲಾಗಿ 15019 ಜನ ಪ್ರಾಥಮಿಕೆ ಭಾಗ 3ನ್ನು ಪೂರ್ಣಗೊಳಿಸಿರುತ್ತಾರೆ. ಇದರಲ್ಲಿ ಪುರುಷರು 4375 ಹಾಗೂ ಮಹಿಳೆಯರು 10644. ಈ ಪ್ರಾಥಮಿಕೆ ಭಾಗ–3ರನ್ನು ಪೂರ್ಣಗೊಳಿಸಿದ ಕಲಿಕಾರ್ಥಿಗಳ ಕಲಿಕಾ ಸಾಮಾರ್ಥ್ಯವನ್ನು ಅಳೆಯಲು ಸಾಕ್ಷರ ಚಾವಡಿ ಬಾಹ್ಯ ಮೌಲ್ಯಮಾಪನ ವ್ಯವಸ್ಥೆ ಮಾಡಲಾಗಿದೆ.

5. **ಬಾನುಲಿ ಪಾಠ:**

2007–08ರಲ್ಲಿ ಪ್ರಾರಂಭಿಸಿದ ಆಕಾಶವಾಣಿ ಮೂಲಕ ಬಾನುಲಿ ಪಾಠ ಮರು ಪ್ರಸಾರ ಕಾರ್ಯಕ್ರಮವನ್ನು 2008–09ನೇ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಈ ಸಾಲಿನಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರ ಮತ್ತು ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ ಕಲಿಕಾರ್ಥಿಗಳು 25 ಎಪಿಸೋಡ್‌ಗಳಲ್ಲಿ 28.08.2008 ರಿಂದ 18.09.2008ರ ವರೆಗೆ ಪ್ರಸಾರವಾದ ಬಾನುಲಿ ಪಾಠಗಳ ಪ್ರಯೋಜನ ಪಡೆದಿದ್ದು ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ.

6. **ಎಜುಸ್ಯಾಟ್ ಮೂಲಕ ಸಾಕ್ಷರತಾ ಕಾರ್ಯಕ್ರಮ:**

ಎಜುಸ್ಯಾಟ್ ಮೂಲಕ ಸಾಕ್ಷರತಾ ಕಾರ್ಯಕ್ರಮ ಪ್ರಸಾರಮಾಡಲು ಸಾಫ್ಟ್‌ವೇರ್ ತಯಾರಿಸಿ 30 ಎಪಿಸೋಡ್‌ಗಳನ್ನು ಸಿದ್ಧಪಡಿಸಿದ್ದು ಗುಲ್ಬರ್ಗಾ ಮತ್ತು ಚಾಮರಾಜನಗರ ಜಿಲ್ಲೆ ಹಾಗೂ ಕೆಲವು ಜಿಲ್ಲೆಗಳ ಕೆ.ಜಿ.ಬಿ.ವಿ. ಶಾಲೆಗಳಲ್ಲಿ ದಿನಾಂಕ 03.03.2009 ರಿಂದ 09.04.2009 ರವರೆಗೆ ಪ್ರಸಾರ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಕಲಿಕಾರ್ಥಿಗಳು ಉತ್ತಮ ಪ್ರತಿಕ್ರಿಯೆ ನೀಡಿರುತ್ತಾರೆ.

7. **ಉಪಗ್ರಹ ಆಧಾರಿತ ಸಂವಾದ ಕಾರ್ಯಕ್ರಮ:**

ಎಜುಸ್ಯಾಟ್ ಮೂಲಕ ಸಂವಾದ ಕಾರ್ಯಕ್ರಮ ದಿನಾಂಕ 06.10.2008 ರಂದು ನಡೆಸಲಾಗಿದ್ದು ಎನ್.ಎಲ್.ಎಂ. ನಿಂದ ಈ ಬಗ್ಗೆ ಪ್ರಶಂಸಿರುತ್ತಾರೆ ಹಾಗೂ ಎನ್‌ಎಲ್‌ಎಂನ ಅಧಿಕಾರಿಗಳು ಡಿಎಸ್‌ಇಆರ್‌ಟಿ ಸ್ಟುಡಿಯೋದಲ್ಲಿ ಹಾಜರಿದ್ದು ಕಲಿಕಾರ್ಥಿಗಳು ಸಂಯೋಜಕರು ಹಾಗೂ ಸಾಕ್ಷರತಾ ಕಾರ್ಯಕರ್ತರೊಂದಿಗೆ ಸಂವಾದ ನಡೆಸಿ ಕಾರ್ಯಕ್ರಮದಲ್ಲಿ ಹೊಸತನ ಮೂಡಲು ಕಾರಣವಾಗಿರುತ್ತದೆ.

8. **ಕಂಪ್ಯೂಟರ್ ಮೂಲಕ ಸಾಕ್ಷರತೆಯ ಪ್ರಯೋಗ:**

ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿ ಅನಕ್ಷರಸ್ಥರು ಓದು–ಬರಹ ಲೆಕ್ಕಾಚಾರ ಕಲಿಯಲು ಅವಕಾಶ ಮಾಡಲಾಗಿದೆ. ಬಾರವ್ವ ಕಲಿಯಾಕ ಪುಸ್ತಕವನ್ನು ಆಧಾರಿಸಿ ಸಾಫ್ಟ್‌ವೇರ್ ಸಿದ್ದಪಡಿಸಲಾಗಿದೆ. ಕಂಪ್ಯೂಟರ್‌ನ ಮೌಸ್‌ನ್ನು ಬಳಸಿ ಅಕ್ಷರ ಮತ್ತು ಪದಗಳ ಮೇಲೆ ಕರ್ಸರ್ ಕ್ಲಿಕ್ ಮಾಡಿದರೆ ಆಯಾ ಅಕ್ಷರ ಮತ್ತು ಪದದ ಉಚ್ಚಾರಣೆಯಾಗುತ್ತದೆ. ಅಕ್ಷರ ಮತ್ತು ಪದಗಳ ಉಚ್ಚಾರಣೆಯಿಂದ ಕಂಪ್ಯೂಟರ್ ಸ್ಕ್ರೀನಿನ ಮೇಲೆ ಮೂಡಿಬರುವ ಅಕ್ಷರ ಮತ್ತು ಪದಗಳನ್ನು ಕಲಿಕಾರ್ಥಿಗಳು ಸ್ವಯಂ ಕಲಿಯಲು ಅವಕಾಶವಿದೆ. ಕನ್ನಡ ಅಕ್ಷರಗಳ, ಸ್ವರ ಚಿಹ್ನೆ ಹೊತ್ತಕ್ಷರಗಳನ್ನು ಸೇರಿಸಿ ಬರೆಯುವ ಕ್ರಮವನ್ನು ಸಾಫ್ಟ್‌ವೇರ್ ಮೂಲಕ ಸರಳವಾಗಿ ಪರಿಚಯಿಸಲಾಗಿದೆ. ಕಲಿಕಾರ್ಥಿಗಳು ಮೌಸ್‌ನಿಂದ ಅಕ್ಷರ ಬರೆದರೆ ಕಂಪ್ಯೂಟರ್ ಪರದೆ ಮೇಲೆ ಬರೆದ ಅಕ್ಷರ ಮೂಡುತ್ತದೆ. ಹೀಗಾಗಿ ಮೌಸ್ ಬಳಸಿ ಅಕ್ಷರ ಅಭ್ಯಾಸ ಮಾಡಬಹುದಾಗಿದೆ. ಪ್ರತಿ ಪಾಠಕ್ಕೆ ಸಂಬಂಧಿಸಿದಂತೆ ಎನಿಮೇಷನ್ ಚಿತ್ರಗಳನ್ನು ಅಳವಡಿಸಲಾಗಿದೆ. ರಾಜ್ಯದಲ್ಲಿ ಪ್ರಾಯೋಗಿಕವಾಗಿ ಬೆಂಗಳೂರು ಸಿಟಿ ಸಾಕ್ಷರತಾ ಕಾರ್ಯಕ್ರಮ ಅಡಿಯಲ್ಲಿನ ಸಂಪಂಗಿ ರಾಮನಗರ ಮತ್ತು ಜೈಭುವನೇಶ್ವರಿನಗರಗಳ ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ ಕಂಪ್ಯೂಟರ್ ಮೂಲಕ ಸಾಕ್ಷರತಾ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಈ ಕೇಂದ್ರಗಳಲ್ಲಿ ತಲಾ 15 ಜನ ಕಲಿಕಾರ್ಥಿಗಳಂತೆ ಕಲಿಕೆಗೆ ಹಾಜರಾಗಿರುತ್ತಾರೆ.

**ಇತರೆ ವಿವರಗಳು:**

1. **ದೂರು ನಿವಾರಣಾ ವಿಭಾಗ:**

ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ದೂರು ನಿವಾರಣಾ ವಿಭಾಗವು ಕರ್ತವ್ಯ

ನಿರ್ವಹಿಸುತ್ತಿದ್ದು. ಪ್ರತಿ ಮಾಹೆಯ ಮೊದಲನೆ ಶನಿವಾರ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ.

**2. <u>ಇ–ಆಡಳಿತ ವಿಭಾಗ:</u>**

ಅ. ಲೋಕ ಶಿಕ್ಷಣ ನಿರ್ದೇಶನಾಲಯದಲ್ಲಿ ಇ–ಆಡಳಿತ ವಿಭಾಗ ಕರ್ತವ್ಯ ನಿರ್ವಹಿಸುತ್ತಿದ್ದು ಎಲ್ಲಾ ಜಿಲ್ಲೆಗಳಿಂದ ವಿವಿಧ ಕಾರ್ಯಕ್ರಮದ ಮಾಹಿತಿಗಳನ್ನು ಇಂಟರ್ ನೆಟ್ ಮುಖಾಂತರ ತರಿಸಿ ವಿಷಯಗಳನ್ನು ಶೀಘ್ರ ವಿಲೇವಾರಿ ಮಾಡಲಾಗುತ್ತಿದೆ ಘಜಭುಣಜ ಅಭಿವೃದ್ಧಿಗೊಳಿಸಲಾಗಿದೆ ಹಾಗೂ ಇಂದೀಕರಿಸಲಾಗುತ್ತಿದೆ. ಎಲ್ಲಾ ಜಿಲ್ಲೆಗಳಿಗೆ ಃಖಓಐ ಃಡಿಂಚಿಜ ಃಚಿಟಜ ಖಟಣಜಡಿಟಜಣ ಸೇವೆ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲಾ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಹಾಗೂ ನಿರ್ದೇಶನಾಲಯಕ್ಕೆ ಇ–ಟಚಿಟ ವಿಳಾಸಗಳನ್ನು ಸಿದ್ದಪಡಿಸಿ ವರದಿಗಳನ್ನು ಇ–ಟಚಿಟ ಮತ್ತು ಫ್ಯಾಕ್ಸ್ ಮೂಲಕ ನೀಡಲಾಗುತ್ತಿದೆ.

**3. <u>ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಗಳು:</u>**

ರಾಜ್ಯದಲ್ಲಿ 32 ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ. (3 ಶಿಕ್ಷಣ ಜಿಲ್ಲೆಗಳು ಸೇರಿದಂತೆ) ಜಿ.ವ.ಶಿ.ಅಧಿಕಾರಿಗಳು ಜಿಲ್ಲೆಗಳಲ್ಲಿ ಸಾಕ್ಷರತಾ ಕಾರ್ಯಕ್ರಮ ಜಾರಿಗೊಳಿಸುವ ಸಮನ್ವಯಾಧಿಕಾರಿಗಳಾಗಿರುತ್ತಾರೆ.

**4. <u>ಜಿಲ್ಲಾ ಸಾಕ್ಷರತಾ ಸಮಿತಿ:</u>**

ಜಿಲ್ಲೆಗಳಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವ ಸಲುವಾಗಿ ಜಿಲ್ಲಾ ಸಾಕ್ಷರತಾ ಸಮಿತಿ ಸ್ಥಾಪಿಸಿದ್ದು, ಇವು ನೋಂದಾಯಿತ ಸಂಸ್ಥೆಗಳು ಆಗಿರುತ್ತದೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇದರ ಗೌರವಾಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯ್ತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಸ್ಥಳೀಯ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

**5. <u>ಕರ್ನಾಟಕ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರ:</u>**

ಕರ್ನಾಟಕ ರಾಜ್ಯ ಸಾಕ್ಷರತಾ ಮಿಶನ್ ಪ್ರಾಧಿಕಾರವು ಒಂದು ನೊಂದಾಯಿತ, ಸ್ವಾಯತ್ತ ಸಂಸ್ಥೆಯಾಗಿದ್ದು ರಾಜ್ಯದಲ್ಲಿ ಸಾಕ್ಷರತಾ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆಮಾಡಿ, ಮೇಲುಸ್ತುವಾರಿ ಮಾಡುತ್ತದೆ. ಲೋಕ ಶಿಕ್ಷಣ ಇಲಾಖೆಯ ನಿರ್ದೇಶಕರು ಈ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

**6. <u>ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ:</u>**

ಲೋಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ವಿಸರ್ಜಿತ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಯ 16 ವಿದ್ಯಾಪೀಠಗಳ ಪೈಕಿ 13 ವಿದ್ಯಾಪೀಠಗಳಲ್ಲಿ 2008–09ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದ 556 ಯುವಕ ಮತ್ತು ಯುವತಿಯರಿಗೆ, ಮಧ್ಯಮಾವಧಿ ಹಾಗೂ 572 ಯುವಕ ಯುವತಿಯರಿಗೆ ಅಲ್ಪಾವಧಿ ತರಬೇತಿ ನೀಡಿದೆ. ಸ್ಪೋಕನ್ ಇಂಗ್ಲೀಷ್ ಕೋರ್ಸ್, ಡ್ರೆಸ್ ಮೇಕಿಂಗ್ ಮತ್ತು ಎಂಬ್ರಾಯಿಡರಿ, ಕಂಪ್ಯೂಟರ್ ರಿಪೇರಿ ಮುಂತಾದ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ವಿದ್ಯಾರ್ಥಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಕೊಡಿಸುವಲ್ಲಿ ಈ ಸಂಸ್ಥೆ ನೆರವಾಗುತ್ತದೆ.

**ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಹುದ್ದೆಗಳ ವಿವರ (ರದ್ದಾದ ಹುದ್ದೆಗಳ ಹೊರತುಪಡಿಸಿ)**

| ಕ್ರ. ಸಂ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು (ಪ್ರಸ್ತುತ ಇರುವ ಹುದ್ದೆಗಳಿಗೆ) | ಕಾರ್ಯ ನಿರ್ವಹಿಸುತ್ತಿರುವವರು | ಖಾಲಿ |
| --- | --- | --- | --- | --- |

| | | | | |
|---|---|---|---|---|
| 1 | ಪ್ರಧಾನ ಕಾರ್ಯದರ್ಶಿ | 01 | 01 | – |
| 2 | ಆಚಾರ್ಯರು/ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ/ ಸಂಶೋಧಕರು/ಮ್ಯಾನೇಜರ್ ಪ್ರಧಾನ ಸಂಪಾದಕರು | 17 | 08 | 09 |
| 3 | ಶೀಘ್ರಲಿಪಿಗಾರರು | 02 | – | 02 |
| 4 | ಪ್ರ.ದ.ಸ/ಶಿಕ್ಷಕರು | 41 | 17 | 24 |
| 5 | ದ್ವಿ.ದ.ಸ./ಮೇಲ್ವಿಚಾರಕರು | 116 | 63 | 53 |
| 6 | ತಾಂತ್ರಿಕರು | 04 | – | 04 |
| 7 | ವಾಹನ ಚಾಲಕರು | 11 | 03 | 08 |
| 8 | ಅನುಚರರು/ಕಂಪೋಸಿಟರ್/ಬೈಂಡರ್/ ಅಡಿಗೆಯವರು | 24 | 12 | 12 |
| 9 | ಡಿ. ಗುಂಪು | 46 | 15 | 31 |
| | **ಒಟ್ಟು** | **262** | **119** | **143** |

**ಲೋಕ ಶಿಕ್ಷಣ ನಿರ್ದೇಶನಾಲಯದ ಕೇಂದ್ರ ಕಛೇರಿ ಹಾಗೂ ಜಿಲ್ಲಾ ಮಟ್ಟದ ಕಛೇರಿಯಲ್ಲಿನ ಹುದ್ದೆಗಳ ವಿವರ**

| **ಕ್ರ. ಸಂ.** | **ಹುದ್ದೆಗಳ ವಿವರ** | **ಮಂಜೂರಾದ ಹುದ್ದೆಗಳು** | **ಕಾರ್ಯ ನಿರ್ವಹಿಸುತ್ತಿರುವವರು** | **ಖಾಲಿ** |
|---|---|---|---|---|
| 1 | ನಿರ್ದೇಶಕರು | 01 | 01 | – |
| 2 | ಉಪ ನಿರ್ದೇಶಕರು (ಆಡಳಿತ) | 01 | 01 | – |
| 3 | ಉಪ ನಿರ್ದೇಶಕರು (ಕಾರ್ಯಕ್ರಮ) | 01 | 01 | – |
| 4 | ಸಹಾಯಕ ನಿರ್ದೇಶಕರು (ಆಡಳಿತ) | 01 | 01 | – |
| 5 | ಸಹಾಯಕ ನಿರ್ದೇಶಕರು (ಕಾರ್ಯಕ್ರಮ) | 01 | 01 | – |
| 6 | ಸಹಾಯಕ ನಿರ್ದೇಶಕರು (ಯೋಜನೆ) | 01 | 01 | – |
| 7 | ಸಹಾಯಕ ನಿರ್ದೇಶಕರು (ಎಂ&ಇ) | 01 | 01 | – |
| 8 | ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು | 32 | 26 | 06 |
| 9 | ಅಧೀಕ್ಷಕರು (ಆಡಳಿತ) | 01 | 01 | – |
| 10 | ಅಧೀಕ್ಷಕರು (ಲೆಕ್ಕ) | 01 | 01 | – |
| | ಕಾರ್ಯಕ್ರಮ ಸಹಾಯಕರು | 32 | 25 | 07 |
| 11 | ಸಹಾಯಕ ಸಾಂಖ್ಯಿಕ ಅಧಿಕಾರಿ | 04 | 03 | 01 |
| | ಶೀಘ್ರಲಿಪಿಗಾರರು | 05 | 01 | 04 |
| 12 | ಪ್ರ.ದ.ಸ. | 12 | 05 | 7 |
| 13 | ದ್ವಿ.ದ.ಸ. | 03 | 03 | – |
| | ದ್ವಿ.ದ.ಸ./ಬೆರಳಚ್ಚುಗಾರರು | 24 | 02 | 22 |

| | | | | |
|---|---|---|---|---|
| | ಬೆರಳಚ್ಚುಗಾರರು | 08 | – | 08 |
| 14 | ಸಿ.ಸಿ.ಟಿ. | 02 | 01 | 01 |
| 15 | ವಾಹನ ಚಾಲಕರು | 11 | 09 | 02 |
| 16 | ಡಿ–ಗ್ರೂಪ್ | 36 | 27 | 9 |
| **ಒಟ್ಟು** | | **178** | **112** | **66** |

## ವೃತ್ತಿ ಶಿಕ್ಷಣ

ವೃತ್ತಿ ಶಿಕ್ಷಣವು ಕರ್ನಾಟಕ ರಾಜ್ಯದಲ್ಲಿ **1977–78** ರಿಂದ ಪದವಿ ಪೂರ್ವ ಹಂತದಲ್ಲಿ

ಜಾರಿಗೆ ಬಂದಿದೆ. **1988** ರಲ್ಲಿ ಕೇಂದ್ರ ಯೋಜನಾ ಅಡಿಯಲ್ಲಿ ವಿಲೀನಗೊಳಿಸಿ ಅಭಿವೃದ್ಧಿ ಪಡಿಸಲಾಯಿತು. **1996** ರಿಂದ ಕೇಂದ್ರ ಸರ್ಕಾರವು ಅನುದಾನವನ್ನು ಸ್ಥಗಿತ ಗೊಳಿಸಿದ್ದರಿಂದ ಪೂರ್ಣ ಆರ್ಥಿಕ ಹೊರೆ ರಾಜ್ಯ ಸರ್ಕಾರದಿಂದಲೇ ಭರಿಸಲಾಗುತ್ತಿದೆ. ರಾಜ್ಯ ಸರ್ಕಾರದ ವತಿಯಿಂದ ಪ್ರಾರಂಭದಲ್ಲಿ ಪ್ರಾರಂಭಿಸಿದ ಕೋರ್ಸ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಯವರಲ್ಲಿ ಪೂರ್ಣ ಕಾರ್ಯಭಾರವಿದ್ದ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ **162** ವೃತ್ತಿ ಶಿಕ್ಷಣ ಸಿಬ್ಬಂದಿಯನ್ನು ಸಕ್ರಮಗೊಳಿಸಲಾಗಿದೆ. ಸಕ್ರಮಗೊಂಡ ಸಿಬ್ಬಂದಿಯವರನ್ನು ಹೊರತು ಪಡಿಸಿ ಅರೆಕಾಲಿಕ ಸಿಬ್ಬಂದಿಗೆ ವರ್ಷದಲ್ಲಿ **08** ತಿಂಗಳಿಗೆ ಮಾತ್ರ ನೀಡುವ ಸಂಭಾವನೆಯನ್ನು **12** ತಿಂಗಳಿಗೆ ಹಂಚಿಕೆ ಮಾಡಿ ನೀಡಲಾಗುತ್ತಿದೆ. ಸದ್ಯ **29** ಟ್ರೇಡ್‌ಗಳನ್ನು ಈ ಕೆಳಕಂಡ ಕಾಲೇಜುಗಳಲ್ಲಿ ನಡೆಸಲಾಗುತ್ತಿದೆ.

| | |
|---|---|
| ಸರ್ಕಾರಿ ಪದವಿ ಪೂರ್ವ ಕಾಲೇಜು | 193 |
| ಖಾಸಗಿ ಪದವಿ ಪೂರ್ವ ಕಾಲೇಜು | 309 |
| ಸರ್ಕಾರಿ ಪ್ರಥಮ ದರ್ಜೆ ಕಾಲೇಜು | 05 |
| ಖಾಸಗಿ ಪ್ರಥಮ ದರ್ಜೆ ಕಾಲೇಜು | 04 |
| ಸರ್ಕಾರಿ ಪಾಲಿಟೆಕ್ನಿಕ್ | 02 |
| ಖಾಸಗಿ ಪಾಲಿಟೆಕ್ನಿಕ್ | 13 |
| ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು | 29 |
| ***ಒಟ್ಟು ಕಾಲೇಜುಗಳ ಸಂಖ್ಯೆ*** | 555 |

**ವಿದ್ಯಾರ್ಥಿಗಳ ಸಂಖ್ಯೆ** : ಪ್ರಥಮ ವರ್ಷ – **31,943**

ದ್ವಿತೀಯ ವರ್ಷ – **31681**

ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರರ ಸಿಬ್ಬಂದಿಯವರ ವಿವರ:–

| **ವಿವರ** | **ಅರೆಕಾಲಿಕ ಸಿಬ್ಬಂದಿ** | **ಸಕ್ರಮಗೊಂಡ ಸಿಬ್ಬಂದಿ** |
|---|---|---|
| ಉಪನ್ಯಾಸಕರು/ಭಾಷಾ ಉಪನ್ಯಾಸಕರು | **2091** | 64 |
| ಶ್ರಮಿಕ ಶಿಕ್ಷಕರು | **1732** | 29 |
| ಬೋಧಕೇತರ ವರ್ಗ(ಸಿಬ್ಬಂದಿ) | **317** | **17** |
| ಡಿ ದರ್ಜೆ | 147 | 06 |
| ಒಟ್ಟು | 4287 | 116 |

**ವೃತ್ತಿ ಶಿಕ್ಷಣದ ಪ್ರಮುಖ ಉದ್ದೇಶಗಳು**

1) ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಿ ಲಾಭದಾಯಕವಾದ ಸ್ವ–ಉದ್ಯೋಗ ಕೈಗೊಳ್ಳಲು ಪ್ರೇರೇಪಿಸುವುದು.
2) ಸಂಘಟಿತ ಹಾಗೂ ಅಸಂಘಟಿತ ಮಧ್ಯಸ್ಥರ ಉದ್ದಿಮೆಗಳಿಗೆ ಅಗತ್ಯವಾಗಿ ಬೇಕಾಗುವ ನಿಪುಣ ಕೆಲಸಗಾರರು ಸಿಗುವಂತೆ ನೋಡಿಕೊಳ್ಳುವುದು.
3) ಯಾವುದೇ ರೀತಿಯ ಆಸಕ್ತಿ ಇಲ್ಲವೇ ಉದ್ದೇಶವಿಲ್ಲದೆ ಉನ್ನತ ಶಿಕ್ಷಣಕ್ಕೆ ಹೋಗಬಯಸುವವರಿಗೆ ಪರ್ಯಾಯ ವ್ಯವಸ್ಥೆ ಮಾಡುವುದು.
4) ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳನ್ನು ಸ್ವ–ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುವುದು.
5) ಉನ್ನತ ಶಿಕ್ಷಣಕ್ಕೆ ಇರುವ ಅನಾವಶ್ಯಕ ಒತ್ತಡ ಕಡಿಮೆಗೊಳಿಸುವದು.
6) ವಿದ್ಯಾರ್ಥಿಗಳಲ್ಲಿರುವ ಕುಶಲತೆಯನ್ನು ಗುರುತಿಸಿ ಪರಿಣಿತಿ ಪಡೆಯುವಂತೆ ಮಾಡುವುದು.

ಕರ್ನಾಟಕ ರಾಜ್ಯದಲ್ಲಿ ವೃತ್ತಿ ಶಿಕ್ಷಣಕ್ಕೆ ಪ್ರತ್ಯೇಕ ನಿರ್ದೇಶನಾಲಯವಿದ್ದು, ನಿರ್ದೇಶನಾಲಯದ ನಿರ್ದೇಶಕರ ಉಸ್ತುವಾರಿ ಮತ್ತು ಮಾರ್ಗದರ್ಶನದಲ್ಲಿ ಇಲಾಖೆ ಎಲ್ಲಾ ರೀತಿಯ ಆಡಳಿತ, ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯಗಳು ನಡೆಯುತ್ತವೆ.

2008–2009ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಲ್ಲಿ ವೃತ್ತಿ ಶಿಕ್ಷಣ ನಿರ್ದೇಶನಾಲಯಕ್ಕೆ ಶೈಕ್ಷಣಿಕ ಚಟುವಟಿಕೆ ವೆಚ್ಚಕ್ಕಾಗಿ ರೂ. 40 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಮೊತ್ತದಲ್ಲಿ ಈ ಕೆಳಗೆ ನಮೂದಿಸಿರುವ ವಿವಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2008–2009ನೇ ಸಾಲಿನಲ್ಲಿ ; 25 ಜಿಲ್ಲೆಗಳಿಂದ 2143 ಅಭ್ಯರ್ಥಿಗಳನ್ನು ವಿವಿಧ ಸ್ಥಳಗಳಲ್ಲಿನ ಅಪ್ರೆಂಟಿಸ್‌ಶಿಪ್ ತರಬೇತಿಗಾಗಿ ಕೇಂದ್ರಿಕೃತ ಆಯ್ಕೆ ಕಾರ್ಯಕ್ರಮ ನಡೆಸಲಾಯಿತು. ಜಿಲ್ಲೆಗಳ ಮತ್ತು ಆಯ್ಕೆಯಾದವರ ವಿವರಗಳು ಇಂತಿವೆ.

| ಕ್ರ. ಸಂ. | ಕಾರ್ಯಕ್ರಮ ನಡೆಸಿದ ಜಿಲ್ಲೆಗಳು | ಕಾರ್ಯಕ್ರಮ ನಡೆದ ಸ್ಥಳ ಮತ್ತು ದಿನಾಂಕ | ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ | ತರಬೇತಿಗೆ ಆಯ್ಕೆಯಾದವರ ಸಂಖ್ಯೆ |
|---|---|---|---|---|
| 01 | ಧಾರವಾಡ | 12–09–2008 | 256 | 184 |
| 02 | ಗದಗ್ | 19–09–2008 | 163 | 061 |
| 03 | ಬೆಳಗಾಂ | 26–09–2008 | 341 | 197 |
| 04 | ತುಮಕೂರು | 05–11–2008 | 150 | 040 |
| 05 | ಮಂಗಳೂರು | 05–11–2008 | 180 | 034 |
| 06 | ಕೋಲಾರ ಚಿಕ್ಕಬಳ್ಳಾಪುರ | 07–11–2008 | 274 | 018 |
| 07 | ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು (ಗ್ರಾ) ಜಿಲ್ಲೆ ರಾಮನಗರ | 07–11–2008 | 242 | 190 |
| 08 | ಮಂಡ್ಯ | 04–11–2008 | 358 | 105 |
| 09 | ಮೈಸೂರು, ಚಾಮರಾಜನಗರ ಕೊಡಗು | 21–11–2008 | 240 | 145 |
| 10 | ಹಾಸನ | 21–11–2008 | 256 | 128 |
| 11 | ಚಿಕ್ಕಮಗಳೂರು | 21–11–2008 | 091 | 026 |
| 12 | ಬಳ್ಳಾರಿ, ಕೊಪ್ಪಳ | 19–12–2008 | 081 | 061 |
| 13 | ದಾವಣಗೆರೆ ಚಿತ್ರದುರ್ಗ | 19–12–2008 | 761 | 627 |
| 14 | ಶಿವಮೊಗ್ಗ | 21–12–2008 | 091 | 025 |
| 15 | ಬಿಜಾಪುರ | 02–01–2009 | 347 | 170 |
| 16 | ಕಾರವಾರ | 02–01–2009 | 120 | 049 |
| 17 | ಗುಲ್ಬರ್ಗಾ | 03–02–2009 | 249 | 083 |
| | **ಒಟ್ಟು** | | **4200** | **2143** |

2008–2009ನೇ ಸಾಲಿನಲ್ಲಿ ಕಖಖಅಖಗಇ ಭೂಪಾಲರವರು ಕರ್ನಾಟಕ ವೃತ್ತಿ ಶಿಕ್ಷಣ ಇಲಾಖೆಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು.

1) ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರು ಮತ್ತು ಹಿರಿಯ ಉಪನ್ಯಾಸಕರಿಗೆ ದಿನಾಂಕ:15.12.2008 ರಿಂದ 17.12.2008ರ ವರೆಗೆ ಭೂಪಾಲ್‌ನಲ್ಲಿ 03 ದಿವಸಗಳ ತರಬೇತಿ ಕಾರ್ಯಕ್ರಮವನ್ನು

ಹಮ್ಮಿಕೊಂಡಿದ್ದು, ಇದರಲ್ಲಿ ಕರ್ನಾಟಕ ರಾಜ್ಯದಿಂದ 10 ಪ್ರಾಂಶುಪಾಲರು ಹಾಗೂ ಉಪನ್ಯಾಸಕರು ಭಾಗವಹಿಸಿರುತ್ತಾರೆ.

2) ದಿನಾಂಕ 15.01.2009 ರಂದು ರಾಷ್ಟ್ರಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಮಟ್ಟದ ವೃತ್ತಿ ಶಿಕ್ಷಣ ನಿರ್ದೇಶಕರಿಗಾಗಿ ಭೂಪಾಲಿನಲ್ಲಿ ಒಂದು ದಿವಸದ ಒಚಿಟಿಚಿರಿಂಜಟಜಟಣ ಖಟಿಜಿಂಡಿಟಚಿಣುಂಟಿ, ಥಿಣಜಟ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಎಲ್. ಎಂ. ಕಾನಡೆಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

3) ಗೋವಾದಲ್ಲಿ 3 ದಿವಸಗಳ ವೃತ್ತಿ ಕೌಸಲ್ಯಾಬಿವೃದ್ಧಿ ಸಮ್ಮೇಳನವನ್ನು ಏರ್ಪಡಿಸಲಾಗಿದ್ದು, ಇದರಲ್ಲಿ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರನ್ನೊಳಗೊಂಡಂತೆ ಒಟ್ಟು 20 ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಪ್ರಯೋಜನ ಹೊಂದಿದ್ದಾರೆ.

4) ದಿನಾಂಕ: 03.02.2009 ರಿಂದ 07.02.2009 ರ ವರೆಗೆ ಕರ್ನಾಟಕ ರಾಜ್ಯದ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ತಮಿಳುನಾಡಿನ ನಾಗರಕೊಯಿಲ್ ನಲ್ಲಿ 4 ದಿವಸಗಳ ಪುನಶ್ಚೇತನ ಕಾರ್ಯಾಗಾರವನ್ನು ಏರ್ಪಡಿಸಿದ್ದರು. ಇದರಲ್ಲಿ ರಾಜ್ಯದ ಒಟ್ಟು 8 ಮಂದಿ ಉಪನ್ಯಾಸಕರು ಭಾಗವಹಿಸಿದ್ದರು.

5) ದಿನಾಂಕ: 17.02.2009 ರಿಂದ 18.02.2009 ರ ವರೆಗೆ ರಾಷ್ಟ್ರದ ಎಲ್ಲಾ ರಾಜ್ಯಗಳ ವೃತ್ತಿ ಶಿಕ್ಷಣ ಇಲಾಖೆಯ ನಿರ್ದೇಶಕರುಗಳಿಗೆ ಭೂಪಾಲಿನಲ್ಲಿ 2 ದಿವಸಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಇಲಾಖಾ ನಿರ್ದೇಶಕರಾದ ಶ್ರೀ ಎಲ್. ಎಂ. ಕಾನಡೆಯವರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ವೃತ್ತಿ ಶಿಕ್ಷಣದ ಕೌಶಲ್ಯಭಿವೃದ್ಧಿಗಾಗಿ ನೂತನ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ.

6) ದಿನಾಂಕ: 13.01.2009 ರಿಂದ 19.01.2009 ರವರೆಗೆ ಗ್ವಾಲಿಯರ್‌ನಲ್ಲಿ ರಾಷ್ಟ್ರ ಮಟ್ಟದಲ್ಲಿ ಖಿಜಥಣುಟಝ ಆಝುರಂಟುಟಿರ ಕೋರ್ಸಿನ ಉಪನ್ಯಾಸಕರಿಗೆ ಪುನಶ್ಚೇತನ ಕಾರ್ಯಾಗಾರವನ್ನು ಏರ್ಪಡಿಸಿದ್ದರು. ಇದರಲ್ಲಿ ಕರ್ನಾಟಕ ರಾಜ್ಯದಿಂದ 10 ಉಪನ್ಯಾಸಕರು ಭಾಗವಹಿಸಿ ಉತ್ತಮ ಪ್ರಯೋಜನಗಳನ್ನು ಪಡೆದಿದ್ದಾರೆ.

**6) ಮೈಕೋಬಾಷ್ ಸಹಯೋಗದೊಂದಿಗೆ ಏರ್ಪಡಿಸಿರುವ ಪವರ್‌ಟೂಲ್ಸ್ ವಿಶೇಷ ವಸ್ತು ಪ್ರದರ್ಶನ ಮತ್ತು ಕಾರ್ಯಾಗಾರ 2008-09:-**

ನಾಲ್ಕು ಕಂದಾಯ ವಿಭಾಗಗಳಲ್ಲಿ ಎಸ್.ಐ.ವಿ.ಇ. ವಿಭಾಗದಿಂದ ಆಧುನಿಕ ಮೈಕೋ ಬಾಷ್ ಉಪಕರಣಗಳ ಬಳಕೆ ಮತ್ತು ಉಪಯೋಗದ ಬಗ್ಗೆ ವಸ್ತು ಪ್ರಕರ್ಶನ ಮತ್ತು ಕಾರ್ಯಾಗಾರ ನಡೆಸಲಾಯಿತು.

1) ದಿನಾಂಕ: 04-02-2009 ರಂದು ಸರ್ಕಾರಿ ಪದವಿ ಪೂರ್ವ ಕಾಲೇಜು, ಪೀಣ್ಯ, ಬೆಂಗಳೂರು ವೃತ್ತಿ ಶಿಕ್ಷಣ ಉಪನ್ಯಾಸಕರ ಒಂದು ದಿನದ ಪವರ್ ಟೂಲ್ಸ್ ವಿಶೇಷ ವಸ್ತು ಪ್ರದರ್ಶನ ಮತ್ತು ಕಾರ್ಯಾಗಾರ ಏರ್ಪಡಿಸಲಾಗಿತ್ತು. ಖಿ01, ಖಿ02, ಖಿ06, ಖಿ14, ಕ01, ಕ03, ಕ12 ವಿಷಯಗಳು 76 ಉಪನ್ಯಾಸಕರು ಬೆಂಗಳೂರು ವಿಭಾಗದಿಂದ ಭಾಗವಹಿಸಿದ್ದರು. ಬಾಷ್ ಕಂಪನಿಯ ಪ್ರಮುಖರು ಕಾರ್ಯಾಗಾರ ನಡೆಸಿಕೊಟ್ಟರು. ವಸ್ತು ಪ್ರದರ್ಶನದಲ್ಲಿ ಬಾಷ್ ಕಂಪನಿಯ ಆಧುನಿಕ ಉಪಕರಣಗಳ ಬಗ್ಗೆ ವಿವರವಾಗಿ ತಿಳಿಸಲಾಯಿತು. ಕಾರ್ಯಕ್ರಮ 9-30 ಸಂಜೆ 5-30 ರ ವರೆಗೆ ನಡೆದು ಅತ್ಯಂತ ಉಪಯುಕ್ತವಾಗಿತ್ತು.

2) ದಿನಾಂಕ 11-02-2009ರಂದು ಮೈಸೂರು ವಿಭಾಗದ ವೃತ್ತಿ ಶಿಕ್ಷಣ ಉಪನ್ಯಾಸಕರಿಗೆ ಮೇಲ್ಕಂಡ ಕಾರ್ಯಕ್ರಮವನ್ನು ಸರ್ಕಾರಿ ಮಹಾರಾಣಿ ಪದವಿ ಪೂರ್ವ ಕಾಲೇಜು, ಮೈಸೂರು ಇಲ್ಲಿ ನಡೆಸಲಾಯತು. ವಿಭಾಗದ 42 ಉಪನ್ಯಾಸಕರು ಬಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

3) ದಿನಾಂಕ 24–02–2009 ರಂದು ಬೆಳಗಾಂ ವಿಭಾಗದ ವೃತ್ತಿ ಶಿಕ್ಷಣ ಉಪನ್ಯಾಸಕರಿಗೆ ಜ್ಯೋತಿ ಪದವಿ ಪೂರ್ವ ಕಾಲೇಜು, ಬೆಳಗಾಂ ಇಲ್ಲಿ ನಡೆಸಲಾಯಿತು. 115 ಉಪನ್ಯಾಸಕರು ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

4) ದಿನಾಂಕ 27–02–2009 ರಂದು ಹಿಂದುಳಿದ ಜಿಲ್ಲೆಯಾದ ಗುಲಬರ್ಗಾದಲ್ಲಿ ಗುಲಬರ್ಗಾ ವಿಭಾಗದ ವೃತ್ತಿ ಶಿಕ್ಷಣ ಉಪನ್ಯಾಸಕರಿಗೆ ಮೇಲ್ಕಂಡ ಕಾರ್ಯಕ್ರಮ ನಡೆಸಲಾಯಿತು. ನೂತನ ವಿದ್ಯಾಲಯ ಗುಲಬರ್ಗಾದಲ್ಲಿ ನಡೆದ ಕಾರ್ಯಗಾರದಲ್ಲಿ 61 ಉಪನ್ಯಾಸಕರು ಭಾಗವಹಿಸಿದ್ದರು.

**2008–09ನೇ ಸಾಲಿನ ಪರೀಕ್ಷಾ ವಿಭಾಗದ ಕಾರ್ಯಕ್ರಮಗಳು**

2007–08ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿ ದಿನಾಂಕ: 24–03–2008ರ ವರೆಗೆ ದ್ವಿಪ್ರತಿ ಅಂಕಪಟ್ಟಿ, ಕ್ರೋಢೀಕೃತ ಅಂಕಪಟ್ಟಿ, ದ್ವಿಪ್ರತಿ ಪ್ರಮಾಣ ಪತ್ರ, ವಲಸೆ ಪ್ರಮಾಣ ಪತ್ರ, ಇತ್ಯಾದಿಗಳನ್ನು ನೀಡುವ ಸಲುವಾಗಿ ನಿಗದಿತ ಶುಲ್ಕ ಪಡೆದು ಸರ್ಕಾರಕ್ಕೆ ಜಮಾ ಮಾಡಲಾದ ಮೊಬಗಲಗು ರೂ. 1,20,870–00.

2008–09ನೇ ಸಾಲಿನ ವೃತ್ತಿ ಶಿಕ್ಷಣ ವಾರ್ಷಿಕ ಪರೀಕ್ಷೆಗೆ ಸಂಬಂಧಿಸಿದಂತೆ, ಒಟ್ಟು 905 ಉತ್ತರ ಪತ್ರಿಕೆಯ ಮರು ಎಣಿಕೆಗೆ ತಲಾ ರೂ. 100/– ರಂತೆ ಪಡೆದು ಸರ್ಕಾರಕ್ಕೆ ಜಮಾ ಮಾಡಲಾದ ಮೊಬಲಗು ರೂ. 90,500–00.

**2007–08 ನೇ ಏಪ್ರಿಲ್ ಮಾಹೆಯ ವೃತ್ತಿ ಶಿಕ್ಷಣ ವಾರ್ಷಿಕ ಪರೀಕ್ಷೆಯ ಫಲಿತಾಂಶ ಈ ಕೆಳಕಂಡಂತಿದೆ.**

| | ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು | ಉತ್ತೀರ್ಣರಾದವರ ಸಂಖ್ಯೆ | ಶೇಕಡಾವಾರು ಉತ್ತೀರ್ಣ | ಷರಾ |
|---|---|---|---|---|
| ಮೊದಲನೇ ವರ್ಷ / 2ನೇ ಸೆಮಿಸ್ಟರ್ | *2417* | *1470* | *60.82%* | *ಃ–09, ೨011* ಮತ್ತು ಕ ಕೋರ್ಸ್‌ಗಳಿಗೆ |
| ಎರಡನೇ ವರ್ಷ/ 4ನೇ ಸೆಮಿಸ್ಟರ್ | *31391* | *19757* | *62.92%* | *ಃ–09, ೨011* ಮತ್ತು ಕ ಕೋರ್ಸ್‌ಗಳನ್ನು ಹೊರತುಪಡಿಸಿ ಇತರೆಲ್ಲಾ ಕೋರ್ಸ್‌ಗಳಿಗೆ |

**ವೃತ್ತಿ ಶಿಕ್ಷಣ ಇಲಾಖೆಗೆ ಹಂಚಿಕೆ ಮಾಡಲಾದ ಅನುದಾನದ ವಿವರ :**

**ಯೋಜನೆ :** **(ಲಕ್ಷಗಳಲ್ಲಿ)**

| **ವರ್ಷ** | **ಹಂಚಿಕೆ ಮಾಡಲಾದ ಮೊತ್ತ** | **ವೆಚ್ಚ** | **ಉಳಿಕೆ** |
|---|---|---|---|
| 2004–05 | 780.00 | 755.27 | 24.73 |
| 2005–06 | 1141.80 | 1022.75 | 119.05 |
| 2006–07 | 980.00 | 876.06 | 103.94 |
| 2007–08 | 1547.23 | 1489.78 | 57.45 |
| 2008–09 | 1500.49 | 1464.90 | 35.59 |

**ಯೋಜನೇತರ :** **(ಲಕ್ಷಗಳಲ್ಲಿ)**

| ವರ್ಷ | ಹಂಚಿಕೆ ಮಾಡಲಾದ ಮೊತ್ತ | ವೆಚ್ಚ | ಉಳಿಕೆ |
|---|---|---|---|
| 2004–05 | 790.35 | 655.11 | 135.24 |
| 2005–06 | 556.28 | 521.12 | 35.16 |
| 2006–07 | 879.15 | 721.34 | 147.70 |
| 2007–08 | 1055.22 | 982.10 | 73.12 |
| 2008–09 | 1039.50 | 976.58 | 62.92 |

# ಸಾರ್ವಜನಿಕ ಗ್ರಂಥಾಲಯ

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965ರಲ್ಲಿ ಸರ್ಕಾರದಿಂದ ಅಂಗೀಕೃತವಾದ ನಂತರ ದಿನಾಂಕ 01–11–1966 ರಂದು ರಾಜ್ಯ ಕೇಂದ್ರ ಗ್ರಂಥಾಲಯ ಸ್ಥಾಪನೆಯೊಂದಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅಸ್ತಿತ್ವದಲ್ಲಿ ಬಂದಿರುತ್ತದೆ. ರಾಜ್ಯದಲ್ಲಿ ಪ್ರಸ್ತುತ ಸಾಲಿನವರೆಗೆ 1 ರಾಜ್ಯ ಕೇಂದ್ರ ಗ್ರಂಥಾಲಯ, 29 ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಮತ್ತು 26 ನಗರ ಕೇಂದ್ರ ಗ್ರಂಥಾಲಯಗಳನ್ನು ಮತ್ತು 490 ಶಾಖೆಗಳನ್ನು ಪ್ರಾರಂಭಿಸಿ ಸಾರ್ವಜನಿಕ ಓದುಗರಿಗೆ ಅವರ ಬೇಡಿಕೆಗೆ ಅನುಗುಣವಾಗಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯ ಜನರಲ್ಲಿ ಓದುವ ಹವ್ಯಾಸ ಬೆಳೆಸಲು ಹಾಗೂ ಉತ್ತೇಜಿಸಲು ಸರ್ಕಾರದಿಂದ ತೆರೆಯಲ್ಪಟ್ಟ ಸಂಸ್ಥೆಯಾಗಿರುತ್ತದೆ.

ವೃದ್ಧರು, ಮಹಿಳೆಯರಿಗೆ ಮನೆ ಬಾಗಿಲಲ್ಲೇ ಪುಸ್ತಕಗಳನ್ನು ಒದಗಿಸುವ ಸಲುವಾಗಿ 15 ಸಂಚಾರಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ ಗ್ರಾಮೀಣ ಜನತೆಗೆ 5766 ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಂಥಾಲಯಗಳ ಸುವ್ಯವಸ್ಥೆಗೆ ರಾಜ್ಯ/ಜಿಲ್ಲಾ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರಗಳನ್ನು ರಚಿಸಲಾಗಿದೆ. ತಮ್ಮ ವ್ಯಾಪ್ತಿಗೆ ಒಳಪಟ್ಟ ಯೋಜನೆಗಳನ್ನು ಸಿದ್ಧಪಡಿಸಿ ಅವುಗಳ ಅನುಷ್ಠಾನದ ಮೇಲ್ವಿಚಾರಣೆಯನ್ನು ಆಯಾಯ ಪ್ರಾಧಿಕಾರಗಳು ನಿರ್ವಹಿಸುತ್ತವೆ.

**ರಾಜ್ಯದ ಜನತೆಗೆ ಜ್ಞಾನ, ಸಾಮಾಜಿಕ ಶಿಕ್ಷಣ, ಮಾಹಿತಿ ಪ್ರಸಾರ ಹಾಗೂ ನಿರಂತರ ಕಲಿಕೆಗೆ ಒತ್ತಾಸೆ ನೀಡಿ ಸಾರ್ವಜನಿಕರಿಗೆ ಓದುವ ಸೌಲಭ್ಯ ಒದಗಿಸಿ ಅವರ ಸಾಕ್ಷರತಾ ಮಟ್ಟ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜ್ಞಾನವನ್ನು ಹೆಚ್ಚಿಸಲು ಜೀವಂತ ಶಕ್ತಿಯಾಗಿ ಈ ವ್ಯವಸ್ಥೆ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದೆ.**

ಓದುಗರ ವಾಸ್ತವ ಅವಶ್ಯಕತೆಗಳನ್ನು ಪರಿಗಣಿಸಿ ಪುಸ್ತಕ ಖರೀದಿಸಲು ಹೊಸ ಆಯಾಮವಾದ ಪುಸ್ತಕ ಖರೀದಿ ಪ್ರಕ್ರಿಯೆಗಾಗಿ ಸರ್ಕಾರದ ಮಾರ್ಗಸೂಚಿಯ ಮೇರೆಗೆ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚನೆಯಾಗಿದ್ದು, ಗುಣಾತ್ಮಕ ಗ್ರಂಥಗಳ ಆಯ್ಕೆಯಲ್ಲಿ ನಿರತವಾಗಿದೆ.

ಇಲಾಖೆಯ ವೃತ್ತಿನಿರತ ಸಿಬ್ಬಂದಿಗಳಿಗೆ ಹಾಗೂ ಇತರ ಆಸಕ್ತರಿಗೆ ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಶಾಲೆಯನ್ನು ಬೆಂಗಳೂರು, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾ ಕೇಂದ್ರಗಳಲ್ಲಿ ತೆರೆಯಲಾಗಿದೆ. ಗ್ರಂಥಾಲಯಗಳ ಬಗ್ಗೆ ಓದುವ ಹವ್ಯಾಸದ ಬಗ್ಗೆ ಅಭಿರುಚಿ ಮೂಡಿಸಲು ವಿಸ್ತರಣಾ ಚಟುವಟಿಕೆಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಿಗೆ ಕ್ಷಿಪ್ರವಾಗಿ ಮಾಹಿತಿ ಸೇವೆ ಒದಗಿಸಲು 29 ಜಿಲ್ಲಾ/ 26 ನಗರ ಗ್ರಂಥಾಲಯಗಳಲ್ಲಿ ಹಾಗೂ ನಿರ್ದೇಶಕರ ಕಛೇರಿಯಲ್ಲಿ ಗಣಕಯಂತ್ರಗಳನ್ನು ಅಳವಡಿಸಿ ಇಂಟರ್‌ನೆಟ್ ಹಾಗೂ ಇ–ಮೇಲ್ ವ್ಯವಸ್ಥೆ ಅಳವಡಿಸಲಾಗಿದೆ. ಅಲ್ಲದೆ, ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ 4 ಗ್ರಂಥಾಲಯ ತರಬೇತಿ ಕೇಂದ್ರಗಳಿಗೆ ಗಣಕ ಯಂತ್ರಗಳನ್ನು ಪೂರೈಸಲಾಗಿದ್ದು, ಅವು ವಿದ್ಯಾರ್ಥಿಗಳಿಗೆ ಉಪಯುಕ್ತ ಎನಿಸಿವೆ.

1. ರಾಜ್ಯದಲ್ಲಿರುವ 176 ತಾಲೂಕುಗಳಲ್ಲಿ ಪಠ್ಯ ಪುಸ್ತಕ ಬ್ಯಾಂಕ್ ಯೋಜನೆ ಮುಂದುವರಿಸಲಾಗಿದೆ.

2. 100 ಕೊಳಚೆ ಪ್ರದೇಶಗಳಲ್ಲಿ ಗ್ರಂಥಾಲಯವನ್ನು ರಾಜ್ಯದ ವಿವಿದೆಡೆ ತೆರೆಯಲಾಗಿದ್ದು, ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನತೆಗೆ ಗ್ರಂಥಾಲಯ ಸೌಲಭ್ಯ ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ.

3. 100 ಅಲೆಮಾರಿ ಜನತೆಗೆ ಉಪಯುಕ್ತ ಗ್ರಂಥಾಲಯಗಳನ್ನು ಪ್ರಾರಂಭಿಸಿ, ಅಲೆಮಾರಿ ಜನಾಂಗದವರಿಗೆ ಅವರ ನೆಲೆಯಲ್ಲಿ ಗ್ರಂಥಾಲಯಗಳನ್ನು ಒದಗಿಸಲಾಗಿದ್ದು, ಅವುಗಳ ಮುಂದುವರಿಕೆ ಕಾರ್ಯ ನಿರ್ವಹಿಸಲಾಗಿದೆ.
4. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ ಸೇರಿದ ಗ್ರಂಥಾಲಯ ಕಟ್ಟಡ ಹಾಗೂ ಅದಕ್ಕೆ ಸೇರಿದ ಜಾಗವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಹಸ್ತಾಂತರಿಸಿಕೊಂಡು, ಗ್ರಂಥಾಲಯ ಕಟ್ಟಡವನ್ನು ನವೀಕರಿಸಿ, ಹೈ–ಟೆಕ್ ಗ್ರಂಥಾಲಯವನ್ನಾಗಿ ಪ್ರಾರಂಭಿಸಿ ಸಾರ್ವಜನಿಕ ಓದುಗರಿಗೆ ತೆರೆಯಲಾಗಿದೆ.

*ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಗ್ರಂಥಾಲಯಗಳ ಮಾಹಿತಿ:*

| ಕ್ರ. ಸಂ | **ಗ್ರಂಥಾಲಯಗಳ ವಿವರ** | ಒಟ್ಟು ಗ್ರಂಥಾಲಯಗಳ ಸಂಖ್ಯೆ |
|---|---|---|
| 1 | 2 | 3 |
| 1 | ರಾಜ್ಯ ಕೇಂದ್ರ ಗ್ರಂಥಾಲಯ | 1 |
| 2. | ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ | 1 |
| 3. | ಜಿಲ್ಲಾ ಕೇಂದ್ರ ಗ್ರಂಥಾಲಯಗಳು | 29 |
| 4. | ನಗರ ಕೇಂದ್ರ ಗ್ರಂಥಾಲಯಗಳು | 26 |
| 5. | ಸಂಚಾರಿ ಗ್ರಂಥಾಲಯಗಳು | 15 |
| 6. | ಶಾಖಾ ಗ್ರಂಥಾಲಯಗಳು | 490 |
| 7. | ಸೇವಾ ಕೇಂದ್ರಗಳು | 107 |
| 8. | ವಾಚನಾಯಲಯಗಳು | 163 |
| 9. | ಗ್ರಾಮ ಪಂಚಾಯಿತಿ ಗ್ರಂಥಾಲಯಗಳು | 5766 |
| 10. | ಪುಸ್ತಕ ವಿತರಣಾ ಕೇಂದ್ರಗಳು | 65 |
| 11. | ಅನುದಾನಿತ ಗ್ರಂಥಾಲಯಗಳು | 21 |
| 12. | ಕೊಳಚೆ ಪ್ರದೇಶಗಳಲ್ಲಿ ಗ್ರಂಥಾಲಯಗಳು | 300 |
| 13. | ಕೊಳಚೆ ಪ್ರದೇಶಗಳಲ್ಲಿ ವಾಚನಾಲಯಗಳು | 600 |
| 14. | ಸಮುದಾಯ ಮಕ್ಕಳ ಕೇಂದ್ರಗಳು | 27 |
| 15. | ಅಲೆಮಾರಿ ಸಮುದಾಯದವರಿಗಾಗಿ ಗ್ರಂಥಾಲಯಗಳು | 100 |
| 16. | ಹಿಂದುಳಿದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಬ್ಯಾಂಕ್ | 576 |
| | **ಒಟ್ಟು** | **8287** |

ಅಭಿವೃದ್ಧಿ ಕಾರ್ಯಕ್ರಮದ ವಿವರ

1. ರಾಜ್ಯದ 5766 ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ. ಅವಶ್ಯಕವಿರುವ ಪಿಠೋಪಕರಣಗಳನ್ನು ಮತ್ತು ಪುಸ್ತಕಗಳನ್ನು ಆ ಗ್ರಂಥಾಲಯಗಳಿಗೆ ಒದಗಿಸಲಾಗಿದೆ.

2. ಮಕ್ಕಳ ಸಮುದಾಯ ಕೇಂದ್ರವನ್ನು ಪ್ರತೀ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ. ಈ ಕೇಂದ್ರವನ್ನು ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಈ ವರ್ಷ

ಪ್ರಾರಂಭಿಸಲಾಗಿದೆ.

3. ಜಿಲ್ಲಾ ಮತ್ತು ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಶಾಖಾ ಗ್ರಂಥಾಲಯಗಳನ್ನು ಹೊಸದಾಗಿ ಪ್ರಾರಂಭಿಸಲಾಗುವುದು. ಒಂದು ವಾರದ ಪುನಶ್ಚೇತನ ಕೋರ್ಸುಗಳನ್ನು ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ವ್ಯವಸ್ಥಾಪಕರುಗಳಿಗಾಗಿ ನಡೆಸಲಾಯಿತು.

4. ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವು ನವೆಂಬರ್ 14 ರಿಂದ 20 ರವರೆಗೆ ಬೆಂಗಳೂರಿನಲ್ಲಿ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ ಪ್ರಕಾಶಕರು, ಲೇಖಕರು ಮತ್ತು ಆಸ್ತಕರು ಈ ಸಪ್ತಾಹದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಿಬ್ಬಂದಿಯವರಿಗೆ ಇಲಾಖಾವತಿಯಿಂದ ಗ್ರಂಥಾಲಯ ಸೇವಾ ಪುರಸ್ಕಾರವನ್ನು ನೀಡಲಾಯಿತು.

5. ರಾಜಾ ರಾಂಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಕೇಂದ್ರ, ಕಲ್ಕತ್ತಾದ ಸಹಯೋಗದೊಂದಿಗೆ ಆಯ್ದ ಗ್ರಾಮ ಪಂಚಾಯತಿ ಗ್ರಂಥಾಲಯ ಕಟ್ಟಡಗಳ ಕಾಮಗಾರಿ ಪ್ರಗತಿಯಲ್ಲಿದೆ. ಈ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪುಸ್ತಕ, ಪೀಠೋಪಕರಣ, ಭೂಪಟಗಳನ್ನು ಒದಗಿಸಲಾಗಿದೆ.

6. ಸರ್ವಾಂಗೀಣ ಅಭಿವೃದ್ಧಿಗಾಗಿ ಪುಸ್ತಕಗಳು, ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳನ್ನು ಆರ್ಥಿಕವಾಗಿ ಸಮರ್ಥವಾಗಿರುವ ಗ್ರಂಥಾಲಯಗಳಿಂದ ಆರ್ಥಿಕವಾಗಿ ದುರ್ಬಲವಾಗಿರುವ ಗ್ರಂಥಾಲಯಗಳಿಗೆ ಸರಬರಾಜು ಮಾಡಲಾಗಿದೆ.

7. ಗ್ರಂಥಾಲಯಗಳನ್ನು ಸಾಂಸ್ಕೃತಿಕ ಕೇಂದ್ರಗಳನ್ನಾಗಿ ಪರಿವರ್ತಿಸಲು ಕ್ರಮ ಜರುಗಿಸಿದೆ.

8. ಪುಸ್ತಕಗಳ ಆಯ್ಕೆ ಮತ್ತು ಖರೀದಿಯಲ್ಲಿ ಪಾರದರ್ಶಕತೆ ಪಾಲಿಸಲಾಗುತ್ತಿದೆ. ಪ್ರಸ್ತುತ ಸಾಲಿಗೆ ಹೊಸ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಲಾಗಿದೆ.

9. ಕೇಂದ್ರ ಗ್ರಂಥಾಲಯದ ಕೃತಿ ಹಕ್ಕು ವಿಭಾಗದಲ್ಲಿ ಗ್ರಂಥಗಳ ವಿವರಣಾ ಪಟ್ಟಿಯನ್ನು ಪ್ರಕಾಶಿಸಲು ಉದ್ದೇಶಿಸಲಾಗಿದೆ.

10. ಗ್ರಂಥಾಲಯ ತರಬೇತಿ ಶಾಲೆಯನ್ನು ಬೆಂಗಳೂರು, ಧಾರವಾಡ, ಗುಲ್ಬರ್ಗ ಹಾಗೂ ಮಂಗಳೂರು ನಗರಗಳಲ್ಲಿ ಪ್ರಾರಂಬಿಸಿ ತರಬೇತಿ ನೀಡಲಾಗುತ್ತಿದೆ.

11. ಸಿಬ್ಬಂದಿಯವರಿಗೆ ಕಾರ್ಯಗಾರ ಹಾಗೂ ಸೆಮಿನಾರ್‌ಗಳನ್ನು ಆಯೋಜಿಸಲಾಗಿದೆ.

12. ಸಾರ್ವಜನಿಕರ ಹಿತಸಕ್ತಿಗನುಗುಣವಾಗಿ ಸಾರ್ವಜನಿಕರಿಗೆ ವಿಚಾರ ಸಂಕಿರಣಗಳ ಆಯೋಜನೆ ಮಾಡಲಾಗಿದೆ.

13. ಗ್ರಾಮ ಪಂಚಾಯಿತಿ ಗ್ರಂಥಾಲಯ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ.

14. 12ನೇ ಹಣಕಾಸು ಆಯೋಗದಡಿಯಲ್ಲಿ ಆಯಾಯ ಜಿಲ್ಲೆಗಳಲ್ಲಿ ಗ್ರಂಥಾಲಯಗಳ ಕಟ್ಟಡಗಳ ನವೀಕರಣ ಮತ್ತು ಸಂರಕ್ಷಣೆ ಹಾಗೂ ಪುಸ್ತಕ ಸಂರಕ್ಷಣೆ ಕಾರ್ಯವನ್ನು ನಿರ್ವಹಿಸಲಾಗಿದೆ.

15. ಹೊಸ ಬಡಾವಣೆಗಳಲ್ಲಿ ಗ್ರಂಥಾಲಯಗಳಿಗಾಗಿ ಸಿ.ಎ. (ಅಂ) ನಿವೇಶನ ಪಡೆದು ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ಜರುಗಿಸಲಾಗುತ್ತಿದೆ.

16. ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂ. ಇಡಿ 68 ಎಲ್‌ಐಬಿ ೦5, ದಿನಾಂಕ 2-9-2005 ರ ಪ್ರಕಾರ ಏಕಗವಾಕ್ಷಿ ಮೂಲಕ ಲೇಖಕ ಹಾಗೂ ಪ್ರಕಾಶಕರ ಗ್ರಂಥಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಆರ್.ಆರ್.ಆರ್. ಪ್ರತಿಷ್ಠಾನ ಯೋಜನೆ, ಗ್ರಾಮ ಪಂಚಾಯಿತಿ

ಗ್ರಂಥಾಲಯಗಳಿಗೆ, ಮಕ್ಕಳ ಗ್ರಂಥಾಲಯಗಳಿಗೆ ಸರ್ಕಾರ ಒದಗಿಸುವ ಯೋಜನಾ ವೆಚ್ಚದಲ್ಲಿ ಪುಸ್ತಕ ಸಂಗ್ರಹಣೆಯನ್ನು ಮಾಡಲಾಗುವುದು. ಈ ಪದ್ಧತಿಯಲ್ಲಿ ಪುಸ್ತಕಗಳ ಆಯ್ಕೆ, ಖರೀದಿ ಹಾಗೂ ಹಣ ಪಾವತಿ ಒಂದೇ ಕಡೆ ಆಗುತ್ತದೆ ಹಾಗೂ ಇದರಿಂದಾಗಿ ಲೇಖಕರಿಗೆ ಅನುಕೂಲವಾಗುತ್ತದೆ. ಲೇಖಕರಿಂದಲೇ ಸುಮಾರು 300 ಪ್ರತಿಗಳನ್ನು ಖರೀದಿಸುವ ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಸಾಲಿಗೂ ವ್ಯವಸ್ಥೆ ಮುಂದುವರಿಸಲಾಗಿದೆ.

**<u>ರಾಜಾ ರಾಂಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಕೇ0ದ್ರದ ಯೋಜನೆಗಳ ಮಾಹಿತಿ</u>**

1973ರಲ್ಲಿ ಸ್ಥಾಪನೆಯಾದ ರಾಜಾರಾಂ ಮೋಹನ್‌ರಾಯ ಪ್ರತಿಷ್ಠಾನ ಕೊಲ್ಕತ್ತಾ, ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಒಂದು ಅಂಗ ಸಂಸ್ಥೆಯಾಗಿದೆ. ದೇಶಾದ್ಯಂತ ಜನರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಸಾರ್ವಜನಿಕ ಗ್ರಂಥಾಲಯ ಚಳುವಳಿಗೆ ಒತ್ತಾಸೆ ನೀಡಿ ಅದನ್ನು ಅಭಿವೃದ್ಧಿ ಪಡಿಸುವ ಗುರಿಯನ್ನು ಸಾಧಿಸುತ್ತಿದೆ.

ಪ್ರತಿಷ್ಠಾನ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳು ಗ್ರಂಥಾಲಯ ಸೇವೆಯಲ್ಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವ ಸ್ಥಳೀಯ ಸೇವಾ ಸಂಸ್ಥೆಗಳು, ವಯಸ್ಕರ ಶಿಕ್ಷಣ ಹಾಗೂ ಇಂತಹ ಇತರ ಸಂಘ ಸಂಸ್ಥೆಗಳಿಗೆ ಸಮಪಾಲು ನಿಧಿ ಮತ್ತು ಹೊಂದಾಣಿಕೇತರ ನಿಧಿ ಯೋಜನೆ ಅಡಿಯಲ್ಲಿ ಅನುದಾನ ಒದಗಿಸುವ ಮೂಲಕ ತನ್ನ ಗುರಿಯನ್ನು ಸಾಧಿಸುತ್ತಿದೆ.

ಪ್ರತಿ ವರ್ಷದ0ತೆ 2008-2009ನೇ ಸಾಲಿನಲ್ಲಿ ರಾಜಾ ರಾಂಮೋಹನ್ ರಾಯ್ ಗ್ರ0ಥಾಲಯ ಪ್ರತಿಷ್ಠಾನ ಕೇಂದ್ರವು ಸರ್ಕಾರದಿ0ದ ಬಿಡುಗಡೆಯಾಗುವ ಮೊತ್ತಕ್ಕೆ ಸಮನಾದ ರೂ. 150.00 ಲಕ್ಷಗಳನ್ನು ಬಿಡುಗಡೆ ಮಾಡಿ ಒಟ್ಟು ರೂ. 300.00 ಲಕ್ಷಗಳಾಗುವುದು ಮತ್ತು ಈ ಹಣವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಪುಸ್ತಕಗಳು ಮತ್ತು ಗ್ರಂಥ ಸಂಗ್ರಹಣಾ ಸಾಧನಗಳನ್ನು ಖರೀದಿಸಲಾಗಿದೆ ಹಾಗೂ ಕಟ್ಟಡ ನಿರ್ಮಾಣ ಕಾರ್ಯ ನಿರ್ವಹಿಸಲಾಗಿದೆ ಹಾಗೂ ಹೊಂದಾಣಿಕೇತರ ಯೋಜನೆ ಅಡಿ ಮಕ್ಕಳ ಗ್ರಂಥಾಲಯ, ಮಕ್ಕಳ ವಿಭಾಗ, ಹಿರಿಯ ನಾಗರೀಕರ ವಿಭಾಗ ಹಾಗೂ ಮಹಿಳಾ ವಿಭಾಗಗಳ ಪ್ರಾರಂಭಕ್ಕೆ ಸಹಾಯ ಧನ ಪಡೆಯಲಾಗಿದೆ. ಅಲ್ಲದೆ, ಗ್ರಂಥಾಲಯ ಸೇವೆ ನೀಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ.

**<u>ಅಂಕಿ ಅಂಶಗಳು :</u>**

(ಲಕ್ಷಗಳಲ್ಲಿ)

| ಕ್ರ. ಸಂ. | ಒಟ್ಟು ಪುಸ್ತಕಗಳ ಸಂಖ್ಯೆ | ಒಟ್ಟು ಸದಸ್ಯತ್ವ ಸಂಖ್ಯೆ | ದಿನನಿತ್ಯ ಗ್ರಂ.ಕ್ಕೆ ಭೇಟಿ ನೀಡುವವರ ಸಂಖ್ಯೆ | ದಿನನಿತ್ಯ ಪುಸ್ತಕಗಳನ್ನು ಎರವಲು ಪಡೆಯುವವರ ಸಂಖ್ಯೆ | ಒಟ್ಟು ದಿನಪತ್ರಿಕೆಗಳ ಸಂಖ್ಯೆ (ವರ್ಷಕ್ಕೆ) | ಒಟ್ಟು ನಿಯತಕಾಲಿಕೆಗಳ ಸಂಖ್ಯೆ (ವರ್ಷಕ್ಕೆ) |
|---|---|---|---|---|---|---|
| 1 | 158.86 | 83.67 | 86.10 | 16.24 | 52.86 | 6.36 |

**<u>ಗ್ರಂಥಾಲಯ ಇಲಾಖೆಗೆ ಹಂಚಿಕೆ ಮಾಡಲಾದ ಹಣದ ವಿವರ :</u>**

(ಲಕ್ಷಗಳಲ್ಲಿ)

| ವರ್ಷ | ಹಂಚಿಕೆ ಮಾಡಲಾದ ಮೊತ್ತ | ವೆಚ್ಚ | ಉಳಿಕೆ |
|---|---|---|---|
| 2004-05 | 375.00 | 370.80 | 4.2 |
| 2005-06 | 730.24 | 395.02 | 335.22 |
| 2006-07 | 1294.27 | 1141.13 | 153.14 |
| 2007-08 | 1046.17 | 1046.17 | - |

| | | | |
|---|---|---|---|
| 2008–09 | 1030.00 | 1010.00 | 20.00 |

## ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯು ಮೂಲತ: ಒಂದು ಸೇವಾ ಇಲಾಖೆಯಾಗಿದ್ದು, ರಾಜ್ಯ ಸರ್ಕಾರದ ಇಲಾಖೆಗಳ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಬೇಡಿಕೆಗಳನ್ನು ಪೂರೈಸುತ್ತಿದೆ. ಅಲ್ಲದೆ ವಿವಿಧ ಇಲಾಖೆಗಳಾದ ವಿಧಾನ ಮಂಡಲ, ಸಚಿವಾಲಯ, ರಾಜ್ಯಪಾಲರ ಕಾರ್ಯಾಲಯ, ರಾಜ್ಯದ ಉಚ್ಚ ನ್ಯಾಯಾಲಯ ಇವುಗಳಿಗೂ ಕೂಡ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಬೇಡಿಕೆಗಳನ್ನು ಪೂರೈಸುತ್ತಿದೆ.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ವೃಂದವಾರು ಸಿಬ್ಬಂದಿ ವಿವರ

| ಕ್ರ. ಸಂ. | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವವರು |
|---|---|---|
| | **ಗ್ರೂಪ್ – ಎ** | |
| 1 | ನಿರ್ದೇಶಕರು | 1 |
| 2 | ಸಹ ನಿರ್ದೇಶಕರು | 1 |
| 3 | ಹಿರಿಯ ಉಪ ನಿರ್ದೇಶಕರು | 1 |
| 4 | ಉಪ ನಿರ್ದೇಶಕರು (ತಾಂತ್ರಿಕ) | 5 |
| 5 | ಉಪ ನಿರ್ದೇಶಕರು (ಆಡಿಟ್/ಲೆಕ್ಕಪತ್ರ) | 1 |
| 6 | ವೈದ್ಯಾಧಿಕಾರಿ | 1 |
| | **ಗ್ರೂಪ್ – ಬಿ** | |
| 7 | ಸಹಾಯಕ ನಿರ್ದೇಶಕರು (ಕ್ಯಾಸ್ಟಿಂಗ್) | 1 |
| 8 | ಸಹಾಯಕ ನಿರ್ದೇಶಕರು (ತಾಂತ್ರಿಕೇತರ) | 9 |
| 9 | ಸಹಾಯಕ ನಿರ್ದೇಶಕರು (ತಾಂತ್ರಿಕ) | 13 |
| 10 | ಕಾರ್ಮಿಕ ಅಧಿಕಾರಿ | 1 |
| | **ಗ್ರೂಪ್** – ಸಿ (ಎಂ) | |
| 11 | ಆಡಿಟ್ ಅಧೀಕ್ಷಕರು | 1 |
| 12 | ಅಧೀಕ್ಷಕರು | 18 |
| 13 | ಪ್ರಥಮ ದರ್ಜೆ ಸಹಾಯಕರು | 39 |
| 14 | ಪ್ರಥಮ ದರ್ಜೆ ಸಹಾಯಕರು (ಆಡಿಟರ್) | 3 |
| 15 | ಮುಖ್ಯ ಕಾಸ್ಟ್ ಲೆಕ್ಕಾಧಿಕಾರಿ | 1 |
| 16 | ಶೀಘ್ರಲಿಪಿಗಾರರು | 3 |
| 17 | ಕಾಸ್ಟ್ ಲೆಕ್ಕಾಧಿಕಾರಿ | 6 |
| 18 | ಹಿರಿಯ ಬೆರಳಚ್ಚುಗಾರರು | 2 |
| 19 | ಬೆರಳಚ್ಚುಗಾರರು | 10 |
| 20 | ದ್ವಿತೀಯ ದರ್ಜೆ ಸಹಾಯಕರು | 85 |
| 21 | ನರ್ಸ್ | 1 |

| | | |
|---|---|---|
| 22 | ಫಾರ್ಮಸಿಸ್ಟ್ | 1 |
| | **ಗ್ರೂಪ್ ಸಿ (ಕೈಗಾರಿಕೆ)** | 0 |
| 23 | ಮೇಲ್ವಿಚಾರಕರು | 18 |
| 24 | ಮೇಲ್ವಿಚಾರಕರು (ಓ.ಎಸ್) | 2 |
| 25 | ಫೋರ್‌ಮನ್ | 52 |
| 26 | ಮುಖ್ಯ ಪರೀಕ್ಷಕರು | 2 |
| 27 | ಉಪ ಮುಖ್ಯ ಪರೀಕ್ಷಕರು | 2 |
| 28 | ಹಿರಿಯ ಪ್ರೂಫ್ ಪರೀಕ್ಷಕರು | 25 |
| 29 | ಕಿರಿಯ ಪ್ರೂಫ್ ಪರೀಕ್ಷಕರು | 56 |
| 30 | ಅಧೀಕ್ಷಕರು | 3 |
| 31 | ಪ್ರಥಮ ದರ್ಜೆ ಸಹಾಯಕರು | 18 |
| 32 | ದ್ವಿತೀಯ ದರ್ಜೆ ಸಹಾಯಕರು | 54 |
| 33 | ತಾಂತ್ರಿಕ ಸಹಾಯಕರು | 12 |
| 34 | ಗಣಕ ಮುಖ್ಯಸ್ಥರು | 2 |
| 35 | ಯಾಂತ್ರಿಕ ಫೋರ್‌ಮನ್ | 3 |
| 36 | ಯಾಂತ್ರಿಕ ಮೇಲ್ವಿಚಾರಕರು | 1 |
| 37 | ವಿದ್ಯುತ್ ಮೇಲ್ವಿಚಾರಕರು | 1 |
| 38 | ಎಲೆಕ್ಟ್ರಿಷಿಯನ್ | 3 |
| 39 | ವೈರ್‌ಮನ್ | 6 |
| 40 | ಮೆಕ್ಯಾನಿಕ್ | 10 |
| 41 | ಸಹಾಯಕ ಮೆಕ್ಯಾನಿಕ್ | 4 |
| 42 | ಮುಖ್ಯ ಬಡಿಗಾರರು | 2 |
| 43 | ಹಿರಿಯ ಬಡಿಗಾರರು | 2 |
| 44 | ಮುಖ್ಯ ಟೈಮ್ ಕೀಪರ್ | 1 |
| 45 | ಟೈಮ್ ಕೀಪರ್ | 8 |
| 46 | ಹಿರಿಯ ಆಫ್‌ಸೆಟ್ ಪ್ರಿಂಟರ್ | 18 |
| 47 | ಕಲಾವಿದರು | 8 |
| 48 | ಪ್ರೋಸೆಸ್ ಆಪರೇಟರ್ | 3 |
| 49 | ಸಹಾಯಕ ಪ್ರೋಸೆಸ್ ಆಪರೇಟರ್ | 5 |
| 50 | ಎನಗ್ರೇವರ್ | 4 |
| 51 | ಆಫ್‌ಸೆಟ್ ಪ್ರಿಂಟರ್ | 42 |
| 52 | ಸಹಾಯಕ ಆಫ್‌ಸೆಟ್ ಪ್ರಿಂಟರ್ | 125 |
| 53 | ಲೈನೋ ಮೋನೋ ಆಪರೇಟರ್ | 32 |
| 54 | ಮುಖ್ಯ ಕಾಸ್ಟರ್ | 7 |

| | | |
|---|---|---|
| 55 | ಕಾಸ್ಟರ್ | 21 |
| 56 | ಹಿರಿಯ ಕಂಪೋಸಿಟರ್ | 62 |
| 57 | ಕಂಪೋಸಿಟರ್ | 171 |
| 58 | ಹಿರಿಯ ಮೆಷೀನ್ ಮೈಂಡರ್ | 46 |
| 59 | ಮೆಷೀನ್ ಮೈಂಡರ್ | 130 |
| 60 | ಹಿರಿಯ ಬೈಂಡರ್ | 57 |
| 61 | ಬೈಂಢರ್ | 148 |
| 62 | ಮುಖ್ಯ ಪ್ಯಾಕರ್ | 4 |
| 63 | ಸಹಾಯಕ ಡಿಟಿಪಿ ಆಪರೇಟರ್ | 46 |
| 64 | ಪ್ಲೇಟ್ ಮೇಕರ್ | 12 |
| 65 | ಸಹಾಯಕ ಆಫ್‌ಸೆಟ್ ಪ್ಲೇಟ್ ಮೇಕರ್ | 10 |
| 66 | ಹಿರಿಯ ಪ್ಲೇಟ್ ಮೇಕರ್ | 4 |
| 67 | ಹಿರಿಯ ಆಫ್‌ಸೆಟ್ ಪ್ಲೇಟ್ ಮೇಕರ್ | 4 |
| 68 | ಆಫ್‌ಸೆಟ್ ಪ್ಲೇಟ್ ಮೇಕರ್ | 2 |
| 69 | ಫೋರ್‌ಮನ್– ರೆಸೋಗ್ರಾಫರ್ | 1 |
| | **ಗ್ರೂಪ್ –ಡಿ** (ಎಂ) | |
| 70 | ಅಟೆಂಡರ್ | 15 |
| 71 | ಪ್ಯೂನ್ | 37 |
| 72 | ದಫೇದಾರ್ | 1 |
| 73 | ಲಾರಿ ಡ್ರೈವರ್ | 1 |
| 74 | ಜೀಪ್ ಡ್ರೈವರ್ | 2 |
| 75 | ಪ್ಯಾಕರ್ಸ್ | 26 |
| 76 | ಡ್ರೈವರ್ | 4 |
| 77 | ಗಾರ್ಡನರ್ | 1 |
| 78 | ವಾಚ್‌ಮನ್ | 2 |
| 79 | ನೈಟ್‌ವಾಚ್‌ಮನ್ | 1 |
| 80 | ಕೌಂಟರ್ | 5 |
| | **ಗ್ರೂಪ್–ಡಿ (ಕೈಗಾರಿಕೆ)** | |
| 81 | ಫಿಟ್ಟರ್ | 3 |
| 82 | ಗೇಟ್ ಕೀಪರ್ | 5 |
| 83 | ಸಹಾಯಕ ಗೇಟ್ ಕೀಪರ್ | 5 |
| 84 | ವಾಚ್‌ಮನ್ | 10 |
| 85 | ನೈಟ್ ವಾಚ್‌ಮನ್ | 6 |
| 86 | ಅಟೆಂಡರ್ | 13 |
| 87 | ಸ್ವೀಪರ್ | 30 |

| | | |
|---|---|---|
| 88 | ಜೂನಿಯರ್ ಕಂಪೋಸಿಟರ್ | 20 |
| 89 | ಸಹಾಯಕ ಮೆಷೀನ್ ಮೈಂಡರ್ | 4 |
| 90 | ಸಹಾಯಕ ಬೈಂಡರ್ | 323 |
| 91 | ಪ್ಯಾಕರ್ | 41 |
| 92 | ಸೀನಿಯರ್ ಪ್ಯಾಕರ್ | 12 |
| 93 | ಸಹಾಯಕ ಕಾಸ್ಟರ್ | 12 |
| ಒಟ್ಟು | | 2032 |

ವಿಧಾನ ಮಂಡಲದ ಚರ್ಚೆಗಳು ಹಾಗೂ ಮುಖ್ಯ ಚುನಾವಣಾಧಿಕಾರಿ ಅವರ ಕೋರಿಕೆ ಮೇರೆಗೆ ಮತಪತ್ರ, ಚುನಾವಣಾ ಕಾರ್ಯಕ್ಕೆ ಸಂಬಂಧಿಸಿದ ನಮೂನೆಗಳನ್ನು ಮುದ್ರಿಸುತ್ತದೆ. ರಾಜ್ಯ ಪಂಚವಾರ್ಷಿಕ ಹಾಗೂ ವಾರ್ಷಿಕ ಯೋಜನಾ ಸಂಪುಟಗಳನ್ನು ಮುದ್ರಿಸುವ ಮತ್ತು ಆಯವ್ಯಯ ಸಂಪುಟಗಳ ಮುದ್ರಣ ಹಾಗೂ ವಿವಿಧ ಇಲಾಖೆಗಳ ಪ್ರಕಟಣೆಗಳನ್ನು ಮುದ್ರಿಸಿ ಸರಬರಾಜು ಮಾಡುತ್ತಿದೆ. ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ಇವರು ಇಲಾಖೆಗೆ ವಹಿಸುವ ಉಚಿತ ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜನ್ನು ಸಕಾಲದಲ್ಲಿ ಮಾಡುವ ಪ್ರಮುಖ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಮೂರು ಕಡೆ ಹಂಚಿ ಹೋಗಿದ್ದ ಸರ್ಕಾರಿ ಕೇಂದ್ರ ಮುದ್ರಣಾಲಯ ಹಾಗೂ ಕೇಂದ್ರ ಲೇಖನ ಸಾಮಗ್ರಿ ಮಳಿಗೆಗಳನ್ನು ಒಂದೇ ಕಡೆ ಕೇಂದ್ರೀಕರಿಸಿ, ಆಗಸ್ಟ್ 2008ರಲ್ಲಿ ಮೈಸೂರು ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ದಿನಾಂಕ: 4-1-2006 ರಿಂದ ಅಸ್ತಿತ್ವಕ್ಕೆ ಬಂದ ಕರ್ನಾಟಕ ಪಠ್ಯಪುಸ್ತಕ ಸಂಘಕ್ಕೆ ಎಲ್ಲ ಪಠ್ಯಪುಸ್ತಕಗಳ ಮುದ್ರಣ ಹಂಚಿಕೆ ಕೆಲಸಗಳನ್ನು ವಹಿಸಿಕೊಡಲಾಗಿದೆ. ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ ಮೈಸೂರು ಮತ್ತು ಸರ್ಕಾರಿ ಶಾಖಾ ಪಠ್ಯಪುಸ್ತಕ ಮುದ್ರಣಾಲಯ ಗುಲ್ಬರ್ಗ ಇವುಗಳನ್ನು ಸಿಬ್ಬಂದಿ ಸಮೇತ ಈ ಇಲಾಖೆಯ ಹತೋಟಿಗೆ ತರಲಾಗಿರುತ್ತದೆ.

**ಇಲಾಖೆಯ ಕೇಂದ್ರ ಕಾರ್ಯಾಲಯ ಮತ್ತು ಅಧೀನ ಕಾರ್ಯಾಲಯಗಳು ಈ ಕೆಳಗಿನಂತಿವೆ.:**

1. ನಿರ್ದೇಶನಾಲಯ ಮತ್ತು ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜು ಪೋಸ್ಟ್, ಮೈಸೂರು ರಸ್ತೆ, ಬೆಂಗಳೂರು–59.
2. ಸರ್ಕಾರಿ ಹೊರವಲಯ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜು ಪೋಸ್ಟ್, ಮೈಸೂರು ರಸ್ತೆ, ಬೆಂಗಳೂರು–59.
3. ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, –3ನೇ ನೆಲಅಂತಸ್ತು, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು–1.
4. ಸರ್ಕಾರಿ ಮುದ್ರಣಾಲಯ, ಎಸ್.ಜೆ.ಪಿ ಕಟ್ಟಡ, ಬೆಂಗಳೂರು.
5. ಸರ್ಕಾರಿ ಮುದ್ರಣಾಲಯ, ಹೈಕೋರ್ಟ್ ಘಟಕ, ಬೆಂಗಳೂರು.
6. ಸರ್ಕಾರಿ ಕೇಂದ್ರ ಲೇಖನ ಸಾಮಗ್ರಿ ಮಳಿಗೆ, 8ನೇ ಮೈಲಿ, ಆರ್.ವಿ. ಕಾಲೇಜು ಪೋಸ್ಟ್, ಮೈಸೂರು ರಸ್ತೆ, ಬೆಂಗಳೂರು–59.
7. ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆ, 8ನೇ ಮೈಲಿ, ಆರ್.ವಿ. ಕಾಲೇಜು ಪೋಸ್ಟ್, ಮೈಸೂರು ರಸ್ತೆ, ಬೆಂಗಳೂರು–59.
8. ಸರ್ಕಾರಿ ಪುಸ್ತಕ ಮಳಿಗೆ, ಮಾರಾಟ ಕೌಂಟರ್, ನೆಲಅಂತಸ್ತು, ಬಹುಮಹಡಿ ಕಟ್ಟಡ, ಬೆಂಗಳೂರು–1.
9. ಸರ್ಕಾರಿ ವಿಭಾಗೀಯ ಮುದ್ರಣಾಲಯ/ ಲೇಖನ ಸಾಮಗ್ರಿ ಮಳಿಗೆ/ ಪುಸ್ತಕ ಮಳಿಗೆ ಧಾರವಾಡ.
10. ಸರ್ಕಾರಿ ವಿಭಾಗೀಯ ಮುದ್ರಣಾಲಯ/ ಲೇಖನ ಸಾಮಗ್ರಿ ಮಳಿಗೆ/ ಪುಸ್ತಕ ಮಳಿಗೆ,

ಗುಲ್ಬರ್ಗಾ.

11. ಸರ್ಕಾರಿ ಜಿಲ್ಲಾ ಮುದ್ರಣಾಲಯ, ಅಂತರಸನಹಳ್ಳಿ, ತುಮಕೂರು.
12. ಸರ್ಕಾರಿ ಜಿಲ್ಲಾ ಮುದ್ರಣಾಲಯ, ಟಮಕ, ಇಂಡಸ್ಟ್ರಿಯಲ್ ಏರಿಯಾ, ಕೋಲಾರ.
13. ಸರ್ಕಾರಿ ಜಿಲ್ಲಾ ಮುದ್ರಣಾಲಯ, ಯಯಾಡಿ, ಇಂಡಸ್ಟ್ರಿಯಲ್ ಏರಿಯಾ, ಮಂಗಳೂರು.
14. ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಂಡ್ಲಿ, ಕಲ್ಲೂರು, ಇಂಡಸ್ಟ್ರಿಯಲ್ ಏರಿಯಾ, ಶಿವಮೊಗ್ಗ.
15. ಸರ್ಕಾರಿ ಶಾಖಾ ಮುದ್ರಣಾಲಯ, ಮಡಿಕೇರಿ.
16. ಸರ್ಕಾರಿ ಪಠ್ಯ ಪುಸ್ತಕ ಮುದ್ರಣಾಲಯ, ಸರಸ್ವತಿಪುರಂ, ಮೈಸೂರು.
17. ಸರ್ಕಾರಿ ಶಾಖಾ ಪಠ್ಯ ಪುಸ್ತಕ ಮುದ್ರಣಾಲಯ, ಗುಲ್ಬರ್ಗಾ.

**2008–09ನೇ ಸಾಲಿನಲ್ಲಿ ಈ ಕೆಳಕಂಡ ಪ್ರಮುಖ ಕಾರ್ಯಗಳನ್ನು ಸಕಾಲದಲ್ಲಿ ಅಚ್ಚುಕಟ್ಟಾಗಿ ನಿರ್ವಹಿಸಿದೆ :–**

1) ನಗರ ಸಭೆ, ಗೃಹ ಮಂಡಳಿ, ಬೃಹತ್ ಮಹಾನಗರ ಪಾಲಿಕೆಯ ವಿಶೇಷ ಅಧಿಸೂಚನೆಗಳು ಸೇರಿದಂತೆ 1237 ಸಂಖ್ಯೆಯ ಅಧಿಸೂಚನೆಗಳನ್ನು ವಿಶೇಷ ರಾಜ್ಯಪತ್ರಗಳನ್ನಾಗಿ ಪ್ರಕಟಿಸಲಾಗಿರುತ್ತದೆ.
2) ಈ ಇಲಾಖೆಯು ವಾರದ ರಾಜ್ಯಪತ್ರವನ್ನು ಪ್ರತಿ ಗುರುವಾರ ಪ್ರಕಟಿಸುತ್ತಿದೆ. ಇದನ್ನು ಇ–ಪಬ್ಲಿಕೇಷನ್ ಆಗಿ ವೆಬ್‌ಸೈಟ್‌ನಲ್ಲಿಯೂ ಸಹ ಪ್ರಕಟಿಸಲಾಗುತ್ತಿದೆ. ಇದರ ವಿಳಾಸ: ಇಚಿಡಿ.ಟುಛಿಏಟಿ/ಿಚಿದಜಣಣಜ.
3) ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಕರ್ನಾಟಕ ತೀರ್ಪುಗಳ ವರದಿಗಳು (ಕನ್ನಡ ಮಾಸಿಕ ವರದಿಗಳು)
4) 2009–10ನೇ ಶೈಕ್ಷಣಿಕ ಸಾಲಿಗಾಗಿ 50.93 ಲಕ್ಷ ಉಚಿತ ಪಠ್ಯಪುಸ್ತಕಗಳ ಮುದ್ರಣ ಹಾಗೂ ಬಿ.ಇ.ಓ. ಕಛೇರಿಗಳಿಗೆ ರವಾನೆ.
5) ರಾಷ್ಟ್ರೀಯ ಪಂಚಾಂಗ, 2009ನೇ ಸಾಲಿನ ಸರ್ಕಾರಿ ಕ್ಯಾಲೆಂಡರ್ ಹಾಗೂ ಡೈರಿಗಳ ಮುದ್ರಣ, ವಿಧಾನಸಭೆ, ವಿಧಾನಪರಿಷತ್ತು ಡೈರಿಗಳ ಮುದ್ರಣ, ಉಚ್ಚ ನ್ಯಾಯಾಲಯದ ವಿವಿಧ ರೀತಿಯ ಕ್ಯಾಲೆಂಡರುಗಳ ಮುದ್ರಣ.
6) ವಿವಿಧ ಸರ್ಕಾರಿ ಇಲಾಖೆಗಳ ವಾರ್ಷಿಕ ವರದಿಗಳು ಹಾಗೂ ನಿರ್ವಹಣಾ ಆಯವ್ಯಯ ಪತ್ರಗಳ ಮುದ್ರಣ.
7) ವಾಣಿಜ್ಯ ತೆರಿಗೆ ಇಲಾಖೆಯ ನಮೂನೆಗಳು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖಾ ನಮೂನೆಗಳು, ಅರಣ್ಯ ಇಲಾಖೆಯ ನಮೂನೆಗಳು, ಕರ್ನಾಟಕ ವಿಮಾ ಇಲಾಖಾ ನಮೂನೆಗಳು, ಪೋಲೀಸ್ ಇಲಾಖಾ ನಮೂನೆಗಳು, ಸಾರಿಗೆ ಇಲಾಖಾ ನಮೂನೆಗಳು, ಕಂದಾಯ ಇಲಾಖೆಯ ನಮೂನೆಗಳು– ಮುಂತಾದ ವಿವಿಧ ಇಲಾಖೆಗಳ ನಮೂನೆಗಳ ಮುದ್ರಣ.
8) ಬೃಹತ್ ಮಹಾನಗರ ಪಾಲಿಕೆಯ ಸ್ವಯಂ ಘೋಷಿತ ಆಸ್ತಿ ತೆರಿಗೆಗೆ ಸಂಬಂಧಿಸಿದ ಸುಮಾರು 3.5 ಲಕ್ಷ ಪುಸ್ತಕಗಳು/ ಕೈಪಿಡಿಗಳು ಹಾಗೂ ಸುಮಾರು 25 ಲಕ್ಷ ಅರ್ಜಿ ನಮೂನೆಗಳ ಮುದ್ರಣ.
9) ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಬೇಕಾದ 39.50 ಲಕ್ಷ ಸಂಖ್ಯೆಯ ಮುಖ್ಯ ಉತ್ತರ ಪತ್ರಿಕೆಗಳು 74 ಲಕ್ಷ ಸಂಖ್ಯೆಯ ಹೆಚ್ಚುವರಿ ಉತ್ತರ ಪತ್ರಿಕೆಗಳು ಮತ್ತು 7.5 ಲಕ್ಷ ಪ್ರಾಕ್ಟಿಕಲ್ ಉತ್ತರ ಪಪತ್ರಿಕೆಗಳ ಮುದ್ರಣ.
10) ಪ್ರತಿಭಾವಂತ ಸಂಸದೀಯ ಪಟುಗಳ 12 ಶೀರ್ಷಿಕೆಗಳ ಮುದ್ರಣ.
11) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ವಿವಿಧ ರೀತಿಯ 50 ಲಕ್ಷ ನಮೂನೆಗಳ ಮುದ್ರಣ.
12) ಎರಡು ಬಾರಿ ಆಯವ್ಯಯ ದಾಖಲೆಗಳ ಮುದ್ರಣ.

13) 2008ರ ರಾಜ್ಯ ವಿಧಾನಸಭೆ ಹಾಗೂ 2009ರ ಲೋಕಸಭಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ವಿವಿಧ ನಮೂನೆಗಳು, ಪುಸ್ತಕಗಳು, ವೋಟಿಂಗ್ ಯಂತ್ರಗಳ ಮತ ಪತ್ರಗಳು ಹಾಗೂ ಅಂಚೆ ಮತ ಪತ್ರಗಳ ಮುದ್ರಣ.

14) 5ನೇ ವೇತನ ಆಯೋಗದ ವರದಿಗಳ ಸಂಪುಟಗಳ ಮುದ್ರಣ.

**ಯೋಜನಾ ಕಾರ್ಯಕ್ರಮಗಳು:**

ಅ) ಯೋಜನಾ ಕಾರ್ಯಕ್ರಮಗಳಡಿಯಲ್ಲಿ 2008-09ನೇ ಸಾಲಿನಲ್ಲಿ ಕೇಂದ್ರ ಮುದ್ರಣಾಲಯ ಹಾಗೂ ಜಿಲ್ಲಾ ಮುದ್ರಣಾಲಯಗಳಲ್ಲಿ ದುರಸ್ತಿ ಕೆಲಸಗಳು, ಸಾಫ್ಟ್‌ವೇರ್ ಖರೀದಿ, ಹವಾನಿಯಂತ್ರಣಗಳ ಅಳವಡಿಕೆ ಮತ್ತು ಏಖಖಖಳಅ ಬಾಕಿ ಪಾವತಿಗಳು - ಮುಂತಾದ ಕೆಲಸಗಳನ್ನು ನಿರ್ವಹಿಸಲಾಗಿದೆ.

ಆ) ಸರ್ಕಾರಿ ಕೇಂದ್ರ ಮುದ್ರಣಾಲಯ ಮತ್ತು ಸರ್ಕಾರಿ ಜಿಲ್ಲಾ ಮುದ್ರಣಾಲಯಗಳ ಆಧುನೀಕರಣಕ್ಕಾಗಿ ಕಂಪ್ಯೂಟರ್‌ಗಳನ್ನು ಹಾಗೂ 4 ವರ್ಣಗಳಲ್ಲಿ ಮುದ್ರಿಸುವ ಡಿಜಿಟಲ್ ಯಂತ್ರವನ್ನು ಖರೀದಿಸಿ ಸ್ಥಾಪಿಸಲಾಗಿದೆ.

ಇ) ಹೆಚ್ಚು ಮುದ್ರಣ ಸಾಮರ್ಥ್ಯ ಹಾಗೂ ವೇಗ ಹೊಂದಿರುವ ಒಂದು ಆಧುನಿಕ ರೀತಿಯ ವೆಬ್ ಆಫ್‌ಸೆಟ್ ಯಂತ್ರವನ್ನು ಖರೀದಿಸಲಾಗಿದೆ.

**ಈ ಸಾಲಿನಲ್ಲಿ ಇಲಾಖೆಯ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು:**

1) ವಿವಿಧ ಸ್ಥಳಗಳಲ್ಲಿದ್ದ ನಿರ್ದೇಶನಾಲಯ ಮತ್ತು ಸರ್ಕಾರಿ ಕೇಂದ್ರ ಮುದ್ರಣಾಲಯ, ಲೇಖನ ಸಾಮಗ್ರಿ ಮಳಿಗೆಯ ಕಾರ್ಯಾಲಯಗಳನ್ನು ಹೊಸದಾಗಿ ನಿರ್ಮಿಸಿದ ಕಟ್ಟಡದಲ್ಲಿ ಸ್ಥಾಪಿಸಲಾಗಿದೆ.

2) ಕರ್ನಾಟಕ ರಾಜ್ಯಪತ್ರಗಳ ಹಿಂದಿನ ಸಾಲುಗಳ ಪ್ರತಿಗಳನ್ನು ಹುಡುಕುವ ಸೌಲಭ್ಯದೊಂದಿಗೆ ಡಿಜಿಟೈಸ್ ಮಾಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

3) ವಿಕಾಸ ಸೌಧದಲ್ಲಿ ಆಧುನಿಕ ಡಿಜಿಟಲ್ ಮುದ್ರಣಾಲಯ ಸ್ಥಾಪಿಸಿ, ಉತ್ತಮ ಗುಣಮಟ್ಟದಲ್ಲಿ ಕ್ಷಿಪ್ರವಾಗಿ ಪೂರೈಸಲಾಗುತ್ತಿದೆ.

4) ಬೆಲೆ ನಿಗದಿ / ಲೆಕ್ಕ ಪತ್ರ ಮತ್ತು ಇತರೆ ವಿಭಾಗಗಳ ಕಂಪ್ಯೂಟರೀಕರಣಗೊಳಿಸಿದೆ.

5) ಯಂತ್ರಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ರೀಕಂಡೀಷನಿಂಗ್ ಮಾಡಿಸಲಾಗುತ್ತಿದೆ.

6) ಆಧುನಿಕ ತಂತ್ರಜ್ಞಾನದ ಆಫ್‌ಸೆಟ್ ಮತ್ತು ಇತರೆ ಮುದ್ರಣ ಯಂತ್ರಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ.

7) ಇಲಾಖೆಯಲ್ಲಿನ ಲೇಖನ ಸಾಮಗ್ರಿಗಳ/ಪುಸ್ತಕ ಮಳಿಗೆಯಲ್ಲಿ ಪುಸ್ತಕ ಲಭ್ಯತೆಯ ಮಾಹಿತಿಗಳನ್ನು ಗಣಕೀಕರಿಸುವುದು.

8) ಶಾಲೆಗಳಿಗೆ ಪಠ್ಯಪುಸ್ತಕ ಮುದ್ರಣ.

9) ರಾಜ್ಯ ಆಯವ್ಯಯ ದಾಖಲೆ, ವಾರ್ಷಿಕ ವರದಿ, ವಿವಿಧ ಇಲಾಖೆಗಳ ಆಯವ್ಯಯ ನಿರ್ವಹಣಾ ವರದಿಗಳನ್ನು ಮುದ್ರಿಸುವುದು.

10) ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಐ.ಎಲ್.ಆರ್. ವರದಿಗಳನ್ನು ಮುದ್ರಿಸುವುದು (ಪಾಕ್ಷಿಕ).

11) ಪದವಿ ಪೂರ್ವ ಕಾಲೇಜುಗಳಿಗೆ ಉತ್ತರ ಪತ್ರಿಕೆ ಮತ್ತು ಪೂರಕ ಉತ್ತರ ಪತ್ರಿಕೆಗಳನ್ನು ಮುದ್ರಿಸುವುದು.

12) ಬಿ.ಬಿ.ಎಂ.ಪಿ. ಮತ್ತು ವಸತಿ ಮಂಡಳಿಗಳ ಅಧಿಸೂಚನೆಗಳ ಮುದ್ರಣ.

13) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಸ್ವೀಕೃತವಾದ ನಮೂನೆಗಳ ಮುದ್ರಣ.

14) ಲೋಕೋಪಯೋಗಿ ಇಲಾಖೆಯ ಟೆಂಡರ್ ದಾಖಲೆಗಳ, ವಿವಿಧ ಇಲಾಖೆಗಳಿಂದ ಸ್ವೀಕೃತವಾದ ಜ್ಯೇಷ್ಠತಾ ಪಟ್ಟಿಗಳ, ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆಗಳ/ನಮೂನೆಗಳ/ ಕಿರುಹೊತ್ತಿಗೆಗಳ ಮುದ್ರಣ.

15) 2010ರ ದಿನಚರಿ ಹಾಗೂ ಕ್ಯಾಲೆಂಡರ್ ಮುದ್ರಣ.

16) ವಿಧಾನ ಮಂಡಲದ ದಿನಚರಿ.

ಯೋಜನೆ ಮತ್ತು ಯೋಜನೇತರ ವೆಚ್ಚಕ್ಕಾಗಿ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ :

(ಮೊತ್ತ ರೂ ಲಕ್ಷಗಳಲ್ಲಿ)

| ವರ್ಷ | ಹಂಚಿಕೆ | ವೆಚ್ಚ |
|---|---|---|
| 2004–05 | 8322.76 | 8076.42 |
| 2005–06 | 6574.06 | 6502.38 |
| 2006–07 | 6679.77 | 6569.49 |
| 2007–08 | 8370.31 | 8135.54 |
| 2008–09 | 7426.87 | 5945.03 |

<u>ಮುಖ್ಯ ಧ್ಯೇಯಗಳು :</u>

- ಸರ್ಕಾರಿ ಕೇಂದ್ರ ಮುದ್ರಣಾಲಯ ಮತ್ತು ಅದರ ಇತರ ಕಛೇರಿಗಳಲ್ಲಿ ಮುದ್ರಣ ಹಾಗೂ ವಿತರಣಾ ಶಾಖೆಗಳ ಚಟುವಟಿಕೆಗಳನ್ನು ಗಣಕೀಕರಿಸುವುದು.
- ಸಿಟಿಪಿ, ವೆಬ್ ಆಫ್–ಸೆಟ್ ಇತ್ಯಾದಿ ಯಂತ್ರಗಳನ್ನು ಅಳವಡಿಸಿ, ಮುದ್ರಣ ಕಾರ್ಯವನ್ನು ಹೆಚ್ಚಿಸುವುದು.
- ಪುಸ್ತಕ ಮಳಿಗೆಗಳಲ್ಲಿ ಪ್ರತೀ ವರ್ಷ ಪ್ರಕಟವಾಗುವ ತಿದ್ದುಪಡಿ ಮತ್ತು ಪರಿಷ್ಕೃತ ಅಧಿನಿಯಮ ಮತ್ತು ನಿಯಮಗಳ ಕ್ರೋಢೀಕರಣಕ್ಕಾಗಿ ಒಂದು ಕೋಶವನ್ನು ಸೃಷ್ಟಿಸುವುದು.
- ಎಲ್ಲಾ ಪ್ರಕಾಶನಗಳನ್ನೂ ಅಂತರ್ಜಾಲದಲ್ಲಿ ಅಳವಡಿಸುವುದು.
- ಪೂರ್ಣ ಪ್ರಮಾಣದ ಲೇಖನ ಸಾಮಗ್ರಿಗಳನ್ನು ಆಧುನಿಕ ಉಪಕರಣಗಳೊಂದಿಗೆ ನಿರ್ವಹಿಸುವುದು.
- ಸರ್ಕಾರಿ ಕೇಂದ್ರ ಮುದ್ರಣಾಲಯ ಮತ್ತು ಜಿಲ್ಲಾ ಮುದ್ರಣಾಲಯಗಳಲ್ಲಿ ರಿಪೇರಿ ಕಾರ್ಯ, ಮೂಲ ಅವಶ್ಯಕತೆಗಳಾದ ಮಾರ್ಪಾಡು ಮತ್ತು ನಿರ್ವಹಣೆ.
- ಆಧುನೀಕರಣ ; ನಂ.1 ಗಣಕ ಯಂತ್ರಗಳ ಖರೀದಿ–ಸರ್ಕಾರಿ ಕೇಂದ್ರ ಗ್ರಂಥಾಲಯಗಳಲ್ಲಿ ಪ್ಲೇಟ್ ವ್ಯವಸ್ಥೆ ಅಳವಡಿಕೆ.
- 3 ಸೈಡ್ ಟ್ರಿಮ್ಮರ್ಸ್ / ಪರ್ಫೆಕ್ಟ್ ಬೈಂಡಿಂಗ್ ಯಂತ್ರ / ಸಿಂಗಲ್ ಬ್ಲೇಡ್ ಕಟಿಂಗ್ ಯಂತ್ರಗಳನ್ನು ಸರ್ಕಾರಿ ಕೇಂದ್ರ ಮುದ್ರಣಾಲಯ ಮತ್ತು ಜಿಲ್ಲಾ ಮುದ್ರಣಾಲಯಗಳಲ್ಲಿ ಅಳವಡಿಸುವುದು.